ಕನ್ನಡಶಾಲಾಪತ್ರಿಕೆ.

KANARESE
SCHOOL PAPER.

ಪುಸ್ತಕ ೨೫ನೇ.] ಜೂನ ೧೮೯೦. [ಸಂಚಿಕೆ ೬ನೇ.

ಅನುಕ್ರಮಣಿಕೆ. ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು... ... ೧೨೧
೨. ಕೋಹಿನೂರದ ಪೂರ್ವ ವೃತ್ತಾಂತ ೧೨೫
೩. ಅಮೇರಿಕದೊಳಗಿನ ಲೋಹಮಾರ್ಗದ ಆಶ್ಚರ್ಯವಾದ ಕೆಲಸಗಳು ೧೩೧
೪. ಫ್ರೋಬೆಲನ ಶಿಶು-ಶಿಕ್ಷಣಪದ್ಧತಿ... ... ... ೧೩೫
೫. ವಿದ್ಯಾಖಾತೆಯ ಸಂಬಂಧದ ನೋಟೀಸು ೧೩೭
೬. ಧಾರವಾಡ ಟ್ರೇನಿಂಗಕಾಲೇಜದ ಷಾಣ್ಮಾಸಿಕ ಪರೀಕ್ಷೆಯ ಶಿಕ್ಷಣಪದ್ಧತಿಯ ಪ್ರಶ್ನೆಗಳು... ... ... ೧೪೦

CONTENTS.

1. Educational Intelligence and Useful Notes.....121
2. The History of the Kohinur 125
3. The Wonderful Railway Works in America...131
4. Froebel's Kinder-Garten System.....135
5. Departmental Notice 137
6. Dharwar Training College Terminal Examination Questions on Method.....140

DHARWAR:
PRINTED AT THE KARANTIC BOOK DEPOT PRESS,
1890.

ನೋಟೀಸು.

ತಾಲೂಕ ಮಾಸ್ತರರು ತಮ್ಮ ತಮ್ಮ ತಾಲೂಕಿನೊಳಗಿನ ಶಾಲೆಗಳ ವರ್ಗಣಿಯನ್ನು ಕಳುಹಿಸುವಾಗ ಆ ಶಾಲೆಗಳ ಹೆಸರುಗಳನ್ನು ಬರೆಯುವದಿಲ್ಲ. ಹೀಗೆಮಾಡುವದರಿಂದ ನಮ್ಮ ಲೆಕ್ಖಿಕೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ, ಅವರು ತಮ್ಮ ತಾಲೂಕಿನೊಳಗಿನ ಯಾವ ಯಾವ ಶಾಲೆಯಿಂದ ಎಷ್ಟೆಷ್ಟು ವರ್ಗಣಿ ಬಂತೆಂಬದರ ವಿವರವನ್ನ ಅವಶ್ಯವಾಗಿ ತಿಳಿಸಬೇಕು.

ತಾರೀಖು ೩೦ನೇ ಮೇ ಜೂನ ಸನ ೧೮೯೦ನೇ ಇಸವಿ.

(Signed) R. B. KARANDIKAR,
ವ್ಯವಸ್ಥಾಪಕ, ಕ. ಶಾ. ಪತ್ರಿಕೆ.

ಪುಸ್ತಕ ಮಾರಲಿಕ್ಕೆ ಸಿದ್ಧವಾಗಿದೆ.

ಶಬ್ದಮಂಜರಿ ಕೋಶವು:—ಈ ಪುಸ್ತಕವನ್ನು ಕೈ. ವಾ. ಗಂ ಗಾಧರ ಮಡಿವಾಳೇಶ್ವರ ತೂರಮುರಿ ಇವರು ರಚಿಸಿದ್ದು, ಇದರ ಪ್ರತಿಗಳು ಈಗ ಜನರಿಗೆ ಶಿಗುವದು ದುರ್ಲಭವಾದ್ದರಿಂದ, ಅದನ್ನು ಒಳ್ಳೇ ದಪ್ಪ ಕಾಗದದ ಮೇಲೆ ಸುವಾಚ್ಯ ಮೊಳೆಗಳಿಂದ ಛಾಪಿಸಿ, ಮೊದಲಿಗಿಂತಲೂ ೫೦೦೦ ಶಬ್ದಗಳನ್ನೂ ಶಬ್ದವ್ಯುತ್ಪತ್ತಿಯನ್ನೂ ಹೆಚ್ಚಿಗೆ ಹಾಕಿ ತಯಾರು ಮಾಡಿದ್ದೇವೆ. ಅದರ ಬೆಲೆ ೪ ರೂಪಾಯಿ, ಟಪಾಲ ಹಾಸಲು ೪ ಆಣೆ. ಪುಸ್ತಕವು ಸಂಗ್ರಹಕ್ಕೆ ಎಷ್ಟು ಯೋಗ್ಯವಾದದ್ದೆಂಬದು ಇದನ್ನು ನೋಡಿದರೆ ತಿಳಿಯುವದು.

ಧಾರವಾಡ,
28–4–90.

ಚನ್ನವೀರ ಫಕೀರಪ್ಪ,
ಪ್ರೊಪ್ರೈಟರ್, ಕರ್ನಾಟಕ ಬುಕ್‌ಡಿಪೋ ಪ್ರೆಸ್

ಶಾಲಾಪತ್ರಕ.

ಪದ್ಯ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಬಯಸುತ್ತಂ ಪ್ರತಿವಾಸದಾವಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯವಿಂದಿತ್ತಪೆವೀದುವರ್ಗಿ ಸುಗುಣಂ ತೋರಲ್ತೆಕ್ಕೆಕೊಂಬುಗೈ ।
ಪಯಿಯಿಂ ದೋಷವತಿದ್ದನೇಳ್ವುದುಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ॥೧॥

ಪುಸ್ತಕ ೨೫.] ಜೂನ ೧೮೮೧. [ಸಂಚಿಕೆ ೬.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧವ ವೃತ್ತಾಂತಗಳು.

ಪುಣೇ ಪಟ್ಟಣವ ಮ್ಯುನಿಸಿಪಾಲಿಟಿಯವರು ತಮ್ಮ ಕೈಕೆಳಗಿನ ಸ್ಕೂಲ್ ಮಾಸ್ತರರಲ್ಲಿ ಯಾವದೊಂದು ವಿಷಯವನ್ನು ಉತ್ತಮರೀತಿಯಿಂದ ಕಲಿಸುವ ಮಾಸ್ತರನಿಗೆ ಕೊಡುವವಕ್ಕಾಗಿ, ಪ್ರತಿಯೊಂದು ವಿಷಯಕ್ಕೆ ಹತ್ತು ಹತ್ತು ರೂಪಾಯದ ಇನಾಮುಗಳನ್ನು ಇಟ್ಟಿದ್ದರು. ಮತ್ತು ಆ ಇನಾಮುಗಳನ್ನು ಯಾರು ಯಾರಿಗೆ ಕೊಡತಕ್ಕದ್ದೆಂಬದನ್ನು ನಿರ್ಣಯಿಸುವವಕ್ಕೆ ಬಲ್ಹಾಡಪ್ರಾಂತದ ನಿರೀಕ್ಷಕರಾದ ರಾವಬಹಾದೂರ ಶ್ರೀರಾಮ ಫಿಕಾಜೀ ಜವಾರ, ಪುಣೇ ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರಾದ ರಾವಸಾಹೇಬ ವಿಷ್ಣು ಬಾಳಕೃಷ್ಣ ಸೋಹನಿ, ರಾವಸಾಹೇಬ ಬೇವೆಹರ, ಈ ಮೂವರು ಸಭ್ಯಗೃಹಸ್ಥರ ಕಮಿಟಿಯನ್ನು ನೇಮಿಸಿದ್ದರು. ಈ ಪರೀಕ್ಷೆಯು ಒಳಗಣಿಯಲ್ಲಿ ಲಿಖಿತ, ಗಣಿತ, ಭಾಷಾ,

ಇತಿಹಾಸ ಈ ವಿಷಯಗಳನ್ನು ಚನ್ನಾಗಿ ಕಲಿಸಿದ ಬಗ್ಗೆ ಮೂ
ನೇ ನಂಬರ ಶಾಲೆಯ ಹೆಡ್‌ಮಾಸ್ತರನಾದ ರಾ. ಕೃಷ್ಣಾಜೀ
ರೀ ಎಂಬವನಿಗೂ, ಮೂಲಾಕ್ಷರದ ವರ್ಗವನ್ನು ಕಲಿಸಿದ
ಗ್ಗೆ ಎರಡನೇ ನಂಬರ ಶಾಲೆಯ ಅಸಿಸ್ಟಂಟ ಮಾಸ್ತರನಾದ
ರಾ. ಗಣೇಶ ಬಾಬಾಜೀ ಪಾನಸೇ ಎಂಬವನಿಗೂ, ಇನಾಮು
ಳು ದೊರೆದವು. ಇವರ ಅನುಕರಣವನ್ನು ಉಳಿದ ಮ್ಯುನಿಸಿ
ಪಾಲಿಟಿಯವರು ಮಾಡಿದರೆ, ಶಿಕ್ಷಕರಿಗೆ ಬಳ್ಳೀ ಉತ್ತೇಜನದೊ
ದಿದು, ಶಾಲೆಗಳುಜನ್ನಾಗಿ ಸುಧಾರಿಸುವವೆಂದು ತೋರುತ್ತದೆ.

ಅಹಮ್ಮದಾಬಾದಿನಲ್ಲಿ ಹೊರಡುವ ಬಂದು ವರ್ತಮಾನ
ಪತ್ರದಿಂದ ತಿಳಿಯುವದೇನೆಂದರೆ:—ಮಹೀಕಾಂಠಾದ ಡಿಪ್ರುಟಿ
ಎಜ್ಯುಕೇಶನಲ್ ಇನ್‌ಸ್ಪೆಕ್ಟರನ ಮೇಲೆ ದುರ್ವರ್ತನದ ತಪ್ಪು
ಎಂವದ್ದರಿಂದ, ವಿದ್ಯಾಖಾತೆಯ ಅಧಿಕಾರಿಗಳು ಅವನ್ನು ವಿಚಾ
ರಿಸಿ, ಅವನ ಸಂಬಳವನ್ನು ಕಡಿಮೆಮಾಡಿ, ಅವನು ಮೊದಲು
ಕೆಲಸಮಾಡುತ್ತಿದ್ದ ಕೇರಾ ಎಂಬಲ್ಲಿಯೂ ಅಂಗ್ಲೋ ವರ್ನ್ಯಾ
ಕ್ಯುಲರ್ ಸ್ಕೂಲಿನ ಹೆಡ್ ಮಾಸ್ತರನ ಕೆಲಸಕ್ಕೆ ೬೦ ರೂಪಾಯಿದ
ಕೀಲಿ ತಿರುಗಿ ಕಳುಹಿಸಿದರು. ಅವನ ಮೇಲೆ ಬಂದ ತಪ್ಪುಗ
ಳು ಯಾವವೆಂದರೆ:—'ಬುಕ್ಕಕಮಿಟಿ' ಯವರು ಮಾನ್ಯಮಾ
ಡಿದಂಥ, ತನ್ನ ಸ್ನೇಹಿತನು ತಯಾರು ಮಾಡಿ ಛಾಪಿಸಿದಂಥ
ಪುಸ್ತಕಗಳನ್ನು ತನ್ನ ಜಿಲ್ಲೆಯೊಳಗಿನ ಶಾಲೆಗಳಲ್ಲಿ ಇನಾಮು
ಕೊಟ್ಟದ್ದು; ಮಾಸ್ತರರಿಂದ ಕೆಲವು ಜೀನಸುಗಳನ್ನು ತರಿಸಿ
ಕೊಂಡು ಅವುಗಳ ಯೋಗ್ಯವಾದ ಬೆಲೆಯನ್ನು ಕೊಡದೆ ಇದ್ದ
ದ್ದು; ತಾನು ಬೇಡಿದ್ದು ಕೊಡದೆ ಇದ್ದ ಮಾಸ್ತರರ ಮೇಲೆ
ಮೇಲಧಿಕಾರಿಗಳ ಹತ್ತಿರ ರಿಪೋರ್ಟು ಮಾಡಿದ್ದು; ತನ್ನ ಕಾರ

ಕೂನನಿಗೆ ಎಷ್ಟೋ ಸಾಲಿಗಳ ಪರೀಕ್ಷೆ ತಕ್ಕೊಳ್ಳಲಿಕ್ಕೆ ಹಚ್ಚಿದ್ದು; ಪರೀಕ್ಷೆಯೊಳಗಿನ ಉತ್ತರದ ಕಾಗದಗಳನ್ನು ತಾನೆ ಸ್ವತಃ ನೋಡದೆ ನೋಡಿದೆನೆಂದು ಪ್ರಮಾಣಮಾಡಿ ಸಹಿ ಹೇಳಿದ್ದು; ಅನ್ಯಾಯದಿಂದ ಭತ್ತೆ ತೆಗೆದುಕೊಂಡದ್ದು. ಈ ಡಿಪ್ರಟಿ ಇನ್‌ಸ್ಪೆಕ್ಟರನು ಮೊದಲನೇ ತಪ್ಪು ಬಿಪ್ಪಿಕೊಂಡಿದ್ದಾನೆಂತಲೂ ಇನಾಮಿನ ಪುಸ್ತಕಗಳ ಯಾದಿಯು ಮೇಲಿಂದ ಈ ತಪ್ಪು ಅವನ ಮೇಲೆ ಹೊತ್ತಿತೆಂತಲೂ, ಆ ವರ್ತಮಾನ ಪತ್ರದಿಂದ ತಿಳಿಯುತ್ತದೆ. ಮೈಯಲ್ಲಿ ನೆಟ್ಟಗಿಲ್ಲದ್ದರಿಂದ ನಾನು ಕಾರಕೂನನಿಗೆ ಸಾಲಿಗಳ ಪರೀಕ್ಷೆ ತೆಗೆದುಕೊಳ್ಳಲಿಕ್ಕೆ ಹಚ್ಚಿದೆನೆಂದು ಅವನು ತನ್ನ ವಿಚಾರಣೆ ನಡೆದಾಗ್ಗೆ ಬಳ್ಳೇ ಆಗ್ರಹದಿಂದ ಹೇಳಿಕೊಂಡನಂತೆ!

ಈಗ ಇಂಗ್ಲಂಡದಿಂದ ಹಿಂದುಸ್ಥಾನದೊಳಗಿನ ಯಾವ, ಬೇಕಾದ ಸ್ಥಳಕ್ಕೆ ತಂತಿಯಿಂದ ವರ್ತಮಾನ ಮುಟ್ಟಲಿಕ್ಕೆ ಬಂದೂವರೆ ತಾಸಿಗಿಂತ ಹೆಚ್ಚು ಹೊತ್ತು ಹಿಡಿಯುವದಿಲ್ಲ.

ಬಂಪೊಂದು ಗ್ರಂಥದಿಂದಾಗುವ ಮಿತಿಮೀರಿದ ದ್ರವ್ಯ ಲಾಭವು.—ಪಾಪೆಟನೆಂಬ ಗ್ರಂಥಕರ್ತನಿಗೆ 'ಸ್ಯಾಫೊ' ಎಂಬ ದೊಂದೇಗ್ರಂಥಕ್ಕಾಗಿ ನಾಲ್ವತ್ತುಸಾವಿರ ಪೌಂಡು ದೊರೆದವು. ಲಾರ್ಡ ಮೆಕಾಲೆ ಎಂಬವನಿಗೆ ಇಂಗ್ಲಂಡದ ಇತಿಹಾಸವನ್ನು ಬರೆವದಕ್ಕಾಗಿ ಸುಮಾರು ಮೂವತ್ತುಸಾವಿರ ಪೌಂಡು ದೊರೆದವು. ಥೀಯರ್ಸನೆಂಬ ಪ್ರಸಿದ್ಧ ಫ್ರೆಂಚ ಇತಿಹಾಸಕಾರನಿಗೆ ಫ್ರಾನ್ಸದೇಶದ ಇತಿಹಾಸವನ್ನು ರಚಿಸಿದ್ದಕ್ಕೆ ಇಪ್ಪತ್ತುಸಾವಿರ ಪೌಂಡು ದೊರೆದವು. ವಿಕ್ಟರ ಹ್ಯೂಗೋ ಎಂಬ ಜಗಪ್ರಸಿದ್ಧನಾದ ಫ್ರೆಂಚ ಕವಿಗೆ ಬಂಧು ಗ್ರಂಥವಾಡಿದ್ದಕ್ಕೆ ಹದಿನಾರುಸಾವಿರ

ಪೌಂಡು ದೊರೆದವು. (ಈ ಗ್ರಂಥವನ್ನು ಮುಗಿಸಲಿಕ್ಕೆ ಅವನಿಗೆ ಇಪ್ಪತ್ತುಮೂರು ವರ್ಷಗಳು ಹತ್ತಿದವು.) ಸರ್ ವಾಲ್ಟರ್ ಸ್ಕಾಟ್ಟನಿಗೆ ನೆಪೋಲಿಯನ್ನನ ಚರಿತ್ರವನ್ನು ಬರೆದದ್ದಕ್ಕೆ ಹದಿನೆಂಟುಸಾವಿರ ಪೌಂಡು ದೊರೆದವು. ಲೌರ್ಡ ಬೀಕನ್ಸ್‌ಫೀಲ್ಡನಿಗೆ 'ಎಂಡಿಮಿಯನ್' ಎಂಬ ಕಾದಂಬರಿಯ ಬಗ್ಗೆ ಹನ್ನೆರಡು ಸಾವಿರ ಪೌಂಡು ದೊರೆದವು. ಗಿಬನ್ನನಿಗೆ ರೋಮನ ಇತಿಹಾಸವನ್ನು ಬರೆದದ್ದಕ್ಕೆ ಹತ್ತುಸಾವಿರ ಪೌಂಡು ದೊರೆದವು. ಜಾರ್ಜ ಇಲಿ ಅವ ಎಂಬ ಸ್ತ್ರೀಗೆ 'ರೋಮೋಲಾ' ಎಂಬ ಕಾದಂಬರಿಯನ್ನು ರಚಿಸಿದ್ದಕ್ಕೆ ಹತ್ತುಸಾವಿರ ಪೌಂಡು ದೊರೆದವು.

ಹಿಂದುಸ್ಥಾನದೊಳಗೆ ಈಗ ಒಟ್ಟಿಗೆ ಅರುವತ್ತರೊಂಬತ್ತು ಕಲ್ಲಿದ್ದಲಿಯ ಕಣಿಗಳುಂಟು. ಇವುಗಳಲ್ಲಿ ಅರುವತ್ತೆರಡು ಕಣಿಗಳು ಬಂಗಾಲ ಪ್ರಾಂತವಲ್ಲಿದ್ದು, ಅಲ್ಲಿ ಇಪ್ಪತ್ತೈದುಸಾವಿರ ಜನರು ಕೆಲಸ ಮಾಡುತ್ತಾರೆ. ಈ ಕಣಿಗಳಿಂದ ಕಳೆದ ಹತ್ತು ವರ್ಷಗಳಲ್ಲಿ ಮೊದಲಿನ ಎರಡಷ್ಟು ಇದ್ದಲಿ ಹೊರಡುತ್ತದೆ.

ಭೂಮಿಯ ಮೇಲೆ ಒಟ್ಟಿಗೆ ೧೫೦೦ ಬೇರೆ ಬೇರೆ ಧರ್ಮಗಳುಂಟು.

ರಾಜಕೀಯ ವಿಷಯಗಳ ಸಂಬಂಧದಿಂದ ನೆರೆಯುವ ಕಾಂಗ್ರೆಸ್ (ರಾಷ್ಟ್ರೀಯ ಸಭೆ) ಮುಂತಾದ ಸಭೆಗಳಿಗೆ ಸರಕಾರೀ ನೌಕರರು ಹೋಗಕೂಡದೆಂದು ಕಳೆದ ಏಪ್ರಿಲ ತಿಂಗಳಲ್ಲಿ ಹಿಂದುಸ್ಥಾನ ಸರಕಾರದವರು ಠರಾವು ಮಾಡಿ ಪ್ರಕಟಿಸಿದ್ದಾರೆ.

ವಿಲಾಯತಿಯಲ್ಲಿ ಸರ ರಿಚರ್ಡ ವೆಬ್‌ಸ್ಟ್ಟರನೆಂಬವನೊಬ್ಬ ಅತಿ ಪ್ರಖ್ಯಾತನಾದ ಬ್ಯಾರಿಸ್ಟ್ಟರನು ಇದ್ದಾನೆ. ಅತನ ಆದಾಯವು ಇತ್ತ ಕಡೆಗೆ ಮಿತಿಮೀರಿ ಬೆಳೆದದ್ದರಿಂದ, ಅತನು ತನ್ನ ಮುಖ್ಯ ಕಾರಕೂನನಿಗೆ ವರುಷಕ್ಕೆ ಇಪ್ಪತ್ತೈದು ಸಾವಿರ ರೂಪಾಯಿ ಸಂಬಳ ಕೊಡುತ್ತಾನಂತೆ!

THE HISTORY OF THE KOHINUR.

ಕೋಹಿನೂರದ ಪೂರ್ವವೃತ್ತಾಂತ.

ಯಾವತ್ತು ವಜ್ರಗಳಲ್ಲಿ ಕೋಹಿನೂರಎಂಬದು ಇತಿಹಾಸದಲ್ಲಿ ಬಹು ಪ್ರಸಿದ್ಧವಾದದ್ದು. ಮಹಾಭಾರತದೊಳಗೆ ವರ್ಣಿಸಲ್ಪಟ್ಟ ಶೂರ ಅರಸನಾದ ಕರ್ಣನ ಬಳಿಯಲ್ಲಿ ಈ ಅಪೂರ್ವ ರತ್ನವಿತ್ತು. ಅಲ್ಲಿಂದ ವಿಕ್ರಮಾದಿತ್ಯರಾಜನ ವಂಶಸ್ಥರ ಬಳಿಯಲ್ಲಿ ಈ ವಿಜಯ ರತ್ನವು ಸಾವಿರಾರು ವರ್ಷ ಇತ್ತು. ಇದೇ ವಂಶದೊಳಗಿನ ವಿಕ್ರಮಾದಿತ್ಯ (ವಿಕ್ರಮಜಿತ?) ನೆಂಬ ಅರಸು ಹಾನಿಪತದ ಯುದ್ಧದಲ್ಲಿ (೧೫೦೬)ಪರಾಜಿತನಾದ ಬಳಿಕ, ಹ್ಯುಮಾಯೂನನೆಂಬ ಬಾದಷಹನು ಅವನ ರಾಜ್ಯದ ಮೇಲೆ ದಂಡೆತ್ತಿ ಹೋಗಿ, ಗ್ವಾಲ್ಲೇರದ ಅಗಸೀಬಾಗಲವರೆಗೆ ಅವನ ಪ್ರಾಂತ ವನ್ನೆಲ್ಲ ಆಕ್ರಮಿಸಿದನು. ಆದರೂ, ಸುಲಿಗೆ ಸೂರೆ ಮುಂತಾದ್ದನ್ನೇನೂ ಮಾಡಲಿಲ್ಲ. ಪರಾಜಿತನಾದ ಅರಸನಕಡೆಯ ಜನರು ಶರಣು ಬಂದರು. ಮತ್ತು ಕೋಹಿನೂರ ಎಂಬ ದಿವ್ಯರತ್ನವು ಬಾದಷಹನಿಗೆ ಕಾಣಿಕೆಯಾಗಿ ಕೊಡಲ್ಪಟ್ಟಿತು. ಮುಂದೆ ಎಪ್ಪತ್ತೇ ವರ್ಷಗಳವರೆಗೆ ಮೊಗಲ ಬಾದಷಹರ ವಂಶದೊಳಗೆ ಈ ವಜ್ರವು ಉಳಿಯಿತು. ಶಹಾಜಹಾನನ ಮನಸ್ಸಿನಲ್ಲಿ ತಾನು ಸಾದು

ವಕಾಲಕ್ಕೆ ಬೊಕ್ಕಸದೊಳಗಿನ ಯಾವತ್ತು ರತ್ನಗಳನ್ನು ನಾಶ ಮಾಡಿ ಬಿಡಬೇಕೆಂತಲೂ, ಔರಂಗಜೇಬನ ಕೈಗೆ ಏನೂ ಹತ್ತ ಗೊಡಬಾರದೆಂತಲೂ ಇತ್ತು; ಆದರೆ, ಆತನ ಮೋಹದ ಮಗ ಳಾದ ಬೇಗಮ್ಮು ಎಂಬವಳು ಹಾಗೆ ಮಾಡಗೊಡಲಿಲ್ಲ. ಬಾದಷಹ ನು ತೀರಿದ ಬಳಿಕ, ಔರಂಗಜೇಬನು ಹೊರಟು ಆಗ್ರಾ ಪಟ್ಟ ಣಕ್ಕೆ ಬೇಗಮ್ಮು ಎಂಬಾಕೆಯ ಕಡೆಗೆ ಬಂದನು. ಆಕೆಯು ಔರಂ ಗಜೇಬನಿಗೆ ಬಹುಮಾನಮಾಡಿ, ತನ್ನ ವಶವಲ್ಲಿದ್ದ ಯಾವತ್ತು ರತ್ನಗಳನ್ನೂ ಶಹಾಜಹಾನನ ರತ್ನಗಳನ್ನೂ ಬಂದು ಬಂಗಾರ ದ ಹರಿವಾಣದೊಳಗೆ ಹಾಕಿ, ಕಾಣಿಕೆ ಕೊಟ್ಟಳು. ಆ ರತ್ನಗಳಲ್ಲಿ ಕೋಹಿನೂರ ಎಂಬ ದಿವ್ಯರತ್ನವೂ ಇತ್ತು. ಔರಂಗಜೇಬನು ರತ್ನಖಚಿತನಾವಬುಂ ದೊಡ್ಡ ಮಯೂರಾಸನವನ್ನು ಮಾಡಿಸಿ ದನು. ಮಯೂರದ ರೆಕ್ಕೆಗಳನ್ನು ಉತ್ಕೃಷ್ಟವಾದ ರತ್ನಗಳಿಂ ದ ಕೆಚ್ಚಿಸಿ, ಅದರ ಕಣ್ಣಿನೊಳಗೆ ಕೋಹಿನೂರವನ್ನು ಕೂಡ್ರಿ ಸಿದನು. ಮುಂದೆ ಸನ್ ೧೭೩೯ರಲ್ಲಿ ನಾದಿರಶಹನು ಹಿಂದುಸ್ಥಾನ ದಮೇಲೆ ದಾಳಿಮಾಡಿ, ಮಯೂರಾಸನವನ್ನು ಬಿಡಿಮು, ಸೂಪಿರಾ ರು ವಜ್ರ, ಪಚ್ಚ, ಮಾಣಿಕಗಳನ್ನು ತಕ್ಕೊಂಡಾಗ್ಯೂ, ಅವನಿಗೆ ಆ ದಿವ್ಯರತ್ನವು ದೊರೆಯಲಿಲ್ಲ. ನಾದಿರಶಹನು ರಾಯಬೊಕ್ಕಸ ವನ್ನೆಲ್ಲ ಸೂರೆಮಾಡಿ, ಬಾದಷಹನೊಡನೆ ಒಡಂಬಡಿಕೆ ಮಾಡಿದ್ದ ರಿಂದ, ತಿರುಗಿ ಈದನ ಹೂಡಲಿಕ್ಕೆ ಯೋಗ್ಯವಾದಕಾರಣವಿದ್ದಿ ಲ್ಲ. ಮುಂದೆ ಅವನು ಸೂಕ್ಷ್ಮರೀತಿಯಿಂದ ಶೋಧಮಾಡಲಾಗಿ, ಮಹಮ್ಮದ ಬಾದಷಹನು ಯಾವಾಗಲೂ ತನ್ನ ಶಿರೋಭೂ ಷಣದೊಳಗೆ ಆ ವಜ್ರವನ್ನು ಧರಿಸುತ್ತಾನೆಂತಲೂ ಬುಂದು ನಿಮಿ ಷವಾದರೂ ಅದನ್ನು ಅಗಲಿ ಇರುವದಿಲ್ಲೆಂತಲೂ ನಾದಿರಶಹನಿ ಗೆ ತಿಳಿಯಿತು. ಬಳಿಕ, ನಾದಿರಶಹನು ಮಾಡಿದ ಹಂಚಿಕೆಯು

ಯೊಮ್ಮೆಯೊಂದರೆ:—ದೊಡ್ಡ ದೊಂದು ವರಬಾರವನ್ನು ಕೊಡಿಸಿ, ಮಹಮ್ಮದ ಬಾದಷಹನನ್ನು ತಿರುಗಿ ಪಟ್ಟಗಟ್ಟಿ, ಸ್ನೇಹವನ್ನೂ ಸಂತೋಷವನ್ನೂ ತೋರಿಸುವದಕ್ಕಾಗಿ, ನಿಮ್ಮ ಮನೆಯವನಲ್ಲಿ ನಡೆಯುತ್ತಾಬಂದ ನಡಾವಳಿಯಂತೆ ನಮ್ಮಿಬ್ಬರ ಶಿರೋಭೂಷಣಗಳನ್ನು ಅದಲು ಬದಲು ಮಾಡೋಣವೆಂದು ಹೇಳಿದನು. ಈ ಬಹುಮಾನವು ಬಾದಷಹನ ಹೊರ್ತು ಉಳಿದ ಯಾವತ್ತು ಜನರ ಮನಸ್ಸಿಗೆ ಬಂತು. ಬಾದಷಹನು ಒಳ್ಳೇ ಪೇಚಾಟದೊಳಗೆ ಬಿದ್ದನು. ಆದಾಗ್ಯೂ, ಅವನು ತನ್ನ ಮುಖ ಮುದ್ರೆಯನ್ನು ಸ್ವಲ್ಪಾವರೂ ಬದಲಿಸದೆ,—'ಒಳ್ಳೇದು ಯಾಕಾಗಬಾರ್ದೆಲ್ಲದು'—ಎಂದು ಸಂಗಡಲೇ ಉತ್ತರಕೊಟ್ಟನು. ನಾದಿರಷಹನು ತನ್ನ ರತ್ನಖಚಿತವಾದ ಮುಂದೀಲವನ್ನು ಬಾದಷಹನಿಗೆ ಕೊಡಲು, ಬಾದಷಹನು ತೋರಿಕೆಯಲ್ಲಿ ಅವಕ್ಕೂ ಬಹಳ ಕಡಿಮೆ ಬೆಲೆಯುಳ್ಳದ್ದಿದ್ದರೂ, ನಿಜವಾಗಿ ಅತಿಶಯ ಅಮೂಲ್ಯವಾದ ಶಿರೋವಸ್ತ್ರವನ್ನು ನಾದಿರಷಹನಿಗೆ ಅರ್ಪಿಸಿದನು. ಈ ಮೇರೆಗೆ ನಾದಿರಷಹನು ಮಹಮ್ಮದಷಹನಿಗೆ ಕಾಡಷಹಕೊಟ್ಟು ತನ್ನ ಮನೋರಥವನ್ನು ಸಾಧಿಸಿಕೊಂಡನು. ಆ ದಿವಸದಾರಭ್ಯ ಆ ರತ್ನಕ್ಕೆ 'ಕೋಹಿನೂರ' ಎಂಬ ಹೆಸರು ಬಿದ್ದದೆ. ನಾದಿರಷಹನು ತಿರುಗಿ ಹೋಗುವಾಗ ಕೋಹಿನೂರವನ್ನು ತನ್ನ ಸಂಗಡ ತಕ್ಕೊಂಡು ಹೋದನು. ಈ ವಜ್ರದ ಸಲುವಾಗಿ ಮುಂದೆ ಅನೇಕ ಬಾದಷಹರಿಗೆ ಎಷ್ಟೋ ಸಂಕಟಗಳು ಬದಗಿದ್ದಲ್ಲದೆ, ಅವರು ಬಹಳ ಕಷ್ಟಪಡಬೇಕಾಯಿತು. ನಾದಿರಷಹನ ಮಗನಾದ ಷಹಾಶೇಖುನನ್ನು ಲಗಾಮುಹಮ್ಮದನೆಂಬವನು ಈ ವಜ್ರಕ್ಕಾಗಿ ಬಹಳ ಪೀಡಿಸಿ, ಅವನ ಕಣ್ಣು ಕಿತ್ತಿಸಿದನು. ಆದರೂ, ಷಹಾಶೇಖುನು ಆ ವಜ್ರವನ್ನು ಕೊಡಲಿಲ್ಲ. ಆದದರಿಂದ, ಅವನು ಬಹಳ

ಸಿಟ್ಟಗೆದ್ದು, ಶಹಾಶೇಖನ ತಲೆಬೋಳಿಸಿ, ಮೇಲೆ ಸುಡು ಸುಡುವ ಎಣ್ಣೆಯನ್ನು ಸುರುವಿದನು. ಆದರೂ, ಅವನಿಗೆ ಕೋಹಿನೂರವು ದೊರೆಯಲಿಲ್ಲ. ಮುಂದೆ ಅಹಮ್ಮದಶಹ ದುರಾಣಿಯು ಶಹಾಶೇಖನ ಸಹಾಯಕ್ಕೆ ಬಂದನು. ಆವರೆ ಅಷ್ಟರೊಳಗೆ ಶಹಾಶೇಖನು ಮಡಿದು ಹೋದನು. ಮತ್ತು ಸಾಯುವಾಗ ಕೋಹಿನೂರವನ್ನು ಅಹಮ್ಮದಶಹನಿಗೆ ಕೊಟ್ಟನು.

ಮೊಗಲ ಬಾದಷಹರಂತೆ ದುರಾಣೀ ಮನೆತನವಲ್ಲಿಯೂ, ನಾದಿರಶಹನ ವಂಶದಲ್ಲಿಯೂ, ಕೋಹಿನೂರ ರತ್ನದ ಸಲುವಾಗಿ ಮೇಲಿಂದ ಮೇಲೆ ಅನರ್ಥಗಳು ಬವಗಿದವು. ಕೋಹಿನೂರ ಮಂಥ ಅತಿಪವಿತ್ರವಾದ ವಜ್ರವನ್ನು ರಕ್ತದ ಕೈಯಿಂದ ಬಲಾತ್ಕಾರದಿಂದ ತಕ್ಕೊಳ್ಳುವವರಿಗೆ ಕೇವಲ ಸಂಕಟಗಳನ್ನೇ ಸಹಿಸ ಬೇಕಾಯಿತು. ಅಹಮ್ಮದನ ಮೊಮ್ಮಗನಾದ ಶಹಜಮಾನನನ್ನು ಶಹಸುಜಾ ಉಲ್ಮುಲ್ಕನು ಪಟ್ಟದಿಂದ ತಳ್ಳಿದನು. ಅತಿ ನಿರ್ದಯದಿಂದ ಬಾದಷಹನು ಕಣ್ಣುಗಳನ್ನು ತೆಗಿಸಿ, ಅವನನ್ನು ಕೆರೆಮನೆಯಲ್ಲಿಟ್ಟನು. ಇದೇ ಕೆರೆಮನೆಯಲ್ಲಿ, ಮುಂದೆ ಎಷ್ಟೋ ದಿವಸಗಳಾದಮೇಲೆ ಕೋಹಿನೂರವು ದೊರೆಯಿತು. ಶಹಾಜಮಾನನು ಕೆರೆಮನೆಯಲ್ಲಿರುವಾಗ ಗೋಡೆಯೊಳಗೆ ಆ ದಿವ್ಯ ರತ್ನವನ್ನಿಟ್ಟರೆ ಸುರಕ್ಷಿತವಾಗಿರುವದೆಂದು ತಿಳಿದು, ಆ ವಜ್ರವನ್ನು ಒಳಗೆ ಇಟ್ಟು, ಗೋಡೆಯನ್ನು ಮೆತ್ತಿದನು. ಕೆಲವು ದಿವಸಗಳಾದ ಬಳಿಕ, ಗೋಡೆ ಒಡೆದು ಮೆತ್ತಿಗೆಯು ಹಕ್ಕಳೆಯು ಕಳಚಿ ಬಿದ್ದದ್ದರಿಂದ, ಒಳಗಿನ ರತ್ನವು ಥಳಥಳ ಹೊಳೆಯುತ್ತಿತು. ಈ ಸುದ್ದಿಯು ಅಲ್ಲಿಯ ಅಧಿಕಾರಿಗೆ ತಿಳಿದ ಕೂಡಲೆ, ಅವನು ಸ್ವತಃ ಹೋಗಿ ಸ್ವಲ್ಪ ಹೆಚ್ಚಿಗೆ ಕೆದರಿ ನೋಡಲಾಗಿ, ಕೋಹಿನೂರ (ಬೆಳಕಿನ ಪರ್ವತ) ವು ಅವನ ದೃಷ್ಟಿಗೆ ಬಿತ್ತು.

ಶಹಾಸೂಜನಿಗೆ ಆ ದಿವ್ಯ ರತ್ನವು ದೊರೆದಮೇಲೆ, ಅತನು ಅದರದೊಂದು ಉತ್ಕೃಷ್ಟವಾದ ಕಂಠಿಯನ್ನು ಮಾಡಿಸಿದನು.

ಇನ್ನು ಸಂಕಟಗಳನ್ನು ಸಹಿಸುವದು ಶಹಾಸೂಜನ ಪಾಲಿಗೆ ಬಂತು. ಶಹಮಹಮ್ಮದನು ಶಹಸೂಜನನ್ನು ಪಟ್ಟದಿಂದ ತಳ್ಳಿ, ಅವನ ಕಣ್ಣು ಕಿತ್ತಿಸಿದನು. ಶಹಸೂಜನು ಪರಿಪರಿಯ ದುಃಖಗಳನ್ನು ಭೋಗಿಸಿದನು, ಆದರೂ ಕೋಹಿನೂರವನ್ನು ಬಿಡಲಿಲ್ಲ. ಇತ್ತ, ಪಂಜಾಬದೊಳಗಿನ ಬಲಾಢ್ಯನಾದ ಶೂರಸಿಂಹನಿಗೆ ಯವನಮಾತ್ರಮತಂಗಜದ ಮಸ್ತಕಮಣಿಯಾದ ಕೋಹಿನೂರವನ್ನು ಕೈವಶಮಾಡಿಕೊಳ್ಳುವ ಬಯಕೆ ಹುಟ್ಟಿತು. ಶಹಸೂಜನು ತನಗೆ ಶರಣು ಬರುತ್ತಾನೆಂದು ತಿಳಿದು, ರಣಜೀತಸಿಂಹನು ಬಮ್ಮಿಂದೊಮ್ಮೆ ಶಹಮಹಮ್ಮದನೊಡನೆ ಕಾಳಗ ಹೂಡಿ, ಯಾವತ್ತು ಕಾಶ್ಮೀರ ಪ್ರಾಂತವನ್ನು ವಶವಾಡಿಕೊಂಡನು. ಶಹಸೂಜನೂ ಅವನ ರಾಣಿಯಾದ ವುಫೋ ಬೇಗಮ್ಮು ಎಂಬವಳೂ ಕೂಡಿ, ರಣಜೀತನಿಗೆ ಶರಣು ಬಂದರು. ಅವನ ಹತ್ತರ ಕೋಹಿನೂರಲುಂಟೆಂದು ತಿಳಿದ ಕೂಡಲೆ, ರಣಜೀತನು ಅವನನ್ನು ಕೆರೆಯಲ್ಲಿಟ್ಟನು; ವುಫೋ ಬೇಗಮ್ಮು ಎಂಬವಳು ಬಹಳ ಬೆಲೆಯುಳ್ಳ ಎಷ್ಟೋ ವಜ್ರಗಳನ್ನು ಸಿಂಹನಿಗೆ ಕಾಣಿಕೆ ಕೊಟ್ಟದ್ದರಿಂದ, ಅವುಗಳೊಳಗೆ ಕೋಹಿನೂರುಲುಂಟೆಂದು ತಿಳಿದು, ಸಿಂಹನು ಸಂತೋಷಪಟ್ಟನು. ಆದರೆ, ಚನ್ನಾಗಿ ಶೋಧಮಾಡಿದ ಬಳಿಕ, ಆ ವಜ್ರಗಳೊಳಗೆ ಕೋಹಿನೂರವು ಇಲ್ಲವೆಂದು ತಿಳಿಯಲಾಗಿ, ಸಿಂಹನು ಪುನಃ ವರಾತ ಮಾಡಿದನು. ಬೇಗಮ್ಮು ಎಂಬವಳು ಮತ್ತೂ ಕಾಣಿಕೆ ಕೊಡುವವಲ್ಲದೆ, ಬಂದು ಮೇಲಾದ ರತ್ನವನ್ನು ಕಳುಹಿಸಿದಳು. ಸಿಂಹನು ಅದೇ ಕೋಹಿನೂರ

ವೆಂದು ನಿಶ್ಚಯವಾಗಿ ತಿಳುಕೊಂಡನು. ಬಳಿಕ, ಕೋಹಿನೂರ ವನ್ನು ಬಲ್ಲ ಬುಬ್ಬ ಗೃಹಸ್ಥನನ್ನು ಕರಿಸಿ, ಅವನ ಮುಂದೆ ಯಾವತ್ತು ರತ್ನಗಳನ್ನು ಇಟ್ಟು, ಇದರೊಳಗೆ ಕೋಹಿನೂ ರವು ಯಾವದೆಂದು ಪ್ರಶ್ನಮಾಡಲು, ಅವನು ತಕ್ಷಣವೇ ಉತ್ತರ ಕೊಟ್ಟೆವ್ದೇನಂದರೆ—ಕೋಹಿನೂರಕ್ಕೆ ಸರಿಹಚ್ಚಿ ನೋಡಿದರೆ, ಈ ರತ್ನಗಳೆಲ್ಲ ತೀರ ಕ್ಷುಲ್ಲಕವಾಗಿ ತೋರುತ್ತವೆ. ಇವುಗಳೊಳಗೆ ಕೋಹಿನೂರವು ಇಲ್ಲೀಇಲ್ಲ. ಇದನ್ನು ಕೇ ಳಿದ ಕೂಡಲೆ, ಕೋಹಿನೂರವನ್ನು ನೋಡಬೇಕೆಂದು ಬಹಳ ಆತುರನಾಗಿ, ಸಿಂಹನು ಆ ದಿವ್ಯ ರತ್ನವನ್ನು ತನಗೆ ಕೊಡಬೇ ಕೆಂದು ಶಹಸೂಜನಿಗೆ ಸ್ಪಷ್ಟವಾಗಿ ಹೇಳಿ ಕಳುಹಿಸಿದನು. ಶಹ ಸೂಜನಿಗೂ, ಬೇಗಮ್ಮಗೂ, ಅವರ ಸ್ನೇಹಿತರಿಗೂ ಉಂಬಳಿ ಹಾಕಿ ಕೊಡುತ್ತೇನೆಂದು ರಣಜೀತನು ಬಿಪ್ಪಿಕೊಂಡದ್ದರಿಂದ, ಶಹಸೂಜನು ಅವನಿಗೆ ಕೋಹಿನೂರವನ್ನು ಕೊಟ್ಟನು. ರಣ ಜೀತನು ಶಹಸೂಜನಿಗೆ ಬೂದು ಲಕ್ಷ ಇಪ್ಪತ್ತೈದುಸಾವಿರ ರೂಪಾಯಿ ತತ್ಕಾಲಕ್ಕೆ ಕೊಟ್ಟದ್ದಲ್ಲದೆ, ಬೂದು ಲಕ್ಷ ಮೂವ ತ್ತೆರಡು ಸಾವಿರ ರೂಪಾಯಿನ ಉಂಬಳಿ ಹಾಕಿ ಕೊಟ್ಟನು. ಶ್ರೀಕೃಷ್ಣನ ಕೌಸ್ತುಭವಂತೆ ಆ ದಿವ್ಯ ರತ್ನವು ರಣಜೀತಸಿಂ ಗನ ವಿಶಾಲ ವಕ್ಷಸ್ಥಳದಲ್ಲಿ ಬಿಸ್ಪತ್ತಿತ್ತು.

ರಣಜೀತಸಿಂಗನು ಮಡಿದು ಹೋದ ಬಳಿಕ, ಘುಲೀಪಸಿಂ ಗನು ಚಿಕ್ಕವನಾಗಿರುವಾಗ ಜಗಳವೆಸಗಿದ್ದರಿಂದ, ಕೋಹಿನೂ ರವು ನಮ್ಮ ವಿಕ್ಟೋರಿಯಾ ಮಹಾರಾಣಿಯವರ ಕಿರೀಟಭಾಗ ವನ್ನು ಅಲಂಕರಿಸುವದಕ್ಕಾಗಿ, ಭರತಖಂಡದಿಂದ ಪೂರ್ತಿ ವಿಲಾ ಯತ್ತಿಗೆ ಹೋದದ್ದು ಯಥಾಯೋಗ್ಯವೇ ಸರಿ! ಅದು ಈಗ ನ ಮ್ಮ ಮಹಾರಾಣಿಯವರ ಕಿರೀಟದಲ್ಲಿ ಥಳಥಳಿಸುತ್ತಲಿದೆ.

ರಣಜೀತಸಿಂಗನಿಗೆ ಶಹಸೂಜನು ಆ ದಿವ್ಯ ರತ್ನವನ್ನು ಕಾಣಿಕೆ ಕೊಡಲಾಗಿ, ಸಿಂಹನು ಆನಂದಭರಿತನಾಗಿ ದರಬಾರದಲ್ಲಿ ಕುಳಿತಿರುವಾಗಲೇ 'ಈ ವಜ್ರದ* ಬೆಲೆ ಎಷ್ಟು'? 'ಇದರ ಕುರುಹು ಏನು'? ಎಂದು ಆ ಶಹಾನನ್ನು ಕೇಳಲಾಗಿ, 'ಸುದ್ಯೆವವೇ ಇದರ ಬೆಲೆ,' 'ಯಾವತ್ತು ಶತ್ರುಗಳನ್ನು ಪೂರ್ತಾ ಕ್ಯಾಂತ ಮಾಡಿಕೊಳ್ಳುವ ಸಾರ್ವಭೌಮ ಅರಸನ ಬಳಿಯಲ್ಲಿಯೇ ಇದು ಇರತಕ್ಕದ್ದು'—ಎಂದು ಸಮರ್ಪಕವಾದ ಉತ್ತರವನ್ನು ಕೊಟ್ಟನು.

---

* ಮೊದಲು ಇದರ ತೂಕವು ೯೦ ಕ್ಯಾರೆಟ್ (ಸುಮಾರು ೧೯ ತೊಲೆ) ಇತ್ತಂತೆ. ಅದನ್ನು ಬೇರೆ ಬೇರೆ ಕಾಲಕ್ಕೆ ಅರಸರು ತಮಗೆ ಬೇಕಾದಂತೆ ಕೆತ್ತಿಸಿದ್ದರಿಂದ, ಅದರ ತೂಕವು ಈಗ ೧೮೫ ಕ್ಯಾರೆಟ್ (೩೭ ತೊಲೆ) ಆಗಿರುತ್ತದೆ! ನಮ್ಮ ರಾಣಿಯವರು ಅದನ್ನು ಕೆತ್ತಿಸಿದುಂಡಿಗೆ ಮಾಡಿದ್ದಾರೆ. ಈ ರತ್ನದ ಬೆಲೆ ೧೦೦೬೩ ಪೌಂಡು (೧೩೦೪೯೯೦ ರೂ.) ಆಗುತ್ತದೆ!!

THE WONDERFUL RAILWAY WORKS IN AMERICA.

ಅಮೇರಿಕದೊಳಗಿನ ಲೋಹಮಾರ್ಗದ ಅದ್ಭುತವಾದ ಕೆಲಸಗಳು.

ಹೊಸಬೆಂಡಿಯುಮಾರ್ಗವನ್ನು ಪರ್ವತದೊಳಗಿಂದ ಬಯ್ಯುವಾಗ ಇಂಜಿನಿಯರರ ನಿಜವಾದ ಚಾತುರ್ಯವೂ ವಿಶಾಲವಾದ ಕಲ್ಪನೆಯೂ ಕಂಡು ಬರುತ್ತದೆ. ಬಂಡೊಂದು ಕಡೆಯಲ್ಲಿ ಅತ್ಯುಚ್ಚ ಶಿಖರದ ಬದಿಯಿಂದ, ಬಂದೊಂದು ಕಡೆಯಲ್ಲಿ ಭಯಂಕರವಾದ ಬಂಡೆಯ ಅಂಚಿನ ಮೇಲಿಂದ, ಬಂದೊಂದು ಕಡೆಯಲ್ಲಿ ಮೇಲಿನ ನೋಡಿದರೆ ಗಿಮಿಗಿಮಿ ತಲೆ ತಿರುಗುವಂಥ ಬಹು ಆಳವಾದ ಕಂದರದೊಳಗಿಂದ, ಬಂದೊಂದು ಕಡೆ

ಯಲ್ಲಿ ಘೋರವಾದ ಪರ್ವತದ ಹೊಟ್ಟೆಯೊಳಗಿನ ಕಗ್ಗತ್ತಲೆ
ಯ ಸುರಂಗದೊಳಗಿಂದ ಹಾದಿಯನ್ನು ಮಾಡಬೇಕಾಗುತ್ತದೆ
ಕೊಲೋರಾಡೊ ಎಂಬಲ್ಲಿಯ ಪರ್ವತದೊಳಗೆ ಬಹು ದೊಡ್ಡ
ದಪ್ಪಾದ ಕಟ್ಟಿಗೆಯ ಮೇಜುಗಳನ್ನು ಮಾಡಿ, ಉದ್ದಕ್ಕೆ ಬಂದ
ರ ಮುಂದೆ ಬಂದು ಇಟ್ಟು, ಅವುಗಳ ಮೇಲಿಂದ ಹೊಗಬಂಡಿಯ
ಮಾರ್ಗವನ್ನು ಬಯ್ದಿದ್ದಾರೆ. ಮತ್ತು ಅವು ಬಹಳ ಪರ್ವತ
ಳಾದರೂ ಭವ್ಯವಾಗಿವೆ. ದಕ್ಷಿಣ ಅಮೇರಿಕದೊಳಗಿನ ಓರೋ
ಯ ಮತ್ತು ಚಿಂಬೋರಾಜದ ಲೋಹಮಾರ್ಗದಲ್ಲಿ ಬಂಡೆಗಳುಳ್ಳ
ಉನ್ನತವಾದ ಪರ್ವತದ ತೀರ ಅಂಚಿನಮೇಲೆ ಎಷ್ಟೋ ಮೈ
ಲುಗಳವರೆಗೆ ಉದ್ದವಾದದ್ದೊಂದು ಸಣ್ಣ ತಗ್ಗು ಮಾಡಿ, ಅವ
ರೊಳಗಿಂದ ಹೊಗಬಂಡಿಯ ಮಾರ್ಗವನ್ನು ಬಯ್ದಿದ್ದಾರೆ. ಈ
ತಗ್ಗಿನ ಆಗಲು ಬಂಡಿ ಹೋಗುವಷ್ಟು ಇರುತ್ತದೆ. ಈ ತಗ್ಗಿನೊಳಗೆ ಅಲ್ಲಲ್ಲಿಗೆ ನೆಟ್ಟಗೆ ತಲೆಯಮೇಲೆ ಬರು
ವಂಥ ದೊಡ್ಡ ದೊಡ್ಡ ಗುಡ್ಡವಂಥ ಪಾರೆಗಳು ಉಂಟು. ಮ
ತ್ತು ಬಂಡಿ ಕಡೆಯಲ್ಲಿ ಬುಡ ಕಾಣುವಷ್ಟು ಆಳವಾದಂಥ, ನೋ
ಡಿದರೆ ಎದೆಯೊಡೆಯುವಂಥ ದೊಡ್ಡ ತಗ್ಗು ಉಂಟು. ಈ ಮಾ
ರ್ಗವು ಬಂದೊಂದು ಕಡೆಯಲ್ಲಿ ಎತ್ತರವಾದ ಗೋಡೆಯಮೇ
ಲೆ ಬಂದು ಅಡ್ಡಗೆರೆ ಕೊರೆದಂತೆ ಕಾಣುತ್ತದೆ. ಈ ಲೋಹ
ಮಾರ್ಗದ ಸಣ್ಣ ತಗ್ಗು ಶಿಖರದಿಂದ ಅಂದರೆ ಬುಡಕ್ಕೆ ಸಮಾ
ಪವಾದ ಗುಡ್ಡದ ತುದಿಯಿಂದ ೪೦೦ ಫೂಟು ಉನ್ನತವಾಗಿದ್ದರಿಂದ, ಕೆಲಸ ಮಾಡುವ ಜನರನ್ನು ಶಿಖರದಮೇಲಿಂದಲೇ ನೂ
ಲೇಣಿಗಳ ಸಹಾಯದಿಂದ ಬಿಡಬೇಕಾಗುತ್ತಿತ್ತು.

ಲಿಪೊ.—ಓರೋಯ, ಲೋಹಮಾರ್ಗದಲ್ಲಿ ಭಯಂಕರವಾಗಿ
ದ್ದೂ ಆಳವಾಗಿಯೂ ಇರುವ ಕಂದರದಮೇಲೆ ಬಂದು ಪೂಲು

ಉಂಟು. ಈ ತರದ ಅತ್ಯುನ್ನತವಾದ ಪೂಲು ಹಿಂದುಸ್ಥಾನದಲ್ಲಿ ತಳಭಟ್ಟದೊಳಗೆ 'ರಿವರ್ಸಿಂಗ' ಸ್ಟೇಶನದ ಹತ್ತರ ಇರುವದು. ಅವಕ್ಕೆ 'ಇಹೀಗಾಂವ' ಎನ್ನುತ್ತಾರೆ. ಈ ಪೂಲಿನಿಂದ ತಗ್ಗಿನ ಬುಡವು ೧೯೦ ಫೂಟು ಅದೆ. ಅದರ ಮೇಲೆ ಹೇಳಿದ ಅಶೋರಿಕದಲ್ಲಿರುವ ಪೂಲಿನಿಂದ ಕಂವರದ ಬುಡವು ೨೫೦ ಫೂಟು ಉಂಟು. ಈ ಪೂಲು ೫೭೫ ಫೂಟು ಉದ್ದವದೆ. ಈ ಕಂದರದ ಎರಡೂ ದಂಡೆಗಳು ಕಡಿಮಾಡಿಯಾಗಿಯೂ ಉನ್ನತವಾಗಿಯೂ ಇದ್ದದರಿಂದ, ಪೂಲು ಸಾಧಾರಣ ಮಧ್ಯವಲ್ಲಿ ಲೋಹಮಾರ್ಗದ ಪಾತಳಿಯಲ್ಲಿ ಬರುವಂತೆ ಮೂಡಲಿಕ್ಕೆ ಕೂಲಿಯವರನ್ನೂ ಪೂಲಿನ ಯಾವತ್ತು ಸಾಮಾನವನ್ನು ಮೇಲಿಂದ ಬಿಡಬೇಕಾಯಿತು. ಮೇಲಿನ ಮಾರ್ಗದಲ್ಲಿಯೇ ಒಂದು ಕಡೆಯಲ್ಲಿ ಉದ್ದವಾವದೊಂದು ಸುರಂಗವನ್ನು ತೆಗೆದ ಮೇಲೆ, ಬಿಮ್ಮಿಂದೊಮ್ಮೆ ಆಳವಾದ ತಗ್ಗು ಅಡ್ಡಬಂತು. ಸುರಂಗದ ಬಾಯೊಳಗಿಂದ ಮೇಲೆ ಪರ್ವತದ ತುದಿಗೆ ಹೋಗಬೇಕೆಂದರೆ ಗೊತ್ತೆಯುಂಟಾದೊಂದು ನಿಡಿದಾದ ಸಪಾಟು ಬಂಡೆಯು. ಕೆಳಗೆ ಹೋಗಬೇಕೆಂದರೆ ಬಾವಿಯ ನುಣುಪಾದ ಬದಿಗಳಂಥ ಬಹು ಆಳವಾದ ಇಳಿಜಾರು. ಆದ್ದರಿಂದ, ಆ ಸುರಂಗದ ಬಾಯೊಳಗಿಂದಲೇ ಕಂವರದ ಎರಡನೇ ದಂಡೆಯವರೆಗೆ ಉದ್ದವಾದ ಕಟ್ಟಿಗೆಯ ತುಂಡುಗಳನ್ನೂ ಕಬ್ಬಿಣದ ಕಂಬಿಗಳನ್ನೂ ಹಾಕಿ, ಪುನಃ ಅಲ್ಲಿಂದ ಸುರಂಗವನ್ನು ತೆಗೆದು, ಮಾರ್ಗವನ್ನು ಗುಡ್ಡದೊಳಗಿಂದ ಪಾರು ಮಾಡಿದರು.

ಮೆಕ್ಸಿಕೋದೇಶದೊಳಗಿನ ಮಧ್ಯ ಲೋಹಮಾರ್ಗದ ಮೇಲೆ ಕೆಳಬದಿಗೆ ೧೬೦೯ ನೇ ವರುಷದಲ್ಲಿ ಒಂದು ಸುರಂಗವನ್ನು ಮಾಡಿದ್ದರು. ಮೆಕ್ಸಿಕೋಪಟ್ಟಣದಿಂದ ಕೆಲವು ಅಂತರದಮೇಲೆ

ಬಂದು ಸ್ಥಳದಲ್ಲಿ ಸುತ್ತುಮುತ್ತು ವಿಸ್ತೀರ್ಣವಾದ ಗುಡ್ಡಗಳಿದ್ದು ಸಾಧಾರಣವಾದ ಕೆರೆಯಂತೆ ನಡುವೆ ಬತ್ತಟ್ಟಿಗೆ ನೀರು ನಿಲ್ಲುತ್ತಿತ್ತು. ಈ ನೀರು ಹೊರಗೆ ಹೋಗಲಿಕ್ಕೆ ಹೊಳೆ, ಕೋಡಿ ಮುಂತಾದ ನಿಯಮಿತಮಾರ್ಗಗಳೇನೂ ಇಲ್ಲದ್ದರಿಂದ, ಗವಿಯೊಳಗಿಂದಲೂ ಕಂದರದೊಳಗಿಂದಲೂ ಹೋಗಿ, ಬಹ್ಮೊಮ್ಮೆ ಸವಿೂಪವಲ್ಲಿರುವ ಹಳ್ಳಿಪಳ್ಳಿಗಳಲ್ಲಿ ಜಲಪ್ರಳಯವಾಗುತ್ತಿತ್ತು. ಆದಮರಿಂದ, ಮೇಲೆ ಹೇಳಿದ ಸುರಂಗವನ್ನು ಮಾಡಿದ್ದರು. ಇದರ ಉದ್ದಳತೆ ಆರು ಮೈಲು ಇದ್ದರೂ, ಅಗಲಳತೆ ನೂರೇಫೂಟು ಇತ್ತು. ಬಂದಾನೊಂದು ಸಮಯದಲ್ಲಿ ಅತಿ ವೃಷ್ಟಿಯಾಗಿ, ಗುಡ್ಡದ ಮೇಲ್ಗಡೆಯಬದಿಯು ಕಳಚಿ ಬಿದ್ದು, ಸುರಂಗವೆಲ್ಲ ಮುಚ್ಚಿ ಹೋಯಿತು. ಮೆಕ್ಸಿಕೋ ಪಟ್ಟಣವು ಜಲಮಯವಾಯಿತು. ಮುಂದೆ ಆ ಸುರಂಗವನ್ನು ನಟ್ಟಗೆ ಮಾಡುವದು ಹಿತವಲ್ಲೆಂತಲೂ ನೀರು ತೆಗೆಯಲಿಕ್ಕೆ ಬೇರೆ ಉಪಾಯವಿಲ್ಲೆಂತಲೂ ಗೊತ್ತಾದ್ದರಿಂದ, ಆ ಸುರಂಗವನ್ನು ಬಡೆದು ಬಿಡಬೇಕೆಂದು ನಿಶ್ಚಯಿಸಿದರು. ಸುರಂಗದಿಂದ ಮೇಲೆ ಸುಮಾರು ಎಂಟು ಫೂಟು ಎತ್ತರವಾದಂಥ, ಆರು ಮೈಲು ಉದ್ದವಾದಂಥ ಗುಡ್ಡವನ್ನು ಬಂಡೇಸವನಾಗಿ ಬಡೆಯುವ ಅತ್ಯದ್ಭುತವಾದ ಕೆಲಸಕ್ಕೆ ಆರಂಭವಾಯಿತು! ಇಷ್ಟು ದೊಡ್ಡ ಗುಡ್ಡವನ್ನು ಭೂಮಿಯಮೇಲೆ ಮತ್ತೆಲ್ಲಿಯೂ ಬಡೆದಿಲ್ಲ. ಈ ಮಹತ್ಕೃತ್ಯವು ಮುಗಿಯಲಿಕ್ಕೆ ನೂರು ವರ್ಷಕ್ಕಿಂತ ಹೆಚ್ಚು ಕಾಲವು ಬೇಕಾಯಿತು! ಇಷ್ಟು ವರ್ಷಗಳವರೆಗೆ ಕೆಲಸವು ಬಳ್ಳೀ ಭರದಿಂದ ಎಡೆಬಿಡದೆ ನಡೆದಿತ್ತು! ಈ ಗುಡ್ಡವನ್ನು ಬಡೆಯುವಾಗ ಬರೇ ಅಪಘಾತದಿಂದ ಐದು ಲಕ್ಷಕ್ಕಿಂತ ಹೆಚ್ಚು ಜನರು ಸತ್ತುಹೋದರು!

FROEBEL'S KINDER-GARTEN SYSTEM.

ಫ್ರೋಬೆಲನ ಶಿಶು-ಶಿಕ್ಷಣಪದ್ಧತಿ.

(೧೯೦೯ ಪುಟದಿಂದ ಮುಂದೆ ಸಾಗಿದ್ದು).

ಶಿಕ್ಷಣಕ್ಕೆ ಬೇಕಾಗುವ ಮೂರು ಗುಣಗಳು ಯಾವವು, ಎಂಬದನ್ನು ನಿಮಗೆ ತಿಳಿಸಿದೆವು. ಅದರಿಂದ ಶಿಕ್ಷಕನ ಕೆಲಸವು ಸಾಮಾನ್ಯವಾದದ್ದಲ್ಲ, ಎಂಬದು ನಿಮ್ಮ ಮನಸ್ಸಿನಲ್ಲಿ ಸಹಜವಾಗಿ ಬಂದಿರಬಹುದು. ಶಿಕ್ಷಕನ ಕೆಲಸವನ್ನು ಯಾರು ಬೇಕಾದವರು ಮಾಡಬಹುದು ಎಂದು ನಮ್ಮ ಜನರು ತಿಳುಕೊಳ್ಳುತ್ತಾರೆ, ಇದು ಬಹು ದೊಡ್ಡ ತಪ್ಪು. ಸಣ್ಣ ಹುಡುಗರಿಗೆ ಕಲಿಸುವ ಶಿಕ್ಷಕನಲ್ಲಿ ಅಲ್ಪ ಸ್ವಲ್ಪ ವಿದ್ಯೆ ಇದ್ದರೆ ಸಾಗುತ್ತದೆಂದು ಅನ್ನಕೂಡದು. ಬಹಳ ವಿದ್ಯುತ್ತೆಯುಳ್ಳ ಶಿಕ್ಷಕನೇ ಚಿಕ್ಕ ಮಕ್ಕಳಿಗೆ ಅವರ ಮನಸ್ಸಿನಲ್ಲಿ ಚನ್ನಾಗಿ ಬೆಂಬಿಸುವಂತೆ ವಿಷಯಗಳನ್ನು ತಿಳಿಸಿ ಕೊಡಬಹುದು. ಹೊವಲು ಕಲಿಸುವವನಲ್ಲಿಯೇ ಜ್ಞಾನವ ಸಂಚಯವು ಕಡಿಮೆಯಾಗಿದ್ದರೆ, ಅವನು ಕೈಕೊಂಡ ವಿಷಯವನ್ನು ಬೇರೆ ಬೇರೆ ಸುಲಭವಾದ ರೀತಿಗಳಿಂದ ಹ್ಯಾಗೆ ತಿಳಿಸಿಕೊಟ್ಟಾನು?

ನಮ್ಮ ಕೂಸುಗಳು ಹುಟ್ಟಿದಾಗ ತೀರ ಪರತಂತ್ರವಾಗಿರುತ್ತವೆ. ಅವುಗಳಿಗೆ ತಮ್ಮ ಗೋಣು ಮುಂತಾದ ಅವಯವಗಳನ್ನು ಸಹ ಎತ್ತಲಿಕ್ಕೆ ಬರುವದಿಲ್ಲ. ಅದರೆ ಪಶು ಪಕ್ಷಿಗಳ ಮಾತು ಹೀಗಲ್ಲ. ಬಾಲ್ಯಾವಸ್ಥೆಯಲ್ಲಿ ಅತ್ಯಂತ ದುರ್ಬಲತ್ವವು ಮನುಷ್ಯಜಾತಿಯಲ್ಲಿಯೇ ಕಂಡುಬರುತ್ತದೆ. ಪಿದಾಯರ್ವಾದಿ ಸಮ್ಮಣಿಗಳು ಹ್ಯಾಗೆ ಹುಟ್ಟಿದವು ಎಂಬವನ್ನು ನೋಡಹತ್ತಿದರೆ, ಈ ಬಾಲ್ಯಾವಸ್ಥೆಯ ದುರ್ಬಲತ್ವವೇ ಅವುಗಳ ಮೂಲವೆಂದು ತಿಳಿಯುವದು. ಚಿಕ್ಕ ಮಕ್ಕಳ ದುರ್ಬಲತ್ವವನ್ನು

ಕಂಡು, ನಮ್ಮ ಅಂತಃಕರಣವಲ್ಲಿ ದಯಾ ಪ್ರೇಮಗಳು ಅಂಕುರಗೊಳ್ಳುತ್ತವೆ. ಹೆರವರ ಮಕ್ಕಳನ್ನು ಸಹ ನೋಡಿ, ನಮ್ಮ ಹೃದಯವಲ್ಲಿ ದಯಾ ಪ್ರೇಮಾದಿ ಮನೋಭಾವಗಳು ತಲೆದೋರಹತ್ತಿವಯೆಂದರೆ, ಔದಾರ್ಯವೆಂಬ ಬೀಜಕ್ಕೆ ನೊಳಕೆ ಒಡೆದಂತೆ ಆಗುತ್ತದೆ. ಪರರ ದುಃಖವನ್ನು ನೋಡಿ ಮರಗುವನೂ, ಅವನ್ನು ಪರಿಹರಿಸುವವಕ್ಕೆ ತಾವಾಗಿ ಯತ್ನ ಮಾಡುವನೂ ಔದಾರ್ಯದ ಕುರುಹುಗಳಾಗಿವೆ. ಔದಾರ್ಯವು ಬೇರೆ ಬೇರೆ ಜನರಲ್ಲಿ ಹೆಚ್ಚು ಕಡಿಮೆ ಮಾನದಿಂದ ಇರುವದು. ವಿಶೇಷವಾದ ಔದಾರ್ಯ ಗುಣವುಳ್ಳವರೇ ಶಿಕ್ಷಕರಾಗಲಿಕ್ಕೆ ತಕ್ಕವರು. ಶಿಕ್ಷಕನಲ್ಲಿ ಔದಾರ್ಯವು ಇಲ್ಲದಿದ್ದರೆ, ಅವನ ಶಿಷ್ಯನಲ್ಲಿ ಆ ಗುಣವು ಹುಟ್ಟಲಾರದೆಂಬದಿಷ್ಟೇ ಅಲ್ಲ; ಅವರ ಅಂಗಭೂತವಾವ ಕೃತಜ್ಞತೆಯೆಂಬ ಗುಣವೂ ಅವನಲ್ಲಿ ಬರಲಾರದು. ತನ್ನ ದುರ್ಬಲತ್ವವನ್ನು ಕಂಡು, ಇಂಥ ಮನುಷ್ಯನು ಔದಾರ್ಯದಿಂದ ತನಗೆ ಸಹಾಯ ಮಾಡಿದನೆಂದು ಅನುಭವಕ್ಕೆ ಬಂದ ಹೊತ್ತು, ಅವನ ಉಪಕಾರವನ್ನು ತೀರಿಸಬೇಕೆಂಬ ಇಚ್ಛೆಯು ಹುಟ್ಟುವದು ಅಸಂಭವವೇ ಸರಿ. ಹುಡುಗರು ಮಣ್ಣಿನಂತೆ, ಶಿಕ್ಷಕರು ಚಿತ್ರಗಾರರಂತೆ ಇರುತ್ತಾರೆಂಬುವದನ್ನು ನಾವು ಎಷ್ಟೋ ಸಾರಿ ಕೇಳಿದ್ದೇವೆ. ಚಲ್ವಿಕೆಯಂದರೇನೆಂಬದನ್ನು ಅರಿಯುವ ಚಿತ್ರಗಾರನು ಚಲೋ ಚಿತ್ರಗಳನ್ನು ಹ್ಯಾಗೆ ತೆಗೆಯಲಾರನೋ, ಹಾಗೇ ಸದ್ಗುಣಗಳಿಲ್ಲದ ಶಿಕ್ಷಕನು ತನ್ನ ವಿದ್ಯಾರ್ಥಿಗಳನ್ನು ಸಚ್ಛಿಷ್ಯರಾಗಮಾಡಲಾರನು. ಆವ ಕಾರಣ, ಶಿಕ್ಷಕನಲ್ಲಿ ಸದ್ಗುಗಳು ಅವಶ್ಯವಾಗಿರಬೇಕು.

ಶಿಷ್ಯ ಶಿಕ್ಷಕರಲ್ಲಿರುವ ಈ ತರದ ನಿಕಟ ಸಂಬಂಧವಗೌರವವು ನಮ್ಮ ಜನರ ಮನಸ್ಸಿನೊಳಗೆ ಬರುವದೇಇಲ್ಲ. ಬೇರೆಯಾ

ವ ಉದ್ಯೋಗವನ್ನೂ ಮಾಡಲಿಕ್ಕೆ ಅಸ್ಪದವಿಲ್ಲದವನು ಒಂದು ಕಟ್ಟೆಯ ಮೇಲೆ ಕೆಲವು ಸಣ್ಣ ಹುಡುಗರನ್ನು ಕೂಡಿಸಿ ಕೊಂಡು, ಅವರಿಗೆ ಏನಾವರೂ ಕಲಿಸುತ್ತಾ ಕೂತರಾಯಿತು, ಶಿಕ್ಷಕನಲ್ಲಿ ಅವಶ್ಯವಾಗಿರತಕ್ಕ ಗುಣಗಳು ಅವನಲ್ಲಿ ಇರಲಿ, ಇರದೇ ಇರಲಿ ! ತನ್ನಲ್ಲಿ ಅಂಥ ಗುಣಗಳುಂಟೋ ಇಲ್ಲವೋ ಎಂಬುವನ್ನು ಆ ಶಿಕ್ಷಕನು ನೋಡುವದೇ ಇಲ್ಲ. ತಮ್ಮ ಮಕ್ಕಳ ನ್ನು ಅವನ ಕೈಯಲ್ಲಿ ಕೊಡುವವರಾವರೂ ಅವರ ಗೊಡವೆಗೆ ಹೋಗುವದಿಲ್ಲ ಯಾವನಾದರೊಬ್ಬನು ತನ್ನ ಕುಮರೆಗೆ ನಡಿ ಗೆ ಮುಂತಾವ್ದನ್ನು ಕಲಿಸುವವಾವರೆ, ಆ ಕಲಿಸುವವನು ಹ್ಯಾ ಗೆ ಇದ್ದಾನೆ? ಅವನು ಯಾರ್ಯಾರ ಕುಮರೆಗೆ ಹ್ಯಾಗೆ ಹ್ಯಾಗೆ ಕಲಿಸಿದ್ದಾನೆ? ಮುಂತಾದಸಂಗತಿಗಳ ಬಗ್ಗೆ ವಿಚಾರ ಮಾಡದೆ ಬಬ್ಬರೂ ತಮ್ಮ ಕುಮರೆಯನ್ನು ಇನ್ನೊಬ್ಬರ ವಶಕ್ಕೆ ಕೊ ಡುವದಿಲ್ಲ. ಆವರೆ, ಹುಡುಗರನ್ನು ಶಾಲೆಗೆ ಕಳಿಸುವ ವಿಷಯ ವಲ್ಲಿ ಹೀಗೆ ಮನಸುಗೊಟ್ಟು ವಿಚಾರಮಾಡುವವನು ಸಾವಿರ ಕ್ಕೆ ಬಬ್ಬನು! ಹುಡುಗನು ಶಾಲೆಗೆ ಹೋಗಹತ್ತಿದರೆ ತೀರಿತು. ಇವಕ್ಕೂ ಹೆಚ್ಚಿನ ವಿಚಾರವು ಬಹುಶಃ ಯಾರ ಮನಸ್ಸಿನಲ್ಲಿ ಯೂ ಬರುವದಿಲ್ಲ. ಈ ಮೇರೆಗೆ ಗುರುಹಿರಿಯರಲ್ಲಿ ತೋರುವ ಉದಾಸೀನತ್ವವು ಹುಡುಗರಿಗೆ ಎಷ್ಟು ಅಹಿತಕರವಾಗಿದೆ, ಎಂಬ ವಿಷಯವಲ್ಲಿ ನಮ್ಮ ಜನರು ಮನಸ್ಸುಹಾಕಿ ವಿಚಾರ ಮಾಡಹತ್ತಿ ದರೆ,ಅವರಿಂದ ಮಕ್ಕಳಿಗೆ ಬಹಳೇ ಹಿತವಾಗುವದು. ಇದುವರೆಗೆ ಶಿಕ್ಷಕನಿಗೆ ಅವಶ್ಯವಾಗಿ ಬೇಕಾಗುವ ಗುಣಗಳನ್ನು ಹೇಳಿದೆವು. ಇನ್ನುಮೇಲೆ ಶಿಕ್ಷಣ ಕ್ರಮವನ್ನು ಕುರಿತು ವಿಚಾರಿಸೋಣ.

(ಮುಂದಕ್ಕೆ ಸಾಗುವದು)

DEPARTMENTAL NOTICE.

ವಿದ್ಯಾಖಾತೆಯ ನೋಟೀಸು.

ಜಾನಕ ನಂಬರ. ೬೪೦ / ೧೮೯೭-೯೮.

ಧಾರವಾಡ ೧೬ನೇ ಮಾರ್ಚ ೧೮೯೮.

ತಾರೀಖು ೩೧ನೇ ಜನೆವರಿ ೧೮೯೮ ಇಸ್ವಿಯ ಸರಕಾರದ ಜನರಲ್ ಡಿಪಾರ್ಟಮೆಂಟಿನ ೪೦೬ನೇ ನಂಬರಿನ ಠರಾವು ಯಾವತ್ತು ವಿದ್ಯಾಖಾತೆಯ ಉದ್ಯೋಗಸ್ಥರಿಗೆ ತಿಳಿಯಬೇಕೆಂದು ಕೆಳಗೆ ಪ್ರಸಿದ್ಧಿಸಲ್ಪಟ್ಟಿದೆ.

(Signed) S. V. PATWARDHAN,
ಎಜ್ಯುಕೇಶನಲ್ ಇನ್‌ಸ್ಪೆಕ್ಟರ್,
ದಕ್ಷಿಣ ಭಾಗ.

ಸರಕಾರೀ ಉದ್ಯೋಗಸ್ಥರ ನಡಾವಳಿಯ ಬಗ್ಗೆ ಕಟ್ಟಳೆಗಳತ.

ನಂಬರ ೪೦೬.

ಜನರಲ್ ಡಿಪಾರ್ಟಮೆಂಟ್.

ಮುಂಬಯಿಕೋಟೆ ೩೧ನೇ ಜನೆವರಿ ೧೮೯೮.

ಇಂಡಿಯ ಗವರ್ನಮೆಂಟ್, ಹೋಮ ಡಿಪಾರ್ಟಮೆಂಟ್, (ಪಬ್ಲಿಕ್) ಇವರ ಠರಾವು ನಂಬರ ೨ ಲಕ್ಷ ೧೭—೧೦೨ ತಾರೀಖು ೨೬ನೇ ಜನೆವರಿ ೧೮೯೮ ಇಸವಿ.

ಹೋಮ ಡಿಪಾರ್ಟಮೆಂಟಿನ ಠರಾವುನಂಬರ ೧೧—೪೨೬—೪೩೭, ತಾರೀಖು ೧೭ನೇ ಮಾರ್ಚ ೧೮೮೨ ಇಸವೀದು ಓದಲ್ಪಟ್ಟಿತು.

ಠರಾವು.

ಕ್ರಿವಿನೊಟಿಸ್ ಸಿವಿಲ್ ಸರ್ವಂಟರು (ಸನದೀ ಮುಲಕೀಖಾತೆ

ಟೊಳಗಿನ ನೌಕರರು) ಇನಾಮುದಾರರಿಗಾಗಲಿ, ಜಮೀನೆದಾರರಿಗಾಗಲಿ, ಕೈಕೆಳಗಿನ ತಾಲೂಕದಾರನಿಗಾಗಲಿ, ಗೇಣೀದಾರರಿಗಾಗಲಿ, ರೈತರಿಗಾಗಲಿ; ಇವರೆ ಜಾಮೀನದಾರರಿಗಾಗಲಿ, ತಾವು ಸ್ವತಃ ಅಥವಾ ಎರಡನೆಯವರ ಮುಖಾಂತರವಾಗಿ ಸಾಲಾ ಕೊಟ್ಟಾರದೆಂದು, ಸನ್ ೧೮೬೩ನೇ ಇಸವಿಯ ೪೫ನೇ ರೇಗ್ಯೂಲೇಶನನ ೨೦ನೇ ಕಲಮಿನಲ್ಲಿ ಗೊತ್ತು ಮಾಡಲ್ಪಟ್ಟಿದೆ. ಮತ್ತು ಈ ಕಲಮನ್ನು ೩೩ ವಿಕ್ಟೋರಿಯ ಮೊರನೇ ಚಾಪ್ಟರಿನ ೬ನೇ ಕಲಮಿನ ಪ್ರಕಾರ, ವಾಡಿಕೆಯಾಗಿ ಸನದೀ ನೌಕರರ ಸಲುವಾಗಿ ಕಾಯ್ದಿಟ್ಟ ಅಧಿಕಾರವ ಕೆಲಸಗಳಿಗೆ ನೇಮಿಸಲ್ಪಡುವ ಹಿಂದು ಸ್ಥಾನದ ನಿವಾಸಿಗಳಿಗಾದರೂ ಹಚ್ಚಬೇಕೆಂದು ಉಪ್ಪೋದ್ಘಾತದಲ್ಲಿ ಓದಿದ ತಾರೀಖು ೧೭ ಮಾರ್ಚ ೧೮೭೨ ಇಸವಿಯ 'ಜೋನ್ಸ ರಿಪಾರ್ಟಮೆಂಟನ' ಠರಾವು ಆಗಿರುತ್ತದೆ.

೨. ಸರಕಾರೀ ಅನ್‌ಕವಿನೆಂಟಿಡ್ ಗ್ಯಾಝೆಟಿಡ್ ಆಫೀಸರರು (ಸರಕಾರವನಿಂದ ನೇಮಿಸಲ್ಪಡುವ ಬಿನ್ ಸನದೀ ಅಧಿಕಾರಿಗಳು) ತಾವು ಕೆಲಸ ಮಾಡುವ ಇಲಾಖೆಯಲ್ಲಿಯೂ ಜಿಲ್ಲೆಯಲ್ಲಿಯೂ ಇರುವ ಜಮೀನದಾರರಿಗೆ ಬೇರೆ ಬೇರೆ ಬಡ್ತಿಯಿಂದಲೂ ಕೆಲವರು ಅಳತೆಗೆಟ್ಟ ಬಡ್ತಿಯಿಂದಲೂ ದೊಡ್ಡ ದೊಡ್ಡ ರಕಮುಗಳನ್ನು ಸಾಲಾ ಕೊಟ್ಟಿರುವ ಉದಾಹರಣೆಗಳು ಬಳಗಾವಿಯಲ್ಲಿ ಹಿಂದುಸ್ಥಾನ ಸರಕಾರದವರ ದೃಷ್ಟಿಗೆ ಬಿದ್ದಿರುತ್ತವೆ. ಈ ಮೇರೆಗೆ ಸಾಲಾಕೊಡುವ ಪರಿಪಾಠವನ್ನು ಬಮ್ಮೆಲೇ ನಿಲ್ಲಿಸಿ ಬಿಡಬೇಕೆಂದು 'ಗವರ್ನರ ಜನರಲ್ ಇನ್‌ಕೌನ್ಸಿಲ್' ಇವರಿಗೆ ತೋರುತ್ತದೆ. ಆ ಮೇರೆಗೆ ನಾಮದಾರ ಗವರ್ನರ ಜನರಲ್ ಇನ್‌ಕೌನ್ಸಿಲರವರು ಗೊತ್ತು ಪಡಿಸುವದೇನೆಂದರೆ, ಸಾಲಾಕೊಡುವ ವಿಷಯದಲ್ಲಿ ಕವಿನೆಂಟಿಡ್ ಸಿವಿಲ್ ಸರ್ವೆಂಟರು ಮತ್ತು

ಸ್ಟ್ಯಾಟುಟರಿ ಸಿವಿಲ್ ಸರ್ವಂಟರು ಇವರ ಸಂಬಂಧದಿಂದ ಈಗ ನಡೆಯುತ್ತಿರುವ ಕಟ್ಟಳೆಗಳನ್ನು ಮುಲಕೀ ಖಾತೆಯಲ್ಲಿಯೂ ನ್ಯಾಯ ಖಾತೆಯಲ್ಲಿಯೂ ಕೆಲಸ ಮಾಡುವ ಯಾವತ್ತು ಬಿನ್ ಸನದೀ ಅಧಿಕಾರಸ್ಥರು ಸಹ ಮಾಲಿಸಲಿಕ್ಕೆ ಬೇಕು. ಇಂಥ ಕಾಮದಾರರು ತಾವು ಯಾವ ಇಲಾಖೆಯಲ್ಲಿ ಕೆಲಸ ಮಾಡುತ್ತಾರೋ, ಆ ಇಲಾಖೆಯಲ್ಲಿ ಸ್ವತಃ ಅಥವಾ ಅವ್ರ್ತಇಷ್ಟರ ಇಲ್ಲವೆ ಮುತಾಲಿಕರ ಮುಖಾಂತರವಾಗಿ ಜಮೀನದಾರರಿಗೆ ಬಡ್ಡಿಯಿಂದ ಸಾಲಾ ಕೊಡಕೂಡದೆಂದು ಈ ಠರಾವು ಮಾಡಲ್ಪಟ್ಟಿದೆ.

ಠರಾವು.—ಇಂಡಿಯ ಸರಕಾರದವರ ಠರಾವಿನ ನಕಲುಗಳನ್ನು ಬೇರೆ ಬೇರೆ ಭಾಗಗಳ ಕಮಿಶನರರಿಗೂ, ಸಿಂಧವಕಮಿಶನರನಿಗೂ, ಯಾವತ್ತು ಕಲೆಕ್ಟರರಿಗೂ, ಸಿಂಧದ ಕಲೆಕ್ಟರರಿಗೂ, ಡಿಪ್ಲೂಟಕಮಿಶನರರಿಗೂ, ಅಕೌಂಟಂಟ ಜನರಲ್ಲನಿಗೂ ಕಳುಹಿಸಿ, ಈ ಠರಾವನ್ನು ತಿಳುಕೊಂಡು ಇದರಂತೆ ನಡೆಯುವದಕ್ಕೆ ತಿಳಿಸಬೇಕು. ಈ ಠರಾವು ತಾರೀಖು ೩ ಆಗಷ್ಟ ೧೮೪೮ನೇ ಇಸವಿಯ ಸರಕಾರೀ ಠರಾವು ನಂಬರ ೩೦೦೯ಕ್ಕೆ ಪುರವಣಿಯಾಗಿರುತ್ತದೆ.

೩. ಸೇಕ್ರೆಟ್ಯಾರಿಅಟಿನ ಯಾವತ್ತು ಖಾತೆಗಳಿಗೂ, ಆವುಗಳ ಅಧಿಕಾರಕ್ಕೆ ಬಳಗಾಗಿರುವ ಯಾವತ್ತು ಆಫೀಸುಗಳ ಮೇಲಧಿಕಾರಿಗಳಿಗೂ ಈ ಠರಾವನ್ನು ತಿಳುಕೊಂಡು ಇದರಂತೆ ನಡಕೊಳ್ಳುವದಕ್ಕಾಗಿ ಇದರಪ್ರತಿಗಳನ್ನು ಕಳುಹಿಸಿಕೊಡಬೇಕು.

(ಸಹಿ) ಜೇ. ಡಿ. ಸಿ. ಎಟಕಿನ್ಸು,
ಅಕ್ಟಿಂಗ ಅಂಡರ ಸೆಕ್ರೆಟರಿ ಟು ಗವರ್ನಮೆಂಟ.

DHARWAR TRAINING COLLEGE, TERMINAL EXAMINATION QUESTIONS ON METHOD.

ಧಾರವಾಡ ಟ್ರೇನಿಂಗಕಾಲೇಜಿನ ಷಾಣ್ಮಾಸಿಕ ಪರೀಕ್ಷೆಯ ಶಿಕ್ಷಣಪದ್ಧತಿಯ ಪ್ರಶ್ನೆಗಳು.

೧ನೇವರ್ಷದ ವರ್ಗ.

೧. ಮಾಸ್ತರನಲ್ಲಿ ಅತ್ಯವಶ್ಯವಾದ ಗುಣವು ಯಾವದು? ಸ್ಮೃ ಉತ್ತರವನ್ನು ಕಾರಣಸಹಿತ ಬರೀರಿ. ೪.

೨. ಮಾಸ್ತರನು ಕ್ಷುಲ್ಲಕವಾದ ಸಂಗತಿಗಳ ಕಡೆಗೆ ದುರ್ಲಕ್ಷ ಮಾಡಬಹುದೋ? ಯಾಕೆ? ೪.

೩. ತಿದ್ದುವಿಕೆಯಂದರೇನು? ಶಿಕ್ಷಣಕ್ಕೆ ಅದರಿಂದಾಗುವ ಸಹಾಯವೇನು? ೧೦.

೪. ಮಾಸ್ತರರು ವಿದ್ಯಾರ್ಥಿಗಳೊಳಗೆ ಕೂಡಿಕೊಂಡಿರುವದರಿಂದ ಫಲವೇನು? ವಿವರಿಸಿರಿ. ೧೦.

೫. ಶಿಕ್ಷೆಯ ಹೇತುಗಳು ಯಾವವು? ಅವು ಹ್ಯಾಗೆ ಪೂರ್ಣವಾಗುವವು? 'ಶಿಟ್ಟುಮಾಡೋಣ' ಎಂಬ ಶಿಕ್ಷೆಯಬಗ್ಗೆ ಲಕ್ಷ್ಯ ದಲ್ಲಿಡತಕ್ಕದ್ದೇನು? ೧೦.

೬. ಶಿಕ್ಷೆ ಮಾಡುವ ಪ್ರಸಂಗವೇ ಬಾರದಂತೆ ಮಾಡಬೇಕಾದರೆ, ಉಪಾಯಗಳು ಯಾವವು? ೧೧.

೭. ಶಾಲೆಯಲ್ಲಿ ನಿಷ್ಕಾರಣ ಗದ್ದಲವಾಗದೆ, ಕೆಲಸ ಪಾಂತರೀತಿಯಿಂದ ಸಾಗುವದಕ್ಕೆ ಉಪಯುಕ್ತವಾದ ಐದು ನಿಯಮಗಳನ್ನು ಬರೀರಿ. ೧೦.

೮. ಶುದ್ಧಬರಹದ ಯಾವತ್ತು ಪಾಟಗಳನ್ನು ನೋಡಿದವರು

ಮಾಯ, ಆ ನೋಡೋಣದರಿಂದ ಪ್ರಯೋಜನವಾಗುವಂತೆ ಏನು ಮಾಡಬೇಕು? ಹ್ಯಾಗೆಮಾಡಬೇಕು? ೧೩.

೯. ವಿದ್ಯಾರ್ಥಿಗಳ ಬಲವುಗಳನ್ನು ಹೇಳಿರಿ. ಮತ್ತು ತೊಂದರೆಗಳನ್ನು ಪರಿಹರಿಸುವ 'ಇಚ್ಛೆ' ಎಂಬ ಬಲವನ್ನು ಕುರಿತು ವಿಸ್ತಾರವಾಗಿ ಬರೀರಿ. ೧೩.

೧೦. ಆಗಾಗ್ಗೆ ಇನಾಮುಗಳನ್ನು ಕೊಡುವದರಿಂದ ತಿದ್ದುವಿಕೆಗೆ ಸಹಾಯವು ಎಷ್ಟರಮಟ್ಟಿಗೆ ಆಗುತ್ತದೆಂಬದನ್ನು ವಿವರಿಸಿರಿ. ೫.

ಎನೇವರ್ಷದ ವರ್ಗ.

೧. 'ಆಳಿಕೆಯ ಸಾಮರ್ಥ್ಯ' ಅಂದರೇನು? ಅದನ್ನು ಸಂಪಾದಿಸಬಹುದೋ? ಹ್ಯಾಗೆ? ಅದನ್ನು ಸಂಪಾದಿಸಲಿಕ್ಕೆ ಮನುಷ್ಯನಲ್ಲಿ ಯಾವ ಗುಣವಿರಬೇಕು? ೫.

೨. ಶಿಕ್ಷೆ ಇನಾಮುಗಳ ಹೊರತು ತಿದ್ದುವಿಕೆಯನ್ನು ನೆಲೆಗೊಳಿಸಬಹುದೋ? ಕಾರಣ ಸಹಿತವಾಗಿ ವಿವರಿಸಿರಿ. ೧೦.

೩. ಮಾಸ್ತರನಿಗಿದ್ದ ಅಧಿಕಾರವು ಕುಂದಿಲ್ಲದೆ ಸಾಗಬೇಕಾವರೆ, ಅವನಲ್ಲಿ ಯಾವ ಗುಣಗಳಿರಲಿಕ್ಕೆ ಬೇಕು? ೧೦.

೪. 'ತಾನು ಸ್ವತಃ ಕಲಿಸುವವಕ್ಕಿಂತ ವಿದ್ಯಾರ್ಥಿಗಳಿಗೆ ಕಲಿಯಲಿಕ್ಕೆ ಹಚ್ಚುವದೇ ಮಾಸ್ತರನ ಮುಖ್ಯ ಕೆಲಸವು' ಇದನ್ನು ಕುರಿತು ನಿಮ್ಮ ಅಭಿಪ್ರಾಯವನ್ನು ಬರೀರಿ. ೧೦.

೫. ವರ್ಗ ಕಲಿಸುವಾಗ ಮಾಡುವ ಪ್ರಶ್ನೆಗಳು ಎಷ್ಟುವಿಧವು? ಅವುಗಳ ಲಕ್ಷಣಗಳೇನು? ಅವುಗಳ ಸಂಬಂಧದಿಂದ ಲಕ್ಷ್ಯವಲ್ಲಿಡತಕ್ಕ ನಿಯಮಗಳು ಯಾವವು? ೧೦.

೬. ಉತ್ತರಗಳು ಹ್ಯಾಗಿರಬೇಕು? ವಿದ್ಯಾರ್ಥಿಗಳು ಅಪೂರ್ಣ ಉತ್ತರಗಳನ್ನು ಯಾಕೆ ಕೊಡುತ್ತಾರೆ? ೧೦.

೭. ವ್ಯಾಕರಣ ಕಲಿಸುವಾಗ ಪ್ರಾರಂಭ ಹ್ಯಾಗೆ ಮಾಡುವಿರಿ? ನಾಮ, ವಿಶೇಷಣ, ಕ್ರಿಯಾಪದಗಳ ಜ್ಞಾನಮಾಡಿಕೊಡಬೇಕಾಗಿದೆ, ಟಿಪ್ಪಣಿಗಳನ್ನು ಬರೀರಿ. ೧೫.

೮. ಶಿಕ್ಷಣದ ಮುಖ್ಯ ಮುಖ್ಯ ತತ್ವಗಳನ್ನು ಹೇಳಿ 'ಗೊತ್ತಿದ್ದದ್ದರಿಂದ ಗೊತ್ತಿಲ್ಲದ್ದಕ್ಕೆ ಸಾಗಬೇಕು' ಎಂಬದನ್ನು ವಿವರಿಸಿರಿ. ೧೦.

೯. ಪೊತ್ತಿಗೆ ಬಾರದ ಹುಡುಗರಿಂದ ಕೇಡವೇನು? ಅದನ್ನು ಹ್ಯಾಗೆ ತಪ್ಪಿಸಬಹುದು? ೮.

೧೦. ಸರಾಸರಿ ಹಾಜರಿಗೂ ಹಾಜರಿಯ ಸರಾಸರಿಗೂ ಭೇದವೇನು? ೬.

ಅಥವಾ,

ಅನುಮಾನದಿಂದ ಉತ್ತರ ಕೊಡುವ ಚಟವು ಹುಡುಗರಿಗೆ ಹ್ಯಾಗೆ ಹತ್ತುವದು? ಅದರಿಂದ ಕೇಡು ಏನು? ಆ ಚಟವು ಹತ್ತದಂತೆ ಮಾಸ್ತರನು ಏನು ಮಾಡಬೇಕು?

ಒನ್ನೇ ವರ್ಷದ ವರ್ಗ.

೧. 'ಗೊತ್ತು ಹಿಡಿ, ಹಿಂಬಾಲಿಸು, ಮುಂದಕ್ಕೆ ಬಾ' ಎಂಬ ಶಬ್ದಗಳು ಹೇಳುವ ಅರ್ಥವನ್ನು ವಿವರಿಸಿರಿ. ೧೦.

೨. ಮಾಸ್ತರನ ಬಗ್ಗೆ ಪೂಜ್ಯ ಬುದ್ಧಿ ಹುಟ್ಟಬೇಕಾದರೆ ಅವನಲ್ಲಿ ಯಾವ ಗುಣಗಳಿರಬೇಕು? ೧೦.

೩. ಮನೆಯಲ್ಲಿ ಮಾಡತಕ್ಕ ಪಾಠಗಳು ಎಷ್ಟು ವಿಧವು? ಅವುಗಳನ್ನು ನೇಮಿಸುವಾಗ ಯಾವ ಸಂಗತಿಗಳನ್ನು ಲಕ್ಷ್ಯದಲ್ಲಿಡತಕ್ಕದ್ದು? ಯಾಕೆ? ೧೦.

೪. ಮೇಲಾವ ಸಾಲಿಯ ಕುರುಹು ಏನು? ಸ್ಪಷ್ಟವಾಗಿ ವಿವರಿಸಿರಿ. ೧೦.

೫. ವಿಷಯಜ್ಞಾನ ಮತ್ತು ಶಿಕ್ಷಣ ಪದ್ಧತಿ ಇವುಗಳ ಪರಿಸ್ಪರ ಸಂಬಂಧವನ್ನೂ ಯೋಗ್ಯತೆಯನ್ನೂ ಕುರಿತು ನಿಮ್ಮ ಅಭಿಪ್ರಾಯವೆನ್ನು ಬರೀರಿ. ೧೦.

೬. ಪ್ರಶ್ನೋತ್ತರ ಪದ್ಧತಿಯಿಂದ ಕಲಿಸುವಾಗ ಯಾವ ರೀತಿಯ ಪ್ರಶ್ನಕ್ಕೆ ಉತ್ತರ ಕೊಡುವದಕ್ಕಾಗಿ ವಿದ್ಯಾರ್ಥಿಗಳು ಆತುರರಾಗಿರಲು, ಅವರಿಗೆ ಸ್ವಲ್ಪ ತಡೆದು ಉತ್ತರ ಕೊಡುವದಕ್ಕೆ ಹೇಳುವದರಿಂದ ಫಲವೇನು? ೧೦.

೭. ಮೂಲಾಕ್ಷರ ಕಲಿಸತಕ್ಕ ಕ್ರಮವು ಯಾವದು? ೮.

೮. ತೀರ ಸಾಮಾನ್ಯ ಸಂಗತಿಗಳ ವಿಷಯದಲ್ಲಿ ವಿದ್ಯಾರ್ಥಿಗಳಿಗೆ ಪ್ರಶ್ನ ಮಾಡಲಾಗಿ, ಅವರು ಉತ್ತರ ಕೊಡಲಾರದೆ ಸುಮ್ಮನೆ ಕೂಡುವದನ್ನು ಕಂಡು ಮಾಸ್ತರರಿಗೆ ಅವಿದಾಗುತ್ತದೆ. ಆಗ ಅವರು ನಾವು ಎಷ್ಟಾವರ್ತಿ ಹೇಳಿದರೂ, ವ್ಯರ್ಥವಾಯ್ತು ತಲ್ಲಾ! ಎಂದು ಗುಣುಗುಟ್ಟುವರು. ಇದು ಅವಿಚಾರದ್ದೆಂದು ಸಿದ್ಧಮಾಡಿರಿ. ೧೦.

೯. ಓದುವವನು ತನ್ನ ಸಲುವಾಗಿ ಆಗಲಿ ಬೇರೆಯವರ ಸಲುವಾಗಿ ಆಗಲಿ ಓದುತ್ತಾನೆ; ಇವೆರಡು ಕೆಲಸಗಳಿಗೆ ಬೇಕಾಗುವ ಭಿನ್ನಪ್ರಕಾರದ ಗುಣಗಳನ್ನು ವಿಂಗಡಿಸಿರಿ. ಈ ಭೇದವನ್ನು ಲಕ್ಷ್ಯಕ್ಕೆ ತಾರದ್ದರಿಂದ ಪಾಠಶಾಲೆಯಲ್ಲಿ ಉಂಟಾಗುವ ದೋಷಗಳನ್ನು ವಿವರಿಸಿರಿ. ೧೦.

೧೦. ಮಾಸ್ತರರು ಇಷ್ಟತಕ್ಕ ಮುಖ್ಯವಾದ ನಮೂನೆಗಳು ಯಾವವು? ಯಾವ ನಮೂನೆಗಳನ್ನು ಎಷ್ಟು ದಿವಸ ಕಾಯ್ದಿಡಬೇಕು? ೧೦.

ವರ್ಗಣಿ ವಸೂಲು.

೧೮೯೦ನೇ ಜನವರಿಯಿಂದ ಜೂನದವರೆಗೆ ೬ ತಿಂಗಳದ್ದು.

			ರು.	ಆ.	ಪೈ.
ಧಾರವಾಡ ಜಿಲ್ಲೆ.					
೧. ಕರ್ಜಗಿ ತಾಲೂಕ	ಸ್ಕೂಲಮಾಸ್ತರರಿಂದ	...	೧೫	೦	೦
೨ ಗದಗ	,,	,,	... ೪೦	೧೫	೦
೩. ಹಾನಗಲ್ಲ	,,	,,	... ೧೩	೧೦	೦
೪. ಶಿಗ್ಗಾಂವಿ	,,	,,	... ೧೫	೧೫	೦
೫. ಧಾರವಾಡ	,,	,,	... ೧೪	೪	೯
೬. ಧಾರವಾಡ ಮ್ಯುನಿಸಿಪಲ್	ಸ್ಕೂಲಮಾಸ್ತರರಿಂದ		೪	೧೪	೦
ವಿಜಾಪೂರಜಿಲ್ಲೆ.					
೧. ಬಾದಾಮಿ ತಾಲೂಕ	ಸ್ಕೂಲಮಾಸ್ತರರಿಂದ	...	೧೩	೨	೦
೨. ಹುನಗುಂದ	,,	,,	... ೧೪	೪	೬
೩. ಬಾಗೇವಾಡಿ	,,	,,	... ೧೬	೧೪	೦
೪. ಇಂಡಿ	,,	,,	... ೧೫	೧೨	೦
೫. ಸಿಂದಗಿ	,,	,,	... ೧೫	೨	೬
ಕಾರವಾರಜಿಲ್ಲೆ.					
೧. ಸದಾಶಿವಗಡ ತಾ.	ಸ್ಕೂಲಮಾಸ್ತರರಿಂದ	...	೯	೬	೦
೨. ಅಂಕೋಲಾ	,,	,,	...	೬	೫ ೦
೩. ತೇರಗಾಂವ	,,	,,	...	೬	೧೪ ೦
೪. ಸಿರಸಿ	,,	,,	...	೪	೩ ೦
೫. ಸಿದ್ದಾಪೂರ	,,	,,	...	೫	೬ ೦
೬. ಕುಮಟಾ	,,	,,	...	೧೪	೪ ೦
೭. ಹೊನ್ನಾವರ	,,	,,	...	೧೪	೧೨ ೦
೮. ಕಾರವಾರ ಮ್ಯುನಿಸಿಪಲ್	ಸ್ಕೂಲಮಾಸ್ತರರಿಂದ		೪	೧೧	೦

ಕೆಳಗೆ ಕಾಣಿಸಿದ ತಾಲೂಕ ಸ್ಕೂಲುಗಳಿಂದ ಜನವರಿಯಿಂದ ಮಾರ್ಚದವರೆಗೆ ಮೂರೇ ತಿಂಗಳವರ್ಗಣಿ ಬಂದದೆ.

---

* ಸೂಚನೆ—ಇದರಲ್ಲಿ ಏನಾದರೂ ತಪ್ಪು ಆಗಿದ್ದರೆ ಮಾಸ್ತರ ಜನರು ತಿಳಿಸಬೇಕು.

ಪುಸ್ತಕ ಮೊರಲಿಕ್ಕೆ ಸಿದ್ಧವಾಗಿದೆ.

ಶಬ್ದಮಂಜರಿ ಕೋಶವು:—ಈ ಪುಸ್ತಕವನ್ನು ಕೈ. ವಾ. ಗಂ ಗಾಧರ ಮಡಿವಾಳೇಶ್ವರ ತೂರಮರಿ ಇವರು ರಚಿಸಿದ್ದು, ಇದರ ಪ್ರತಿಗಳು ಈಗ ಜನರಿಗೆ ಶಿಗುವದು ದುರ್ಲಭವಾದ್ದರಿಂದ, ಅದನ್ನು ಒಳ್ಳೇ ದಪ್ಪ ಕಾಗದದ ಮೇಲೆ ಸುವಾಚ್ಯ ಮೊಳೆಗಳಿಂದ ಛಾಪಿಸಿ, ಮೊದಲಿಗಿಂತಲೂ ಹೆಚ್ಚಿಗೆ ಹೊಸ ಶಬ್ದಗಳನ್ನೂ ಶಬ್ದವ್ಯುತ್ಪತ್ತಿಯನ್ನೂ ಹೆಚ್ಚಿಗೆ ಹಾಕಿ ತಯಾರು ಮಾಡಿದ್ದೇವೆ. ಅದರ ಬೆಲೆ ೪ ರೂಪಾಯಿ; ಟಪಾಲ ಹಾಸಲು ೪ ಆಣೆ. ಪುಸ್ತಕವು ಸಂಗ್ರಹಕ್ಕೆ ಎಷ್ಟು ಯೋಗ್ಯವಾದದ್ದೆಂಬದು ಅದನ್ನು ನೋಡಿದರೆ ತಿಳಿಯುವದು.

ಧಾರವಾಡ,
28–4–90. } ಚೆನ್ನವೀರ ಫಕೀರಪ್ಪ,
ಪ್ರೊಪ್ರೈಟರ್, ಕರ್ನಾಟಕ ಬುಕ್‌ಡಿಪೋ ಪ್ರೆಸ್

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರೆನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ ।
ಜಯಸುತ್ತಂ ಪ್ರತಿವಾಸದಾವಿಗೊಲವಿಂವೀಪತ್ರಮುಂ ಮುದ್ರಿಸಿ ॥
ನಯವಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುಜೈ ।
ದಯೆಯಿಂ ದೋಷವತಿದ್ದವೇಳ್ವುದುಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ॥೧॥

ಪುಸ್ತಕ ೨೫೫.] ಜೂಲ್ಯೆ ೧೪೯೯. [ಸಂಚಿಕೆ ೭.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ. ಸಂಬಂಧದ. ವೃತ್ತಾಂತಗಳು. ..

ಹೆಣ್ಣುಮಕ್ಕಳಿಗೆ ಮೇಲ್ತರವ ಶಿಕ್ಷಣವನ್ನು ಕೊಡುವ ಕೆಲ ಸವು ಸುಧಾರಿಸಿದ ದೇಶಗಳಲ್ಲಾ ವ್ಯವರೂ ಬಳ್ಳೀ ಭರದಿಂದ ಸಾಗುತ್ತಾ ಇವೆ, ಎಂದು ಅನ್ನಕೂಡಮ. ಅವರೂ, ಅದು ಸ್ಥಿರವಾಗಿ ಮುಂದಕ್ಕೆ ಹೆಜ್ಜೆ ಇಡುತ್ತಾ ನಡೆವದೆಂಬದು ನಿಶ್ಚಯವು. ಲಂಡನ್ ಯುನಿವರ್ಸಿಟಿಯಲ್ಲಿ ಹೆಂಗಸರಿಗೆ ಪದವಿಗಳನ್ನು ಕೊಡಬಹುದೆಂದು ಗೊತ್ತುಮಾಡಿ ಹತ್ತೇ ವರ್ಷಗಳಾದವು. ಇಷ್ಟು ಅವಧಿಯಲ್ಲಿ ಏಳು ಜನ ಹೆಂಗಸರು ಎಮ್. ಏ. ಪರೀಕ್ಷೆ ಕೊಟ್ಟವರೂ, ಒಂದು ನೂರಾ ನಾಲ್ವತ್ತಾರು ಜನರು ಬೀ. ಏ. ಪರೀಕ್ಷೆ ಕೊಟ್ಟವರೂ, ಇಬ್ಬರು ಡಾಕ್ಟರ ಆಫ್ ಸಾಯನ್ಸ್ ಎಂಬ ಬಿರುದು ಧರಿಸಿದವರೂ, ಇಪ್ಪತ್ತೊಂದು ಜನ ಬ್ಯಾಚಲರ್ ಆಫ್ ಸಾಯನ್ಸ್ ಎಂಬ ಪದವಿಯನ್ನು ಧರಿಸಿದವರೂ, ಎಂಟುಮಂದಿ ವೈದ್ಯಕೀಯ ಶಸ್ತ್ರಕ್ರಿಯೆಗಳ ಪರೀಕ್ಷೆಗಳನ್ನು ಕೊಟ್ಟು ಪದವಿಗ

ಳನ್ನು ಪಡೆದವರೂ ಆಗಿದ್ದಾರೆ. ಹೋದವರ್ಷ ಮೂವತ್ತೆರಡು ಜನ ಹೆಂಗಸರು ಪದವಿಗಳನ್ನು ಪಡೆದರು. ಕೇಂಬ್ರಿಜದಲ್ಲಿ ನಾಲ್ವತ್ತೆರಡು ಜನರು ಪದವಿಗಳನ್ನು ಪಡೆದರು. ಡಬ್ಲಿನ್, ಮ್ಯಾಂಚೆಸ್ತರದಲ್ಲಿರುವ ವಿಕ್ಟೋರಿಯಾ, ಲಂಡನ್, ಲೆಕ್ಸಫರ್ಡ್, ಕೇಂಬ್ರಿಜ, ಈ ಸ್ಥಳಗಳಲ್ಲಿ ಕಳೆದ ಹನ್ನೆರಡು ತಿಂಗಳುಗಳಲ್ಲಿ ಒಟ್ಟಿಗೆ ಒಂಬ ನೂರಾ ಒಂಭತ್ತು ಜನ ಹೆಂಗಸರು ಪದವಿಗಳನ್ನು ಹೊಂದಿದರು.

ಯಾವ ಹೈಸ್ಕೂಲಿನ ಫೀ ಮುಂತಾದ ಉಪ್ಪನ್ನವು ಖರ್ಚಿನ ಎರಡು ಮೂರನೇ ಅಂಶದಷ್ಟು ಇಲ್ಲವೋ, ಅವನ್ನು ಕಡಿಮೆ ಮಾಡಬೇಕೆಂದು ಸರಕಾರವವರ ಆಲೋಚನೆ ಉಂಟಂತೆ.

ಕಳೆದ ಮಾರ್ಚ್ ತಿಂಗಳಲ್ಲಿ ಆದ ವಕೀಲಿಯ ಪರೀಕ್ಷೆಯಲ್ಲಿ ಭೋರನೆಂಬ ಅಷ್ಟಾಹೆಸರಿನ ಬಬ್ಬ ಮರಾಠೀ ಗೃಹಸ್ಥನು ಪಾಸಾದನು. ಈತನು ಕುರುಡನಿದ್ದಾನೆ. ಮೊದಲು ಕಲಿಯುವಾಗ ಕಾಯಿದೆಗಳನ್ನು ಬೇರೆಜನರಿಂದ ಓದಿಸಿ ಕೇಳಿ, ಅಭ್ಯಾಸ ಮಾಡಿದನು! ಮತ್ತು ಪರೀಕ್ಷೆಯ ಕಾಲಕ್ಕೆ ಪ್ರಶ್ನೆಗಳ ಉತ್ತರಗಳನ್ನು ತಾನು ಹೇಳಿ ಬೇರೊಬ್ಬನಿಂದ ಬರಿಸಿದನು! ಹೀಗೆ ಮಾಡಲಿಕ್ಕೆ ಪರೀಕ್ಷಕರ ಸಮ್ಮತಿಯನ್ನು ಅವನು ಮೊದಲೇ ಪಡೆದಿದ್ದನು. ಹೊಗಳತಕ್ಕಂಥ ಅವನ ಈ ಉದ್ಯೋಗವನ್ನು ನೋಡಿ ಯಾರಾದರು ಬೆರಗಾಗಬಹುದು!

ಅಮೇರಿಕದೊಳಗಿನ ನಾಯಗರಾ ನದಿಯ ತಡಸಲವ ನೀರಿನ ಶಕ್ತಿಯಿಂದ ಗಿರಣಿಯ ಯಂತ್ರಗಳನ್ನು ನಡಿಸುವ ಆಲೋಚನೆ ನಡೆದದೆ.

THE SUN'S ANNULAR ECLIPSE.

ಕಂಕಣ ಸೂರ್ಯಗ್ರಹಣ.

ಕಳೆದ ಜ್ಯೇಷ್ಠ ಬಹುಳ ಅಮಾವಾಸ್ಯೆ ಮಂಗಳವಾರ ದಿವಸ ಮಧ್ಯಾಹ್ನವಲ್ಲಿ ಸೂರ್ಯಗ್ರಹಣವಾಯಿತು. ನರ್ಮದೆಯ ದಕ್ಷಿಣವಲ್ಲಿ (ನಮ್ಮ ದೇಶದಲ್ಲಿ) ಅಮಾವಾಸ್ಯೆಗೆ ತಿಂಗಳು ಮುಗಿಯುತ್ತದೆಂದು ತಿಳಿಯುತ್ತಾರೆ. ಹಾಗಾದರೆ, ಈ ಅಮಾವಾಸ್ಯೆಯು ಜ್ಯೇಷ್ಠ ಮಾಸದೊಳಗಿನದಾಗುತ್ತದೆ. ನರ್ಮದೆಯ ಉತ್ತರಕ್ಕೆ ಪುಣ್ಣೆವರೆಗೆ ತಿಂಗಳು ಮುಗಿಯುತ್ತದೆಂದು ತಿಳಿಯುತ್ತಾರೆ. ಹೀಗೆ ತಿಳಿವರೆ, ಈ ಅಮಾವಾಸ್ಯೆಯು ಆಷಾಢದೊಳಗೆ ಬರುತ್ತದೆ. ಮತ್ತು ಇಂಗ್ಲಿಷ ಪಂಚಾಂಗದಂತೆ ಆ ಹೊತ್ತು ಹೋದ ಜೂನ ತಿಂಗಳ ೦೩ನೇ ತಾರೀಖು ಆಗುತ್ತದೆ. ಸಾಮಾನ್ಯ ಸೂರ್ಯಗ್ರಹಣಗಳಿಗಿಂತ ಈ ಗ್ರಹಣದಲ್ಲಿ ಬಂದು ವಿಶೇಷ ಚಮತ್ಕಾರ ಉಂಟು. ಯಾಕಂದರೆ, ಇಮ ಉತ್ತರ ಹಿಂದುಸ್ಥಾನದಲ್ಲಿ ಕಂಕಣಾಕೃತಿಯಾಯಿತು. ಇಂಥಾ ಚಮತ್ಕಾರವು ವಿಶೇಷವಾದ ಸ್ಥಳಗಳಲ್ಲಿ ಮಾತ್ರ ಬಹಳ ವರ್ಷಕ್ಕೊಮ್ಮೆ ದೃಷ್ಟಿಗೆ ಬೀಳುತ್ತದೆ. ಅವರೆ ಈ ಗ್ರಹಣದ ಚಮತ್ಕಾರವು ನಮ್ಮ ವಾಚಕರ ದೃಷ್ಟಿಗೆ ಬೀಳಲಿಲ್ಲ. ನಮ್ಮ ಬಾಂಧವರಾದ ಉತ್ತರ ಹಿಂದುಸ್ಥಾನದ ಜನರ ದೃಷ್ಟಿಗೆ ಮಾತ್ರ ಬಿತ್ತು.

ಸೂರ್ಯನಿಗೆ ಚಂದ್ರನು ಅಡ್ಡ ಬರುವದರಿಂದ ಸೂರ್ಯಗ್ರಹಣವಾಗುತ್ತದೆ, ಎಂಬದನ್ನು ಎಲ್ಲರೂ ಬಲ್ಲರು. ಗ್ರಹಣವು ಪ್ಯಾಗೆ ಆಗುವದು, ಎಂಬದರ ಆಕೃತಿಯನ್ನು ಕಾಗದದ ಮೇಲಾಗಲಿ ಹಲಿಗೆಯ ಮೇಲಾಗಲಿ ತೆಗೆಯುತ್ತಾರೆ. ಅದಕ್ಕೆ ಜ್ಯೋತಿಷಶಾಸ್ತ್ರದಲ್ಲಿ ಪರಿಲೇಖವೆಂಬ ಹೆಸರು. ಗ, ಖ ಪರಿಲೇಖಗಳಲ್ಲಿ ತೋರಿಸಿದಂತೆ, ಬಹ್ಮೊಮ್ಮೆ ಗ್ರಹಣ ಹಿಡಿದಾಗ ಸೂರ್ಯ

ನ ಕೆಲವು ಭಾಗ ಮಾತ್ರ ಕಾಣದ ಹಾಗಾಗುತ್ತದೆ. ಇಂಥಾ ಗ್ರ
ಹಣಕ್ಕೆ ಖಂಡಗ್ರಹಣವೆಂತಲೂ ಅಪೂರ್ಣ ಗ್ರಹಣವೆಂತಲೂ
ಹೆಸರುಗಳುಂಟು. ಬಹ್ಮೊಮ್ಮೆ ಇಡೀ ಸೂರ್ಯನನ್ನು ಚಂದ್ರ
ನು ಮುಚ್ಚಿ ಬಿಡುತ್ತಾನೆ. ಇಂಥಾ ಗ್ರಹಣಕ್ಕೆ ಪೂರ್ಣ ಗ್ರಹ
ಣವೆಂತಲೂ ಖಗ್ರಾಸ ಗ್ರಹಣವೆಂತಲೂ ಅನ್ನುವರು. ಅವರೆ ಇ
ವುಗಳಿಂದ ತೀರ ಭಿನ್ನವಾದ ಚಮತ್ಕಾರವು ಬಹ್ಮೊಮ್ಮೆ ದೃಷ್ಟಿ
ಗೆ ಬೀಳುತ್ತದೆ. ಅವನ್ನು ಈ ಪರಿಲೇಖದಲ್ಲಿ ತೋರಿಸಿದ್ದೀವೆ.
ಅದು ಹ್ಯಾಗಂದರೆ, ಬಹ್ಮೊಮ್ಮೆ ಸೂರ್ಯನ ನಡುವಿನ ವರ್ತು
ಲಾಕಾರ ಭಾಗವು ಕಾಣದಹಾಗಾಗಿ, ಸುತ್ತುಮುತ್ತಲಿನ ಕೇಕ
ಯಂಥ ಭಾಗಮಾತ್ರ ಕಾಣುತ್ತದೆ. ಇಂಥ ಸೂರ್ಯಗ್ರಹಣಕ್ಕೆ
ಕಂಕಣಾಕೃತಿ ಗ್ರಹಣವೆಂಬ ಹೆಸರು.



ಚಂದ್ರಗ್ರಹಣವಾದಾಗ ಪೃಥ್ವಿಯ ಮೇಲೆ ಯಾವ ಯಾವ ಭಾ
ಗಗಳಿಗೆ ರಾತ್ರಿಯಾಗಿರುತ್ತದೆಯೋ, ಅಲ್ಲಿಯ ಜನರಿಗೆ ಅದು ಕಾ
ಣುತ್ತದೆ. ಸೂರ್ಯಗ್ರಹಣದ ಹಾಗು ಹಾಗಲ್ಲ. ಸೂರ್ಯಗ್ರಹ

ಸೂರ್ಯನು ಕಂಕಣಾಕೃತಿಯಾಗಲಿ ಖಗ್ರಾಸವಾಗಲಿ ಇದ್ದರೆ, ಅದು ಪೃಥ್ವಿಯ ಮೇಲಿನ ಕೆಲವು ಭಾಗದ ಜನರಿಗೆ ಮಾತ್ರ ಹಾಗೆ ತೋರುತ್ತದೆ. ಕೆಲವು ಭಾಗದ ಜನರಿಗೆ ಅಪೂರ್ಣ ತೋರುತ್ತದೆ. ಆದರೆ ಕೆಲವು ಭಾಗದಲ್ಲಿ ಸೂರ್ಯನು ಕ್ಷಿತಿಜದ ಮೇಲೆ ಇದ್ದಾಗ್ಯೂ, ಅಲ್ಲಿಯವರಿಗೆ ಗ್ರಹಣವು ಕಾಣುವದೇ ಇಲ್ಲ. ಆದರಿಂದ, ಸ್ಥೂಲವಿಶೇಷವಲ್ಲಿ ಚಂದ್ರಗ್ರಹಣಕ್ಕಿಂತ ಸೂರ್ಯ ಗ್ರಹಣಗಳು ಕಡಿಮೆಯಾಗುತ್ತವೆ.

ಹೋದ ಎಂಟು ವರ್ಷಗಳಲ್ಲಿ ಭೂಮಿಯ ಮೇಲೆ ಚಂದ್ರಗ್ರಹಣಗಳು ಒಟ್ಟಿಗೆ ಹನ್ನೆರಡು ಆದವು. ಅವುಗಳಲ್ಲಿ ಈ ದೇಶದೊಳಗೆ ಆರು ಕಂಡವು. ಮತ್ತು ಸೂರ್ಯಗ್ರಹಣಗಳು ಒಟ್ಟಿಗೆ ಹತ್ತೊಂಬತ್ತು ಆದವು. ಅವುಗಳಲ್ಲಿ ಮೂರು ಮಾತ್ರ ಈ ದೇಶವಲ್ಲಿ ಕಂಡವು. ಮತ್ತು ಅವಾವರೂ ಯಾವತ್ತು ಭಾಗಗಳ ಜನರಿಗೆ ಕಾಣಲಿಲ್ಲ. ಈ ಹತ್ತೊಂಬತ್ತು ಗ್ರಹಣಗಳಲ್ಲಿ ಏಳು ಖಗ್ರಾಸ ಇದ್ದವು. ಮತ್ತು ಆರು ಕಂಕಣಾಕೃತಿ ಇದ್ದವು. ಸನ್ ೧೮೮೬ ಇಸವಿಯ ಮೇ ತಿಂಗಳಲ್ಲಿ ಬಂದು ಗ್ರಹಣವಾಯಿತು. ಅದು ಹಿಂದುಸ್ಥಾನದಲ್ಲಿ ತೀರ ತೆಂಕಣ ದಂಡೆಯ ಜನರಿಗೆ ಕಾಣಲಿಲ್ಲ. ಸನ್ ೧೮೮೭ ಇಸವಿಯ ಅಗಷ್ಟದಲ್ಲಿ ಎರಡನೆಯದಾಯಿತು. ಅದು ಅನ್ಯದೇಶಗಳಲ್ಲಿ ಖಗ್ರಾಸ ಕಂಡಿತು. ಆದರೆ ಹಿಂದುಸ್ಥಾನದಲ್ಲಿ ಖಂಡಗ್ರಹಣವೇ ಕಾಣಿಸಿತು. ಇದಾವರೂ ಉತ್ತರಹಿಂದುಸ್ಥಾನದಲ್ಲಿ ಉತ್ತರ ಭಾಗದ ಜನರಿಗೆ ಮಾತ್ರ ಕಾಣಿಸಿತು. ಎಲ್ಲ ಕಡೆಯಲ್ಲಿ ಕಾಣಲಿಲ್ಲ. ಹೋದ ವರ್ಷ ಜೂನದಲ್ಲಿ ಮೂರನೇ ಗ್ರಹಣವಾಯಿತು. ಅದು ಅನ್ಯದೇಶಗಳಲ್ಲಿ ಕಂಕಣಾಕೃತಿಯಾಗಿ ಕಂಡಿತು. ಆದರೆ ಈ ದೇಶವಲ್ಲಿ ಖಂಡಗ್ರಹಣವಾಗಿಯೇ ಕಂಡಿತು. ಅದಾವರೂ ದಕ್ಷಿಣ ಹಿಂದುಸ್ಥಾನದ ದಕ್ಷಿ

ಣ ಭಾಗದ ಜನರಿಗೆ ಮಾತ್ರ ಕಂಡಿತು. ಈ ಎಂಟು ವರ್ಷಗಳ ಹಿಂದಿನ ಹನ್ನೆರಡು ವರ್ಷಗಳಲ್ಲಿ ಹಿಂದುಸ್ಥಾನದೊಳಗೆ ಹದಿನಾಲ್ಕು ಚಂದ್ರಗ್ರಹಣಗಳೂ ಆರು ಸೂರ್ಯಗ್ರಹಣಗಳೂ ಕಾಣಿಸಿದವು. ಇದರ ಮೇಲಿಂದ ತಿಳಿಯುವದೇನಂದರೆ, ಸೂರ್ಯಗ್ರಹಣಗಳು ಬಹಳ ಆಗುತ್ತವೆ, ಆದರೆ ಕೆಲವು ಮಾತ್ರ ಕಾಣುತ್ತವೆ. ಖಗ್ರಾಸಗ್ರಹಣ, ಕಂಕಣಗ್ರಹಣ ಇವು ದೇಶ ವಿಶೇಷದಲ್ಲಿ ಅಥವಾ ಸ್ಥಳವಿಶೇಷದಲ್ಲಿ ಬಹಳ ವರ್ಷಕ್ಕೆ ಕಾಣಿಸುತ್ತವೆ. ಇಂಗ್ಲಂಡವನ್ನು ೧೧೪೦ನೇ ವರ್ಷ ಖಗ್ರಾಸ ಸೂರ್ಯಗ್ರಹಣವಾಗಿತ್ತು; ತರುವಾಯ ೧೭೧೫ರಲ್ಲಿ ಆಯಿತು. ಅಂದರೆ ನಡುವಿನ ೫೭೫ ವರ್ಷಗಳಲ್ಲಿ ಖಗ್ರಾಸ ಸೂರ್ಯಗ್ರಹಣವು ಇಂಗ್ಲಂಡದಲ್ಲಿ ಆಗಲೇ ಇಲ್ಲ. ಶಕ ೧೭೬೯ನೇ ವರ್ಷದ ಭಾದ್ರಪದ ಮಾಸದಲ್ಲಿ ಅಂದರೆ ಇ. ಸ. ೧೮೪೭ನೇ ವರ್ಷದ ಅಕ್ಟೋಬರ ತಿಂಗಳಲ್ಲಿ ಮುಂಬಯಿಯಲ್ಲಿಯೂ ಅದರ ನೆರೆಹೊರೆಯ ಪ್ರದೇಶಗಳಲ್ಲಿಯೂ ಕಂಕಣಾಕೃತಿ ಸೂರ್ಯ ಗ್ರಹಣವಾಗಿತ್ತು. ಆ ಹೊತ್ತಿನಿಂದ ಇಲ್ಲಿಯವರೆಗೆ ಅಂದರೆ ೪೩ ವರ್ಷಗಳಲ್ಲಿ ಮುಂಬಯಿಯೊಳಗೆ ಅಂಥ ಗ್ರಹಣವಾಗಲಿಲ್ಲ. ಇದರ ಮೇಲಿಂದ ಇಂಥ ಚಮತ್ಕಾರವ ಯೋಗವು ಎಷ್ಟು ಅಪರೂಪವಾಗಿ ದೃಷ್ಟಿಗೆ ಬೀಳುತ್ತದೆಂಬದು ಸಹಜವೇ ತಿಳಿಯುವದು.

ಕಳೆವ ತಿಂಗಳಲ್ಲಿ ಆದ ಸೂರ್ಯಗ್ರಹಣವು ದಕ್ಷಿಣ ಹಿಂದುಸ್ಥಾನದೊಳಗೆ ಕಂಕಣಾಕೃತಿಯಾಗಿ ತೋರಲಿಲ್ಲ, ಆ ಆಕೃತಿಯಂತೆ ತೋರಿತು; ಉತ್ತರ ಹಿಂದುಸ್ಥಾನದೊಳಗಿನ ಕೆಲವು ಪ್ರದೇಶಗಳಲ್ಲಿ ಮಾತ್ರ ಇದು ಕಂಕಣಾಕೃತಿಯಾಗಿ ತೋರಿತು, ಹಿಂದುಸ್ಥಾನದ ನಕಾಶೆಯನ್ನು ಕೈಯಲ್ಲಿ ತಕ್ಕೊಂಡು, ಅದರ ಮೇಲೆ ಡೇರಾ ಇಸ್ಮಾಯಿಲಖಾನ, ಫರೀದಕೋಟ, ಪಾಣಿಪತ,

ಮುರಾದಾಬಾದ, ಬರೇಲಿ, ಗೋರಖಪೂರ, ಮೊಂಗೀರ ಈ ಪ
ಟ್ಟಣಗಳಿಂದಲೂ ಹೋಗುವಂತೆ ಒಂದು ರೇಷೆಯನ್ನು ತೆಗೆಯ
ಬೇಕು. ಆ ರೇಷೆಯ ಮೇಲೆ ಬರುವ ಯಾವತ್ತು ಸ್ಥಳಗಳ ಜನ
ರಿಗೂ, ಅದರ ಉತ್ತರ ದಕ್ಷಿಣಗಳಲ್ಲಿ ಐವತ್ತು ಮೈಲುಗಳವರೆಗೆ
ಇರುವ ಸ್ಥಳಗಳ ಜನರಿಗೂ, ಈ ಗ್ರಹಣವು ಕಂಕಣಾಕೃತಿಯಾ
ಗಿತೋರಿತು. ಈ ಪ್ರದೇಶದಲ್ಲಿ ಫಿರೋಜಪೂರ, ಫಿರೋಜಶಹಾ
ನಾಭಾ, ಪತ್ತಿಯಾಲಾ, ಸ್ಥಾನೇಶ್ವರ, ರಾಮನಗರ, ರಾಮಪೂರ,
ಅಯೋಧ್ಯೆ, ಪಾಟನಾ, ದುರ್ಭಂಗ, ರಾಜಮಹಾಲ, ಮುರ್ಶಿದಾ
ಬಾದ, ಢಾಕಾ ಎಂಬ ಪ್ರಸಿದ್ಧ ಪಟ್ಟಣಗಳುಂಟು. ಈ ಪ್ರದೇಶ
ದ ದಕ್ಷಿಣಕ್ಕೆ ಇರುವ ಜನರಿಗೆ ಖ ಆಕೃತಿಯಂತೆಯೂ ಉ
ತ್ತರಕ್ಕಿರುವ ಜನರಿಗೆ ಗ ಆಕೃತಿಯಂತೆಯೂ ಈ ಗ್ರಹಣವು
ಖಂಡಾಕೃತಿಯಾಗಿ ತೋರಿತು. ಮತ್ತು ಅಲ್ಲಿಂದ ದಕ್ಷಿಣಕ್ಕೂ
ಉತ್ತರಕ್ಕೂ ಹೋದ ಹೋದ ಹಾಗೆ ಗ್ರಾಸವು ಕಡಿಮೆಯಾಗಿ
ತೋರಿತು. ಕಂಕಣಾಕೃತಿಯಾಗಿ ತೋರುವ ಪ್ರದೇಶದ ಮೇ
ಲೆ ಹೇಳಿದ ಮಧ್ಯರೇಷೆಯಲ್ಲಿ ಗ್ರಹಣದ ಕಂಕಣಾಕೃತಿಯು
ಸುಮಾರು ನಾಲ್ಕು ಮಿನಿಟು ಕಾಣಿಸಿತು. ಉಳಿದ ಪ್ರದೇಶಗಳಲ್ಲಿ
ಅವಕ್ಕೂ ಕಡಿಮೆ ವೇಳೆ ತೋರಿತು. ಪೃಥ್ವಿಯ ಮೇಲಿನ ಬೇರೆ
ಕೆಲವು ದೇಶಗಳಲ್ಲಿಯೂ ಈ ಗ್ರಹಣವು ಕಂಕಣಾಕೃತಿಯಾಗಿ
ಕಂಡಿತು. ಕಂಕಣದರ್ಶನ ಪ್ರದೇಶದ ಮಧ್ಯರೇಷೆಯು ಕಾ
ಸ್ಪಿಯನ್ ಸಮುದ್ರದ ದಕ್ಷಿಣ ತೀರ, ಏಶಿಯ ಮೈನರ, ಕ್ಯಾಂಡಿ
ಯ ನಡುಗಡ್ಡೆ, ತ್ರಿಪೋಲಿದೇಶ, ಸೆನಿಗ್ಯಾಂಬಿಯಾ ದೇಶ, ಇವು
ಗಳೊಳಗಿಂದ ಹಾಯುತ್ತದೆ. ಸೆನಿಗ್ಯಾಂಬಿಯದ ಪಶ್ಚಿಮ ದಂಡೆ
ಯ ಮೇಲೆ ಸೂರ್ಯೋದಯವಾದ ಮೇಲೆ ಸ್ವಲ್ಪ ಹೊತ್ತಿನಲ್ಲಿ
ಈ ಗ್ರಹಣವಾಯಿತು. ಅದರೆ ಅಲ್ಲಿ ಬೆಳಿಗಿನ ೬ಳು ಬಡಿಯುವಾ
ಗ ಮುಂಬಯಿಯಲ್ಲಿ ಮಧ್ಯಾಹ್ನದ ಒಂದು ಘಂಟೆ ಬಡಿದಿರ
ತ್ತದೆ!!

ಚಂದ್ರನೂ ಸೂರ್ಯನೂ ಮೂಡಣದಿಂದ ಪಡುವಣಕ್ಕೆ ಹೋಗುವಂತೆ ತೋರಿದಾಗ್ಯೂ, ಚಂದ್ರನ ನಿಜವಾದ ಗತಿಯೂ ಪೃಥ್ವಿಯ ವಾರ್ಷಿಕ ಪ್ರದಕ್ಷಿಣೆಯಿಂದ ಆಗುವ ಸೂರ್ಯನ ಗತಿಯೂ ಪಡುವಣದಿಂದ ಮೂಡಣಕ್ಕೆ ಇರುತ್ತದೆ. ಮತ್ತು ಸೂರ್ಯನಿಗಿಂತ ಚಂದ್ರನಗತಿಯು ಬಹಳ ಹೆಚ್ಚಿರುತ್ತದೆ. ಗ್ರಹಣವಾಗುವ ಪೂರ್ವದಲ್ಲಿ ಸೂರ್ಯನ ಪಡುವಣಕ್ಕೆ ಚಂದ್ರನಿರುತ್ತಾನೆ. ಆದರೆ ಅವನು ತೀವ್ರ ನಡೆಯುವವನಾದಕಾರಣ, ಸೂರ್ಯನ ಬಿಂಬವನ್ನು ದಾಟಿ ಕೆಲವು ಹೊತ್ತು ಆದಮೇಲೆ, ಸೂರ್ಯನ ಮೂಡಣಕ್ಕೆ ಬರುತ್ತಾನೆ. ಪಡುವಣದಿಂದ ಚಂದ್ರನು ಬರುತ್ತಿರುವಾಗ ಸೂರ್ಯನ ಪಡುವಣ ಅಂಚಿಗೆ ಮರಿಯಾಗಲಾಗಿ, ಸೂರ್ಯನಿಗೆ ಆ ದಿಕ್ಕಿನಿಂದ ಗ್ರಹಣವಾಗಲಾರಂಭಿಸುತ್ತದೆ. ಅದಕ್ಕೆ ಗ್ರಹಣದ ಸ್ಪರ್ಶಕಾಲವೆಂಬ ಹೆಸರು. ಸಾರಾಂಶ, ಸೂರ್ಯ ಗ್ರಹಣವ ಸ್ಪರ್ಶವು ಸೂರ್ಯಬಿಂಬದ ಪಡುವಣದಿಕ್ಕಿನಿಂದ ಆಗುತ್ತದೆ. ಮತ್ತು ಮುಂದೆ ಬರು ಬರುತ್ತಾ ಸೂರ್ಯ ಬಿಂಬದ ಹೆಚ್ಚಿಚ್ಚು ಭಾಗವು ಅಚ್ಛಾದಿತವಾಗ ಹತ್ತುತ್ತದೆ. ಬಳಿಕ, ಕೆಲವು ಹೊತ್ತಿನ ಮೇಲೆ ಅದು ಕಡಿಮೆ ಕಡಿಮೆಯಾಗುತ್ತಾ ಸೂರ್ಯನ ಮೂಡಣ ಬದಿಯಿಂದ ಚಂದ್ರನು ಸೂರ್ಯನನ್ನು ಬಿಟ್ಟು ಹೋಗುತ್ತಾನೆ. ಅಂದರೆ ಆಗ ಗ್ರಹಣ ಬಿಡುತ್ತದೆ. ಇದಕ್ಕೆ ಗ್ರಹಣದ ಮೋಕ್ಷಕಾಲವೆಂಬ ಹೆಸರು. ಮೋಕ್ಷವೆಂದರೆ ಬಿಡುಗಡೆಎಂಬ ಅರ್ಥವು. ಸೂರ್ಯಗ್ರಹಣವ ಮೋಕ್ಷವು ಪೂರ್ವಕ್ಕೆ ಆಗುತ್ತದೆ. ಬಿಂಬವ ಎಷ್ಟು ಭಾಗವು ಅಚ್ಛಾದಿತವಾಗುತ್ತದೋ, ಅಷ್ಟು ಪ್ರಗ್ರಾಸವಾಯಿತೆಂದೆನ್ನುವರು. ಸ್ಪರ್ಶಕ್ಕೂ ಮೋಕ್ಷಕ್ಕೂ ನಡುವಿನ ಹೊತ್ತಿಗೆ ಪರ್ವಕಾಲವೆಂಬ ಹೆಸರು. ಈ ಕಾಲವ ಮಧ್ಯದ ಸುವಾರಿನಲ್ಲಿ ಮಹತ್ತವು ಗ್ರಾಸವಾಗುತ್ತದೆ, ಅವಕ್ಕೆ ಗ್ರಹಣದ

ಮಧ್ಯನಾಯಿತೆಂದೆನ್ನುವರು. ಆ ಕಾಲಕ್ಕೆ ಲಬ್ಧಿತವಾಗುವ ಭಾಗವ ಗ್ರಾಸವೆನ್ನು ಪಂಚಾಂಗದೊಳಗೆ ಆಕೃತಿಯಿಂದ ಬರೆದು ತೋರಿಸುವರು. ಗ್ರಾಸವೆಂದರೆ ತಿನ್ನೋಣವು. ರಾಹು ಸೂರ್ಯನನ್ನು ಗ್ರಾಸಿಸುತ್ತಾನೆಂದು ಪೂರ್ವಿಕರು ತಿಳಿಯುತ್ತಿದ್ದ ರಾವಶಾರಣ, ಗ್ರಾಸವೆಂಬ ಸಂಜ್ಞೆಯು ಪ್ರಚಾರದಲ್ಲಿ ಬಂದಿರಬಹುದು. ಈ ಗ್ರಹಣವು ಹಿಂದುಸ್ಥಾನದಲ್ಲಿ ಇಳುಹೊತ್ತಿಗೆ ಆದ ದರಿಂದ, ಆಗ ಸೂರ್ಯನು ಆಕಾಶದೊಳಗೆ ಪಡುವಣದಿಕ್ಕಿನಲ್ಲಿ ಇದ್ದನು. ಅತ್ತ ಕಡೆಗೆ ಮೋರೆಮಾಡಿ ಆಕಾಶದ ಕಡೆಗೆ ನೋಡಲಾಗಿ, ಎಷ್ಟೋ ಜನರಿಗೆ ಗ್ರಹಣದ ಸ್ಥಿತಿಯು ಈ ಪುಸ್ತಕದೊಳಗಿನ ಆಕೃತಿಗಳಂತೆ ತೋರಿತು. ಹಿಂದುಸ್ಥಾನದೊಳಗಿನ ಕೆಲವು ಸ್ಥಳಗಳ ಸ್ಪರ್ಶ ಕಾಲವನ್ನೂ ಗ್ರಾಸವನ್ನೂ ಕೆಳಗೆ ಬರೆಯುತ್ತೇವೆ. ಇಲ್ಲಿ ಮದ್ರಾಸದ ವೇಳೆಯನ್ನು ತಕ್ಕೊಂಡಿದ್ದೇವೆ.

ಸ್ಥಲದ ಹೆಸರು.	ಸ್ಪರ್ಶ ಕಾಲ.		ಮೋಕ್ಷ ಕಾಲ.		ಪರ್ವ ಕಾಲ.		ಸೂರ್ಯಬಿಂಬವು ೧೦ ಅಂಗುಲದ್ದೆಂದು ತಿಳಿದು ಗ್ರಾಸವು.
	ಘಂಟೆ	ಮಿನಿಟು.	ಘಂಟೆ	ಮಿನಿಟು.	ಘಂಟೆ	ಮಿನಿಟು.	
ಹರಿದ್ವಾರ ...	೫	೫೬	೬	೩	೬	೫೮	೧೧
ದಿಲ್ಲಿ ...	೫	೬೬	೬	೯	೬	೮೫	ಕಂಕಣಗ್ರಹಣ.
ಲಖನೌ ...	೫	೫೧	೬	೧೦	೬	೮೧	೧೧
ಉಜ್ಜಯಿನಿ ...	೫	೫೩	೬	೧೮	೬	೫೩	೧೦
ಕಲಕತ್ತೆ ...	೫	೮೧	ಸೂರ್ಯಾಸ್ತದಲ್ಲಿ ...				೧೧
ಸೂರತ ...	೫	೫೬	೬	೧೪	೬	೬೦	೪
ನಾಗಪುರ ...	೫	೫೩	೬	೧೬	೬	೫೯	೯
ಪುಳಿ ...	೫	೫೪	೬	೧೮	೬	೫೬	೯
ಮುಂಬಯಿ ...	೫	೮೦	೬	೧೮	೬	೫೮	೪
ಮದ್ರಾಸ ...	೫	೫೧	೬	೧೫	೬	೬೮	೩

ಕಾಗದವ ಎರಡು ವರ್ತುಲಾಕಾರವ ತುಂಡುಗಳನ್ನು ತೆ
ಕ್ಕೊಳ್ಳಬೇಕು. ಅವುಗಳಲ್ಲಿ ಒಂದು ತುಂಡು ಬೆಳ್ಳಗಿರಬೇಕು;
ಮತ್ತೊಂದು ಬೇರೆ ಬಣ್ಣದ್ದಿರುವದಲ್ಲದೆ ಸ್ವಲ್ಪ ಸಣ್ಣದಿರಬೇಕು.
ಅವು ಮುಮುಡದೆ ತೀರ ಸಪಾಟು ನಿಲ್ಲುವಂತೆ ಏನಾದರೂ ಹಂಚಿ
ಕೆ ಮಾಡಬೇಕು. ಸಣ್ಣದೊಂದು, ದೊಡ್ಡದೊಂದು ಹೀಗೆ ಸತುವಿ
ನ ಎರಡು ದುಂಡನ್ನ ತಗಡುಗಳನ್ನು ತಕ್ಕೊಂಡು, ಸಣ್ಣದಕ್ಕೆ
ಕರೇ ಬಣ್ಣ ಹಚ್ಚಿ ವರೂ ಸಾಗುತ್ತದೆ. ಈ ಕಾಗದಗಳ ಇಲ್ಲವೆ
ತಗಡುಗಳ ಮಧ್ಯಬಿಂದುಗಳಲ್ಲಿ ತೂತುಗಳನ್ನು ಮಾಡಿ, ಒಂದು
ಹಗ್ಗದೊಳಗೆ ಪೋಣಿಸಿ, ಅವು ಒಂದಕ್ಕೊಂದು ಸ್ವಲ್ಪ ಅಂತರದ
ಮೇಲೆ ಸರಿದಾಡದಹಾಗೆ ನಿಲ್ಲುವಂತೆ ಒಂದು ಹಂಬಿಕೆ ಮಾಡಬೇ
ಕು. ಸಣ್ಣ ತಗಡು ಕೆಳಗೆ, ದೊಡ್ಡ ತಗಡು ಮೇಲೆ, ಆಗುವಂತೆ
ಆ ಹಗ್ಗವನ್ನು ತೂಗಹಾಕಬೇಕು. ಅದರ ಕೆಳಗೆ ತಗಡಿನ ಪ
ಕ್ಕೆಗೆ ನೋಡಿದರೆ, ಕೆಳಗಿನ ತಗಡಿನಮೂಲಕ ಮೇಲಿನ ತಗಡು
ತೀರಕಾಣದ ಹಾಗಾಗುವಂತೆ ನಾವು ಕೂಡ್ರಬಹುದು, ಅಲ್ಲವೆ
ನಿಲ್ಲಬಹುದು. ಆ ಮೇಲೆ, ನಮ್ಮ ವೃಷ್ಟಿಯನ್ನು ಕದಲಿಸದೆ,
ಸಣ್ಣ ತಗಡನ್ನು ಸ್ವಲ್ಪ ಮೇಲಕ್ಕೆ ಸರಿಸಬೇಕು. ಅಂದರೆ ಕೆ
ಳಗಿನ ತಗಡಿನಿಂದ ಮೇಲಿನ ತಗಡಿನ ನಡುವಿನ ದುಂಡನ್ನ ಭಾ
ಗವು ಮಾತ್ರ ಕಾಣದ ಹಾಗಾಗಿ, ಸುತ್ತುಮುತ್ತಲಿನ ಕಂಕಣಾ
ಕೃತಿಯ ಭಾಗವು ಕಾಣಿಸುವದು. ಬಳಿಕ, ನಾವು ನೆಟ್ಟಗೆ ದ
ಕ್ಷಿಣಕ್ಕೆ ಹೋದರೆ, ಕೆಳಗಿನ ತಗಡಿನಿಂದ ಮೇಲಿನವರ ಉತ್ತರ
ದಿಕ್ಕಿನ ಭಾಗವು ಇ ಆಕೃತಿಯಂತೆ ಅಚ್ಛಾದಿತವಾಗುತ್ತದೆ.
ಉತ್ತರಕ್ಕೆ ಹೋಗುವವರಿಂದ ದಕ್ಷಿಣದಿಕ್ಕಿನ ಭಾಗವು ಗ
ಆಕೃತಿಯಂತೆ ಅಚ್ಛಾದಿತವಾಗುತ್ತದೆ. ಮೇಲಿನ ತಗಡು ಸೂ
ರ್ಯನಂತಲೂ, ಕೆಳಗಿನ ತಗಡು ಚಂದ್ರನಂತಲೂ, ನಮ್ಮ ದೃ

ಷ್ಟಿಯು ಪೃಥ್ವಿಯ ಮೇಲೆ ನಾವು ನಿಂತ ಸ್ಥಾನವೆಂತಲೂ ತರ್ಕಿಸಿದರೆ, ಕಂಕಣಗ್ರಹಣವೂ ಖಂಡಗ್ರಹಣವೂ ಹ್ಯಾಗಾಗುತ್ತವೆಂಬವರ ಕಲ್ಪನೆಯು ಈ ಸುಲಭವಾದ ಪ್ರಯೋಗದಿಂದ ಸಹಜವಾಗಿ ನಮ್ಮ ಮನಸಿನೊಳಗೆ ಬರಬಹುದು. ನೆಟ್ಟಗೆ ತಗಡುಗಳ ಕೆಳಗೆನಿಂತು, ಕೆಳಗಿನ ತಗಡನ್ನು ಹಗ್ಗದೊಳಗಿಂದ ತೆಗೆದು, ಸೊಟ್ಟ ಮಾಡದೆ, ಅದರಿಂದ ಮೇಲಿನ ತಗಡು ಮುಚ್ಚಿ ಹೋಗದಂತೆ ಪಶ್ಚಿಮಕ್ಕೆ ಬಯ್ಯಬೇಕು; ಆ ಮೇಲೆ ಕೆಳಗಿನ ತಗಡನ್ನು ಮೆಲ್ಲ ಮೆಲ್ಲನೆ ಪೂರ್ವಕ್ಕೆ ತರಬೇಕು. ಅಂದರೆ ಸ್ಪರ್ಶ, ಮಧ್ಯ, ಮೋಕ್ಷಗಳು ಹ್ಯಾಗಾಗುತ್ತವೆಂಬದು ತಿಳಿಯುತ್ತದೆ. ತಗಡನ್ನು ನೆಟ್ಟಗೆ ಪಶ್ಚಿಮದಿಂದ ಪೂರ್ವಕ್ಕೆ ಬಯ್ಯದೆ ಮೊದಲು ಸ್ವಲ್ಪ ಉತ್ತರಕ್ಕಾಗಲಿ ದಕ್ಷಿಣಕ್ಕಾಗಾಲಿ ಬಯ್ದು ಆ ಮೇಲೆ ಪೂರ್ವಕ್ಕೆ ಬಯ್ಯಬೇಕು. ಅಂದರೆ, ಕಂಕಣಾಕೃತಿ ಅಥವಾ ಖಗ್ರಾಸ ಗ್ರಹಣಗಳಾಗದೆ, ಖಂಡ ಗ್ರಹಣಗಳು ಹ್ಯಾಗಾಗುತ್ತವೆಂಬದೂ ಸ್ಪರ್ಶವೂ ಮೋಕ್ಷವೂ ನೆಟ್ಟಗೆ ಪಶ್ಚಿಮಕ್ಕಾಗಲಿ ಪೂರ್ವಕ್ಕಾಗಲಿ ಆಗದೆ, ಸ್ವಲ್ಪ ಉತ್ತರಕ್ಕಾಗಲಿ ದಕ್ಷಿಣಕ್ಕಾಗಲಿ ಹ್ಯಾಗೆ ಆಗುತ್ತವೆಂಬದೂ ತಿಳಿಯುತ್ತದೆ.

ನಿಜವಾಗಿ ನೋಡಿದರೆ ಸೂರ್ಯನಿಗಿಂತ ಚಂದ್ರನು ಸಣ್ಣವನು. ಆದರೂ, ಅವನು ನಮಗೆ ಸೂರ್ಯನಿಗಿಂತ ಬಹಳ ಸಮೀಪವಲ್ಲಿ ಇರುತ್ತಾನಾದಕಾರಣ, ನಮಗೆ ಇಬ್ಬರ ಬಿಂಬಗಳೂ ಬಹುತರವಾಗಿ ಸಮಾನ ಕಾಣುತ್ತವೆ. ಪೃಥ್ವಿಯ ಸುತ್ತಲು ಚಂದ್ರನು ದೀರ್ಘವರ್ತುಲಾಕಾರವಾಗಿ ತಿರುಗುತ್ತಾನೆ. ಅದರಿಂದ ಪೃಥ್ವಿಯಿಂದ ಅವನ ಅಂತರವು ಯಾವಾಗಲೂ ಸರಿಯಾಗಿ ಇರುವದಿಲ್ಲ, ಹೆಚ್ಚು ಕಡಿಮೆ ಯಾಗುತ್ತದೆ. ಅವನು ಸಮೀಪವಲ್ಲಿದ್ದಾಗ ಕಾಣಿಸುವಷ್ಟಕ್ಕಿಂತ ದೂರವಲ್ಲಿದ್ದಾಗ ಸಣ್ಣವನು ಕಾಣುತ್ತಾ

ನೆ. ಆವಕಾರಣ, ಅವನು ಸೂರ್ಯಬಿಂಬಕ್ಕಿಂತ ಬವ್ಮೊಮ್ಮೆ ಸ್ವಲ್ಪ ಸಣ್ಣವನಾಗಿ, ಬವ್ಮೊಮ್ಮೆ ಸ್ವಲ್ಪ ದೊಡ್ಡವನಾಗಿ ಕಾಣುತ್ತಾನೆ. ಸಣ್ಣವನಾಗಿ ಕಾಣುವಾಗ ಅವನು ತೀರ ಸೂರ್ಯನಿಗೆ ಅಡ್ಡಬರಲಾಗಿ, ಕಂಕಣಗ್ರಹಣವಾಗುತ್ತದೆ; ಮತ್ತು ದೊಡ್ಡವನಾಗಿ ಕಾಣಿಸುವಾಗ ಅಡ್ಡಬರಲಾಗಿ, ಖಗ್ರಾಸವಾಗುತ್ತದೆ. ಚಂದ್ರಗ್ರಹಣವು ಎಂದಿಗೂ ಕಂಕಣಾಕೃತಿ ಆಗುವದಿಲ್ಲ.

ಸೂರ್ಯಗ್ರಹಣವು ಬವ್ಮೊಮ್ಮೆ ಕಂಕಣಾಕೃತಿಯಾಗುತ್ತದೆ, ಎಂಬ ಸಂಗತಿಯು ನಮ್ಮ ಪೂರ್ವಕಾಲದ ಜ್ಯೋತಿಷಿಗಳಿಗೆ ಗೊತ್ತಿತ್ತು. ರೋಮೇಶಸಿದ್ಧಾಂತವೆಂಬದೊಂದು ಪ್ರಾಚೀನ ಜ್ಯೋತಿಷಗ್ರಂಥ ಉಂಟು. ಅವರೊಳಗೆ ಬರೆದದ್ದೇನೆಂದರೆ:—

तत्रेंदोरधिके सूर्ये कंकणग्रहणं स्मृतम् ॥ ४ ॥

ग्रहयुत्यधिकार.

ಅರ್ಥ—ಅದರೊಳಗೆ (ಸೂರ್ಯಗ್ರಹಣದೊಳಗೆ) ಚಂದ್ರನಿಗಿಂತ ಸೂರ್ಯನು ದೊಡ್ಡವನಿದ್ದರೆ, ಕಂಕಣಗ್ರಹಣವಾಗುತ್ತದೆ.

DEPARTMENTAL NOTICES.

ವಿದ್ಯಾಖಾತೆಯ ನೋಟೀಸುಗಳು.

ಮಿಡಲ್ ಸ್ಕೂಲ ಸ್ಕಾಲರಶಿಪ್ಪುಗಳು.

ದಕ್ಷಿಣಭಾಗ.

ಈ ನೋಟೀಸಿನಿಂದ ಯಾವತ್ತು ಜನರಿಗೆ ತಿಳಿಸುವದೇನೆಂದರೆ:—

ಕೆಳಗೆ ಕಾಣಿಸಿದ ಜಿಲ್ಲೆಯ ಮುಖ್ಯಸ್ಥಳಗಳಲ್ಲಿ ಮೂರು

ಮಿಡಲ್‌ಸ್ಕೂಲಸ್ಕಾಲರಶಿಪ್ಪುಗಳನ್ನು ಕೊಡುವದಕ್ಕಾಗಿ, ಸನ್ ೧೮೯೦ನೇ ವರ್ಷದ ಸಪ್ಟಂಬರ ತಿಂಗಳ ೧ನೇ ತಾರೀಖು ಸೋಮವಾರ ದಿವಸ ಬೆಳಿಗ್ಗೆ ಮದ್ರಾಸ ೧೧ ಘಂಟೆಗೆ ಪರೀಕ್ಷೆಯನ್ನು ತಕ್ಕೊಳ್ಳುವರು.

(೧). ಧಾರವಾಡ ಹೈಸ್ಕೂಲು.
(೨). ಬೆಳಗಾಂವ ಹೈಸ್ಕೂಲು.
(೩). ಕಾರವಾರ ಹೈಸ್ಕೂಲು.
(೪). ವಿಜಾಪುರ ಫರ್ಸ್ಟಗ್ರೇಡ ಆಂಗ್ಲೋವರ್ನಾ್ಯ ಕ್ಯುಲರ ಸ್ಕೂಲು.
(೫). ಅಲಿಬಾಗ ಜಾನ್ ಎಲ್‌ಫಿನ್‌ಸ್ಟನ್ ಮಿಶನ್ ಹೈಸ್ಕೂಲು.

೨. ಈ ಮೂರರಲ್ಲಿ ಬಂದು ಸ್ಕಾಲರಶಿಪ್ಪನ್ನು ಜೇಕಾದವರು ದೊರಕಿಸಲಿಕ್ಕೆ ಯತ್ನ ಮಾಡಬಹುದು, ಇದಕ್ಕೆ ಜಾತಿನಿರ್ಬಂಧವಿಲ್ಲ. ಎರಡನೇದು ಇಂಗ್ಲಿಷ ಭಾಷೆಯ ಅಭ್ಯಾಸದಲ್ಲಿ ಹಿಂದೆ ಬಿದ್ದಂಥ—ಅಂದರೆ ಯಹುದಿಯರು, ಬಕ್ಕಲಿಗರು, ಬಕ್ಕಲಿಗರಿಗಿಂತ ಹಿಂದೆ ಬಿದ್ದಂಥ ಜಾತಿಯವರು, ಇವರ ಸಲುವಾಗಿಯೂ, ಮೂರನೇದು ಮುಸಲ್ಮಾನರ ಸಲುವಾಗಿಯೂ ಇಡಲ್ಪಟ್ಟಿದೆ.

೩. ಪರೀಕ್ಷೆ ತಕ್ಕೊಳ್ಳಲಿಕ್ಕೆ ಪ್ರತಿ ಬಂದು ಜಿಲ್ಲೆಯ ಮುಖ್ಯಸ್ಥಳದಲ್ಲಿ ಕಮಿಟಿಯು ನೇಮಿಸಲ್ಪಡುವದು. ಮೊದಲಿನ ನಾಲ್ಕು ಜಿಲ್ಲೆಯಸ್ಥಳಗಳಲ್ಲಿ ಅಲ್ಲಿರುವ ಸರಕಾರೀ ಹೈಸ್ಕೂಲಿನ ಅಥವಾ ಫರ್ಸ್ಟಗ್ರೇಡ ಆಂಗ್ಲೋವರ್ನಾ್ಯಕ್ಯುಲರ ಸ್ಕೂಲಿನ ಹೆಡ ಮಾಸ್ತರರೂ, ಐದನೇವರಲ್ಲಿ ಅಲಿಬಾಗದ ಮಿಶನ್ ಹೈಸ್ಕೂಲಿನ ಮ್ಯಾನೆಜರರೂ, ಅನುಕ್ರಮದಿಂದ ಆಯಾ ಕಮಿಟಿಗಳ ಅಧ್ಯಕ್ಷರಾಗುವರು. ಪರೀಕ್ಷೆಗೆ ಕೂಡ್ರಲಿಕ್ಕೆ ಅಪ್ಪಣೆ ಪಡೆ

ಕೊಳ್ಳುವವಕ್ಕಾಗಿ, ಛಾಪಿಸಿವ ನಮೂನೆಗಳ ಮೇಲೆ ಉಪೋದ್ಘಾರರು ಅರ್ಜಿಗಳನ್ನು ಕಳಿಸಬೇಕು. ಈ ನಮೂನೆಗಳು ಕೆಳಗೆ ಸಹಿ ಮಾಡುವವರ ಕಡೆಗಾಗಲಿ, ಆಯಾ ಕಮಿಟಿಗಳ ಅಧ್ಯಕ್ಷರ ಕಡೆಗಾಗಲಿ ದೊರೆಯುವವು. ಅವುಗಳಿಗೆ ಬೆಲೆ ಬೀಳುವದಿಲ್ಲ, ಹಾಗೇ ದೊರೆಯುತ್ತವೆ. ಉಪೋದ್ಘಾರರು ಅರ್ಜಿಗಳನ್ನು ತಮ್ಮ ತಮ್ಮ ಜಿಲ್ಲೆಯ ಕಮಿಟಿಯ ಅಧ್ಯಕ್ಷರ ಕಡೆಗೆ ಕಳುಹಿಸಿಕೊಡಬೇಕು. ಇಂಥ ಅರ್ಜಿಗಳನ್ನು ಕಮಿಟಿಯವರು ಆಗಸ್ಟ ತಿಂಗಳ ೧೦ನೇ ತಾರೀಖಿನವರೆಗೆ ತಕ್ಕೊಳ್ಳುವರು. ಈ ಮೇಲೆ ಬಂದ ಅರ್ಜಿಗಳನ್ನು ಅವರು ಹಿಡಿಯಲಿಕ್ಕಿಲ್ಲ.

೪. ಉಪೋದ್ಘಾರರ ವಯಸ್ಸು ಎಷ್ಟಿರಬೇಕು? ಪರೀಕ್ಷೆಯ ವಿಷಯಗಳು ಯಾವವು? ಸ್ಕಾಲರಶಿಪ್ಪುಗಳು ಎಷ್ಟೆಷ್ಟು ರೂಪಾಯದವು? ಅವು ಎಷ್ಟು ದಿವಸ ನಡೆಯುವವು? ಪರೀಕ್ಷೆಗೆ ಕೂಡ್ರಲಿಕ್ಕೆ ಫೀ ಎಷ್ಟು ಕೊಡಬೇಕು? ಇಂಥೇವುಂತಾದ ಯಾವತ್ತು ಸಂಗತಿಗಳ ವಿವರವು ೧೮೮೮ನೇ ಇಸವಿಯ ಮೇ ತಿಂಗಳ ೧೭ನೇ ತಾರೀಖಿನ 'ಬೊಂಬೆಗವರ್ನಮೆಂಟ ಗ್ಯಾರೆಟಿ'ಯಲ್ಲಿ, ಪ್ರಕಟಿಸಿವ 'ಪ್ರೊವಿಜನಲ್ ರೂಲ್ಸ' ಎಂಬ ಕಟ್ಟಳೆಗಳನ್ನು ನೋಡಿಕೊಂಡರೆ ತಿಳಿಯುವದು. ಈ ಕಟ್ಟಳೆಗಳು ೧೮೮೮ನೇ ಇಸವಿಯ ಜುಲೈ ತಿಂಗಳ ಬೊಂಬೆ ಎಜ್ಯುಕೇಶನಲ್ ರೆಸಲ್ಯೂಶನ್ ೧೮೮೬ನೇ ಫುಟವಲ್ಲಿಯಾವರೂ ಪ್ರಸಿದ್ಧಿಸಲ್ಪಟ್ಟವೆ. ಬೇಕಾವವರು ಕೆಳಗೆ ಸಹಿ ಮಾಡುವವರಿಗಾಗಲಿ ಕಮಿಟಿಯ ಅಧ್ಯಕ್ಷರಿಗಾಗಲಿ ಅರ್ಜಿ ಮಾಡಿಕೊಂಡರೆ, ಆ ಕಟ್ಟಳೆಗಳ ಕಾಗದಗಳು ದೊರೆಯುವವು.

ಧಾರವಾಡ,
೪ನೇ ಜೂನ ೧೮೮೦.

(Signed) S. V. PATWARDHAN,
ಎಜುಕೇಶನಲ್ ಇನಸ್ಪೆಕ್ಟರ,
ದಕ್ಷಿಣಭಾಗ.

ಅವಶ್ಯ ಓದಿರಿ.

ಮಾಸ್ತರ ಜನರಿಗೆ ಅತ್ಯುಪಯುಕ್ತವಾದ ಪ್ರಕಟನೆ.

ಜಾವಕ ನಂಬರು $\frac{೨೫೩}{೧೯೯೦-೯೧}$

ರಾವಸಾಹೇಬ 'ಕ್ಯೂರೇಟರ, ಗವರ್ನಮೆಂಟ ಸೆಂಟ್ರಲ್ ಬುಕ್‌ಡಿಪೋ, ಮುಂಬಯಿ,' ಇವರ ತಾರೀಖು ೨೫ನೇ ಮಾರ್ಚ ಸನ್ ೧೮೯೧ನೇ ಇಸವಿಯ ೪೭೫ನೇ ನಂಬರಿನ ಒಟ್ಟುಹುಕುಮು ದಕ್ಷಿಣ ಭಾಗದೊಳಗಿನ ಯಾವತ್ತು ಶಾಲಾಮಾಸ್ತರರಿಗೆ ತಿಳಿಯುವದಕ್ಕಾಗಿ ಕೆಳಗೆ ಪ್ರಸಿದ್ಧಿಸಲ್ಪಟ್ಟದೆ. ಈ ಹುಕುಮಿನ ಕಡೆಗೆ ಶಾಲಾಮಾಸ್ತರರು ಚನ್ನಾಗಿ ಲಕ್ಷ್ಯಕೊಟ್ಟು, ತಮ್ಮ ತಮ್ಮ ಸಾಲಿಗಳಿಗೆ ಹತ್ತುವ ಪುಸ್ತಕಗಳನ್ನು ತಾವೇ ತರಿಸಿ ಕೊಂಡರೆ ಹಿತವಾಗುವದು.

ಧಾರವಾಡ.
೨೫ನೇ ಜೂನ ೧೮೯೧

(Signed) S. V. PATWARDHAN,
ಎಜ್ಯುಕೇಶನಲ್ ಇನ್‌ಸ್ಪೆಕ್ಟರ್,
ದಕ್ಷಿಣ ಭಾಗ.

ಒಟ್ಟುಹುಕುಮು.
ನಂಬರು $\frac{೪೭೫}{೧೮೯೧}$.

ಯಾವತ್ತು ಶಾಲಾಮಾಸ್ತರರಿಗೆ—

ಮಿಹರಬಾನ ಡಿರೆಕ್ಟರ ಆಫ್ ಪಬ್ಲಿಕ ಇನ್‌ಸ್ಟ್ರಕ್ಶನ್ ಸಾಹೇಬರು ತಮ್ಮ ತಾರೀಖು ೨೯ನೇ ಜುಲೈ ೧೮೮೪ ಇಸವಿಯ ೨೬೪೬ನೇ ನಂಬರಿನ ಪತ್ರದಿಂದ ಗೊತ್ತುಮಾಡಿದ್ದೇನಂದರೆ—

ಸರಕಾರೀ ಬ್ಯಾಂಚ ಬುಕ್‌ಡಿಪೋಗಳನ್ನು ತೆಗೆದು ಹಾಕಿದ ಜಿಲ್ಲೆಗಳೊಳಗಿನ ಶಾಲಾಮಾಸ್ತರರು ಹತ್ತು ರೂಪಾಯಿ ಬೆಲೆಯುಳ್ಳಂಥ ಸರಕಾರೀ ಡಿಪೋದವರು ಮುದ್ರಿಸಿ ಪ್ರಸಿದ್ಧ ಮಾಡಿದಂಥ ಪುಸ್ತಕ, ನಕಾಶೆ ಮುಂತಾದವುಗಳನ್ನು ಕೊಂಡರೆ,

ಅವರಿಗೆ ನೂರಕ್ಕೆ ಇಪ್ಪತ್ತರಂತೆ ಕಮಿಶನ್ ಕೊಡಲಿಯುವದು. ಇಪ್ಪತ್ತೈದು ಅಥವಾ ಅದಕ್ಕೂ ಹೆಚ್ಚು ರೂಪಾಯಿಯ ಪುಸ್ತಕಗಳನ್ನು ಕೊಂಡರೆ, ನೂರಕ್ಕೆ ಇಪ್ಪತ್ತರಂತೆ ಕಮಿಶನ್ ಕೊಡಲಾಗುವದೆಂದು ಬೇರೆ ಜನರ ಸಲುವಾಗಿ ಮಾಡಿದ ನಿಯಮವು ಮುಂದೆ ಎರಡನೇ ಹುಕುಮು ಆಗುವವರೆಗೆ ಶಾಲಾಮಾಸ್ತರರಿಗೆ ಪಡ್ತುವದಿಲ್ಲ; ತಿಳಿಯುವದು. ತಾ. ೨೫ನೇ ಮಾರ್ಚ ೧೮೯೦.

(Signed) B. A. GUPTE,
ಕ್ಯೂರೇಟರ.

अवश्य वाचा.

शाळामास्तरांस अत्युपयोगी जाहिरात.

सरक्युलर नंबर ४७५०.

गवर्नमेंट सेंट्रल् बुकडिपो, मुंबई.

दक्षिणभागांतील सर्व शाळामास्तरांस कळविण्यांत येतें-कीं—मेहरबान डिरेक्टर आव् पब्लिक् इनस्ट्रक्शन् साहेब यांनीं आपल्या नंबर २६४४, तारीख २६ जुलै १८८४ च्या पत्रांत असें ठरविलें आहे कीं, ज्या जिल्ह्यांतील सरकारी खर्चाचें बुकडिपो बंद झाले असतील, त्यांतील शाळा मास्तरांनीं १० रुपयांचीं पुस्तकें वगैरे (डिपोनें छापून प्रसिद्ध केलेला) माल जर या आफिसांत खरेदी केला, तर त्यांस दुसरा हुकूम होईतों पर्यंत शेकडा २० टक्के कमिशन द्यावें. ह्या पाऱ्यांप्रमाणें त्यांनीं २५ रुपयांचा माल खरेदी केला पाहिजे असें नाहीं, कळावें. ता. २५ मार्च १८९०.

(Signed) B. A. GUPTE,
क्यूरेटर.

ವಾಚಕರಿಗೆ ಸೂಚನೆ.—ಜಾನೆ ತಿಂಗಳ ಸಂಚಿಕೆಯು ಸಂಗಡ ರಾ. ಚೆನವೀರ ಫಕೀರಪ್ಪ ಕರ್ನಾಟಕ ಬುಕ್ ಡಿಪೋ ಪ್ರೆಸ್ಸಿನ ಮ್ಯಾನೇಜರರು ಶಾಲಾಪತ್ರಿಕವ ಉಪಪತ್ರಿಕೆ ಎಂದು ತಮ್ಮ ಡಿಪೋವಲ್ಲಿರುವ ಯಾವತ್ತು ಪ್ರಕಾರದ ಪುಸ್ತಕಗಳ ಯಾದಿಯನ್ನು ಕಳಿಸಿದ್ದಾರೆ. ಅದರೆ ಅದು ಈ ಪತ್ರಿಕವ ಉಪಪತ್ರಿಕೆ ಅಲ್ಲ. ಶಾಲಾಪತ್ರಿಕವ ಉಪಪತ್ರಿಕೆ ಎಂದು ಅವರು ತಪ್ಪಿಳಾಪಿಸಿದ್ದಾರೆಂದು ತಿಳಿಯಬೇಕು.

ಎಡಿಟರ,
ಕ. ಶಾ. ಪತ್ರಿಕ.

CORRESPONDENCE.

ಪತ್ರವ್ಯವಹಾರ

ರಾ. ಹಣಮಂತ ವೆಂಕಟೇಶ ಗುಳೇದಗುಡ್ಡದ ಇನೇ ನೇಟಿವ ಶಾಲೆಯ ಅಸಿಸ್ಟಂಟಮಾಸ್ತರ, ಇವರು ಪತ್ತು ರೂಪಾಯಿಗಿಂತ ಕಡಿಮೆ ಸಂಬಳವುಳ್ಳ ಮಾಸ್ತರನಾಗಲಿ ಅಸಿಸ್ಟಂಟನಾಗಲಿ ನೌಕರಿ ಆರಂಭವಾಗಿ ನಾಲ್ಕೈದು ದಿವಸಗಳಲ್ಲಿ ಕ್ಯಾಜುಅಲ್ (ಪ್ರಾಸಂಗಿಕ) ರಜೆಯನ್ನು ಪಡಕೊಳ್ಳಲಿಕ್ಕೆ ಯೋಗ್ಯನಾಗುತ್ತಾನೋ ಹ್ಯಾಗೆ ಎಂಬ ಬಗ್ಗೆ ಬಂದು ಪತ್ರವನ್ನು ಬರೆದಿದ್ದಾರೆ.

ಇಂಥ ಪ್ರಸಂಗದಲ್ಲಿ ಮಾಸ್ತರರು ತಮ್ಮ ಮೇಲಧಿಕಾರಿಗಳ ಅಪ್ಪಣೆಯಂತೆ ನಡೆದುಕೊಳ್ಳುವದು ವಿಹಿತವು. ಹೊಸದಾಗಿ ಸರಕಾರೀ ಕೆಲಸವಲ್ಲಿ ಶೇರಿವ ಕಡಿಮೆ ಸಂಬಳವ ಶಿಕ್ಷಕರು ಕ್ಯಾಜುಅಲ್ (ಪ್ರಾಸಂಗಿಕ) ರಜೆಯನ್ನು ಪಡಕೊಳ್ಳಲಿಕ್ಕೆ ಬಾಧ್ಯರಾಗುವದಿಲ್ಲ. ಉತ್ತಮ ರೀತಿಯಿಂದ ಕೆಲವು ದಿವಸ ಕೆಲಸ ಮಾಡಿ, ಈ ತರದ ರಜೆಯನ್ನು ಪಡಕೊಳ್ಳಲಿಕ್ಕೆ ಯೋಗ್ಯರಿದ್ದಾರೆಂದು ವರಿಷ್ಠರ ಅನುಭವಕ್ಕೆ ಬಂದ ಹೊರ್ತು, ಅವರು ಇಂಥ

ರಜೆಯನ್ನು ಕೊಡಲಾರರೆಂದು ನಮಗೆ ತೋರುತ್ತದೆ. ಆದರೆ ವರಿಷ್ಠರಿಗೆ ರಜೆ ಬೇಡುವ ಕಾರಣವು ಯೋಗ್ಯವಾಗಿಯೂ ಪ್ರಸಂಗವು ಅತ್ಯಂತ ಕಠಿಣವಾಗಿಯೂ ತೋರಿದರೆ, ಅವರು ಬಂದು ಮೇಳೆ ಬಂದೆರಡುದಿವಸದ ಪ್ರಾಸಂಗಿಕ ರಜೆಯನ್ನು ಕೊಟ್ಟರೂ ಕೊಡಬಹುದು. ಈ ತರದ ರಜೆಯನ್ನು ಕೊಡುವದು ಮುಖ್ಯವಾಗಿ ವರಿಷ್ಠರ ಮನಸಿನ ಮೇಲೆ ಇರುತ್ತದೆ.

ಎಡಿಟರ, ಕನ್ನಡ ಶಾಲಾಪತ್ರಕ.

DHARWAR TRAINING COLLEGE, TERMINAL EXAMINATION QUESTIONS IN MATHEMATICS.

ಧಾರವಾಡ ಟ್ರೇನಿಂಗ ಕಾಲೇಜಿನ ಷಾಣ್ಮಾಸಿಕ ಪರೀಕ್ಷೆಯ ಗಣಿತ ವಿಷಯದ ಪ್ರಶ್ನೆಗಳು.*

೧ನೇ ವರ್ಷದ ವರ್ಗ

ಅಂಕಗಣಿತ, ಜವೂಖಿಬು.

೧. ಸುಲಭ ರೀತಿಯಾಗಿ ಉಪಯೋಗಿಸುವ ಸಂಖ್ಯೆಯನ್ನು ಬರೆಯುವ ಪದ್ಧತಿಯು ಎಂದರೆ ಅದೆ ಅಂದರೇನು? ದಶಕಪದ್ಧತಿಯಂತೆ ಎಷ್ಟು ಈ ಸಂಖ್ಯೆಯನ್ನು ಓರ ಪದ್ಧತಿಯಲ್ಲಿ ಹ್ಯಾಗೆ ಬರೆಯುವಿರಿ?

೨. ಪೂರ್ಣಾಂಕಗಳ ವಜಾಬಾಕಿಯ ರೀತಿಯನ್ನೂ, ಗುಣಾಕಾರದ ರೀತಿಯನ್ನೂ, ಸಿದ್ಧ ಮಾಡುವದಕ್ಕಾಗಿ ಗ್ರಹಿಸಿದ

---

* ಶಾಲಾಪತ್ರಕದಲ್ಲಿ ಪ್ರಸಿದ್ಧಿಸಿದ ಪ್ರಶ್ನೆಗಳಲ್ಲಿ ಕಠಿಣವಾದ ಪ್ರಶ್ನೆಗಳನ್ನು ಬಿಡಿಸಿ ಕಳಿಸಿದರೆ, ಅವುಗಳನ್ನು ನಾವು ಛಾಪಿಸಿ ಪ್ರಶ್ನೆಗಳನ್ನು ಬಿಡಿಸಿದವರ ಹೆಸರು ಪ್ರಸಿದ್ಧ ಮಾಡುವೆವು.

ಎಡಿಟರ, ಕ. ಶಾ. ಪ.

ಮೂಲ ಸಿದ್ಧಾಂತಗಳು (ಪ್ರತ್ಯಕ್ಷ ಪ್ರಮಾಣಗಳು) ಯಾವವು?

೩. ಗುಣಾಕಾರವ ಆರು ರೀತಿಗಳು ಎಲ್ಲ ಲೆಕ್ಕಗಳಲ್ಲಿ ಪಚ್ಚಲಿಕ್ಕೆ ಬರುವವೋ? ಬರದಿದ್ದರೆ, ಯಾವ ಯಾವ ಪ್ರಸಂಗಗಳಲ್ಲಿ ಯಾವ ಯಾವ ರೀತಿಗಳನ್ನು ಪಚ್ಚ ತಕ್ಕದ್ದು ಹೇಳಿ.

೪೫೯×೪೯೩ ಈ ಗುಣಾಕಾರವನ್ನು ಬಂದೇ ಸಾಲಿನಲ್ಲಿ, ಉಳಿದ ರೀತಿಗಳಲ್ಲಿ ಸಾದಾ ಗುಣಾಕಾರದ ರೀತಿಯನ್ನು ಬಿಟ್ಟು, ಯಾವ ಯಾವ ರೀತಿಗಳಿಂದ ಮಾಡಲಿಕ್ಕೆ ಬರುವದೋ ಆ ಎಲ್ಲ ರೀತಿಗಳಿಂದ ಮಾಡಿರಿ.

೪. ಯಾವದೊಂದು ಸಂಖ್ಯೆಯು ಅವಿಭಾಜ್ಯ ಅದೆಯೋ ಇಲ್ಲವೋ ಎಂಬವನ್ನು ಹ್ಯಾಗೆ ಪರೀಕ್ಷಿಸಬೇಕೆಂಬದನ್ನು ಪೂರ್ಣವಾಗಿ ವಿವರಿಸಿರಿ.

೧೬೭೫೩೬೬೩ ಈ ಸಂಖ್ಯೆಯು ಅವಿಭಾಜ್ಯವದೆಯೋ?

೫. $\frac{೩೫೭೦}{೧೧೬೫೪೪೮}$ ಈ ಸಂಖ್ಯೆಗೆ ಅಖಂಡ ಅಪೂರ್ಣಾಂಕವ ರೂಪ ಕೊಡಿರಿ.

೬. ಯಾವ ಸಂಖ್ಯೆಯಲ್ಲಿ ೩೦ ಕಳೆದು ಉಳಿದದ್ದಕ್ಕೆ ೫ ದಿಂದ ಗುಣಿಸಿದರೆ, ಮೂಲಸಂಖ್ಯೆ ಬರುವದು?

೭. ಎರಡು ಸಂಖ್ಯೆಗಳುಳ್ಳ : ೨ ಈ ಪ್ರಮಾಣದಲ್ಲಿ ಅವೆ. ಮೊದಲನೇ ಸಂಖ್ಯೆಯಲ್ಲಿ ೨ ಕೂಡಿಸಿ ಎರಡನೇ ಸಂಖ್ಯೆಯಲ್ಲಿ ೨ ಕಳೆದರೆ ಅವು ೨ : ೧ ಈ ಪ್ರಮಾಣವಲ್ಲಿ ಆಗುತ್ತವೆ. ಆವರೆ ಆ ಸಂಖ್ಯೆಗಳ್ಯಾವವು?

೮. ಎರಡು ಬೊಟ್ಟ ಘಡಿಯಾಲಗಳವೆ. ೨೪ ತಾಸುಗಳಲ್ಲಿ ಒಂದು ೪ ಮಿನಿಟು ೨೩ ಸೇಕಂದು ಮುಂದೆ ಹೋಗುತ್ತದೆ. ಅಷ್ಟೇ ಕಾಲವಲ್ಲಿ ಮತ್ತೊಂದು ೩ ಮಿನಿಟು ೧೩ ಸೇಕಂದು ಹಿಂದೆ ಉಳಿಯುತ್ತದೆ. ಅವೆರಡೂ ಘಡಿಯಾಲಗಳನ್ನು ಕಳೆದ ಸೋಮವಾರ ದಿವಸ ಮಧ್ಯಾನ್ಹಕ್ಕೆ ಒಂದು ೨೨ ಮಿನಿಟು ಮುಂದೆ, ಎರಡನೇದು ೨೨ ಮಿನಿಟು ಹಿಂದೆ ಹೀಗೆ, ಪಚ್ಚಿಟ್ಟ

ರುತ್ತವೆ. ಈ ಹೊತ್ತು ಅವೆರಡು ಮುಳ್ಳುಗಳ ನಡುವೆ ಆಧಾ
ತಾಸು ಅಂತರವಿದೆ. ಆವರೆ ಇಂದಿನ ವಾರಯಾವದು ? ಮತ್ತು
ವೇಳೆಎಷ್ಟಾಗಿದೆ?

೯. ಹುಂಡಿ, ಕಚ್ಚಾ ಖಾತೆ, ಬಾಯಿಗೂಡಿಸುವ ಜವಾಬುಚೀಟು
ತಾಳೀಬಂದು, ಅಡ್ಡಾವಿ ಇವುಗಳ ವ್ಯಾಖ್ಯೆಗಳನ್ನು ಬರೆಯಿರಿ.

೧೦. ಹುಂಡೀ ಕೊಟ್ಟವರೆ, ಆ ಹಣವನ್ನು ಹುಂಡೀ ತ
ಕ್ಕೊಂಡವನ ಹೆಸರಿಲೆ ಅಥವಾ ಹುಂಡೀ ಯಾವನ ಮೇಲೆ ಬರ
ದಿರುವದೋ ಅವನ ಹೆಸರಿಲೆ ಜಮೆ ಮಾಡದೆ, ಹುಂಡೀ ಖಾತೆಗ
ಬರೆಯುವದರಿಂದ ಲಾಭವೇನು?

೧೧. ಆರಂಭದ ಶಿಲಕಿನ ಮೇಲಿಂದ ಮತ್ತು ಕಡೆಯ ಶಿ
ಲಕಿನ ಮೇಲಿಂದ ಬಡವಲ ಹ್ಯಾಗೆ ತೆಗೆಯಬೇಕು? ಶಿಲಕಿ
ಮೂಲಿನ ಜವಾಬುಚೀಟು, ಬಾಯಿಗೂಡಿಸುವ ಜವಾಬುಚೀಟು,
ಅಪೇರ ಅಡ್ಡಾವಿ ಮಾಡುವವರಿಂದ ಹುವ್ದ ಖಾತೆಯು ತನ್ನಿಂದ
ತಾನೇ ಬಾಯಿಗೂಡಲಿಕ್ಕೆ ಬೇಕೆಂಬದನ್ನು ಮೇಲೆ ಹೇಳಿದ ಬಡ
ವಲ ತೆಗೆಯುವ ರೀತಿಗಳಿಂದ ಸಿದ್ಧ ಮಾಡಿರಿ.

೧೨. ತ ಎಂಬವನೆಲ್ಲಿ ಬಂದು ತಿಂಗಳಲ್ಲಿ ಮುಂದೆ ಹೇಳಿದ
ವ್ಯವಹಾರಗಳಾಗಿವೆ. ಆದರ ಎರಡು ಮೂರು ದಿವಸದ ಖಾತೆಕಿ
ರ್ದಿಬರೀರಿ.

೧೦೦ ರೂಪಾಯಿ ರೋಕ್ಕು ಬಂಡವಲ.

೫೦ ರೂಪಾಯಿ ಹ ನ ಕಡೆಯಿಂದ ಹೋವ ವರ್ಷದ
ಬಾಕಿ ಬರತಕ್ಕದ್ದು; ಆದರಲ್ಲಿ ೨೦ ರೂಪಾಯಿಯ
ಗೋದೀ ತಂದು ಕೊಟ್ಟನು.

೫೦ ರೂಪಾಯಿಯ ಗೋದೀಕೊಂಡು ಅವರಲ್ಲಿ ೨೦
ರೂಪಾಯಿಯ ಗೋದೀ ಎರಡು ರೂಪಾಯಿ ಲಾಭ
ತಕ್ಕೊಂಡು ಮಾರಿದನು.

೨೦ ರೂಪಾಯಿ ಹುಬ್ಬಳ್ಳಿಯ ಸಾವುಕಾರನ ಹುಂಡಿಗೆ ಅ ನ ಮೇಲೆ ಬಂದವರಿಂದ ಕೊಟ್ಟನು.
೨೦೦ ರೂಪಾಯಿ ಜನರಿಂದ ಠೇವು ಬಂದದ್ದು.
೨೦ ರೂಪಾಯಿ ಮನೆಯ ಖರ್ಚು.

ಎನೇ ವರ್ಗಪದ ವರ್ಗ.

ಅಂಕಗಣಿತ, ಬೀಜಗಣಿತ.

೧. ಅಂಕಗಣಿತಕ್ಕಿಂತ ಬೀಜಗಣಿತಕ್ಕೆ ಹೆಚ್ಚಿನ ಘನತೆ ಬರಲಿಕ್ಕೆ ಕಾರಣವೇನು? ಬೀಜಗಣಿತದೊಳಗಿನ ವಜಾಬಾಕಿಯ ವ್ಯಾಖ್ಯೆಯನ್ನು ಬರೀರಿ. ಬೀಜಗಣಿತದಲ್ಲಿ ಬಂದು ಪದವು ಮತ್ತೊಂದು ಪದಕ್ಕಿಂತ ದೊಡ್ಡದೆಂದು ಯಾವಾಗ ಅನ್ನಬಹುದು?

೨. ೪ $ಅ^{೨}-ಕ^{೨}+ಹ^{೨}-೪ಅಹ-೪ಕ-೪$; ೪ $ಛ^{೨}-೪ಅಛ$ $+(ಅ+ಚ)(ಅ-ಚ)$; ಮತ್ತು $ಛ^{೨}-೪ಲ್ಲ+೩$; ಈ ಪಂಕ್ತಿಗಳನ್ನು ಗುಣ್ಯ ಗುಣಕಗಳ ರೂಪವಲ್ಲಿ ಬರಿಯಿರಿ.

೩. ಅನೇಕ ಪದಗಳುಳ್ಳ ಪಂಕ್ತಿಯು ವರ್ಗ ಮೂಡುವ ನಿಯಮವು ಯಾವದು? $(ಅ+೨ಚ-೩ಹ+ಕ^{೨})-(ಅ-೨ಚ+೩ಹ+ಕ^{೨})$; ಇವರೊಳಗಿನ ವರ್ಗಗಳನ್ನು ಬಿಡಿಸಿ ಉತ್ತರವನ್ನು ಗುಣ್ಯ ಗುಣಕಗಳ ರೂಪವಲ್ಲಿ ಬರಿಯಿರಿ.

೪. $(ಅ+ಚ)^{೨}-೦(ಅ^{೨}+ಚ^{೨})(ಅ+ಚ)+೦(ಅ^{೨}+ಚ^{೨})$ ಇದರ ವರ್ಗಮೂಲವನ್ನೂ,

$೧-೯ಛ+೩೬ಛ^{೨}-೮೦ಛ^{೩}+೧೦೦ಛ^{೪}-೮೦ಛ^{೫}+೩೬ಛ^{೬}$ ಇದರ ಘನಮೂಲವನ್ನೂ ತೆಗೆಯಿರಿ.

೫. ಬುಬ್ಬದಿವಾಳಿ ತೆಗೆದವನ ಹತ್ತರ ೩೦ ರೂಪಾಯಿ ಅವೆ. ಅವನು ಅ, ಚ, ಹ, ಎಂಬ ಮೂರು ಜನ ಸಾವುಕಾರರ ಸಾಲವನ್ನು ತೀರಿಸತಕ್ಕವ್ವದೆ. ಹ್ಯಾಗಂದರೆ—ಅ ನಿಗೆ ಕೊಡತಕ್ಕ

ಹಣವ ಎರಡಷ್ಟು ಕ ನಿಗೆ; ಅ, ಇ ಗಳಿಗೆ ಕೂಡಿ ಕೊಡತಕ್ಕ ಷ್ಟು ಈ ನಿಗೆ. ಆದರೆ ಆ ಹಣವನ್ನು ಬಬ್ಬೊಬ್ಬರಿಗೆ ಎಷ್ಟೆಷ್ಟು ಹಂಚಿಕೊಡಬೇಕು?

೬. ಭಾಗಾಕಾರದೊಳಗಿನ ಭಾಜಕ ಬಾಕಿಗಳಿಗೆ ಯಾವ ದೊಂದು ಸಂಖ್ಯೆಯಿಂದ ನಿಃಶೇಷವಾಗಿ ಭಾಗಹೋದರೆ, ಆ ಸಂಖ್ಯೆಯಿಂದ ಭಾಜ್ಯಕ್ಕಾದರೂ ನಿಃಶೇಷವಾಗಿ ಭಾಗಹೋಗುತ್ತದೆ ಎಂಬದನ್ನು ಸಿದ್ಧಮಾಡಿರಿ.

೭. ೦೪೧.೬೦೪×೭೧೪. ಇಲ್ಲಿಂ ಈ ಗುಣಾಕಾರವನ್ನು ಕಸರು ಬಿಡುವ ರೀತಿಯಿಂದ ದಶಸಹಸ್ರ ಸ್ಥಾನವವರೆಗೆ ಉತ್ತರ ಸರಿಯಾಗಿ ಬರುವಂತೆ ಮಾಡಿರಿ.

೮. ೧೪೩೫೭೪೪೫೫೬ ಈ ಸಂಖ್ಯೆಗೆ ೯ರಿಂದವಭಾಗಿಸಲಾಗಿ, ಭಾಗಾಕಾರವು ಎಷ್ಟು ಬರುವದೆಂಬವನ್ನು ಭಾಗಾಕಾರಮಾಡದೆ ಬೇರೆ ರೀತಿಯಿಂದ ತೋರಿಸಿರಿ.

೯. ಅ, ಇ ಎಂಬವರು ಇಬ್ಬರೂ ಕೂಡಿ ಬಂದು ಕೆಲಸವನ್ನು ೪ ದಿವಸಮಾಡಿದ ಮೇಲೆ, ಈ ಎಂಬವನೊಬ್ಬನೇ ಉಳಿದ ಕೆಲಸವನ್ನು ೧೬ ದಿವಸದಲ್ಲಿ ಮಾಡುವನು. ಆದೇ ಕೆಲಸವನ್ನು ಅ, ಈ ಇವರು ೪ ದಿವಸ ಮಾಡಿದ ಮೇಲೆ, ಉಳಿದ ಕೆಲಸವನ್ನು ಇ ಬಬ್ಬನೇ ೧೨ ದಿವಸಗಳಲ್ಲಿ ಮುಗಿಸುತ್ತಾನೆ. ಇ, ಈ ಇವರು ೩ ದಿವಸ ಮಾಡಿದ ಮೇಲೆ, ಅ ನಿಗೆ ೧೦೫ ದಿವಸಗಳು ಬೇಕಾಗುತ್ತವೆ. ಆದರೆ ಪ್ರತಿಯೊಬ್ಬನು ಆ ಕೆಲಸವನ್ನು ಎಷ್ಟೆಷ್ಟು ದಿವಸದಲ್ಲಿ ಮಾಡುವನು?

೧೦. ನೂರು ರೂಪಾಯಿ ಕೆಲವು ವರ್ಷ ಚಕ್ರ ಬಡ್ಡಿಯಿಂದ ಕೊಟ್ಟರೆ, ಬಡ್ಡೀ ಗಂಟೂ ಕೂಡಿ ೧೧೨.೪೮೯೭೮೭ ರೂಪಾಯಿ ಆಗುತ್ತವೆ. ಮುಂದೆ ಮತ್ತೆ ಎರಡು ವರ್ಷಗಳ ವರೆಗೆ ಆ ರಕಮು ಇಟ್ಟರೆ, ೧೧೫.೯೬೯೩೪ ರೂಪಾಯಿ ಆಗುತ್ತವೆ. ಆದರೆ ಬಡ್ಡಿ ಹ್ಯಾಗೆ? ಮತ್ತು ಮೊದಲಿನ ಒಟ್ಟು ರಕಮಿನ ಮುದ್ದತು ಎಷ್ಟು?

ಹನೇ ವರ್ಷದ ವರ್ಗ.

ಅಂಕಗಣಿತ, ಬೀಜಗಣಿತ.

೧. ಲಘುತಮ ಸಾಧಾರಣಭಾಜ್ಯ, ಅಸಂಯುಕ್ತಸವಿಾಕರಣ, ಕರಣೀಪದ, ಅಸಂಭಾವ್ಯಪದ ಈ ಪಬ್ದಗಳ ಪಾಲ್ಯೈಗಳನ್ನು ಬರೆಯಿರಿ.

ವೃಢಭಾಜಕ ಎಂಬ ಪಬ್ದಕ್ಕೆ ಬದಲಾಗಿ ಆದೇಕೃತಿಗ ಬೀಜಗಣಿತದಲ್ಲಿ ಮಹತ್ತಮ ಸಾಧಾರಣ ಭಾಜ್ಯವೆಂಬ ಪೆಸರು ಕೊಡುವದಕ್ಕೆ ಕಾರಣವೇನು?

೨. ಬಾಮ ಸಂಖ್ಯೆಯವರ್ಗಮೂಲವಲ್ಲಿ $(೦೩+೧)$ ಸ್ಥಾನಗಳಿವ್ದರೆ, ಅವುಗಳಲ್ಲಿ $(೩+೧)$ ಸ್ಥಾನಗಳನ್ನು ವರ್ಗಮೂಲದ ರೀತಿಯಿಂದ ತೆಗೆದು, ಉಳಿದ (೩) ಸ್ಥಾನಗಳನ್ನು ಭಾಗಾಕಾರದಿಂದ ತೆಗೆಯಲಿಕ್ಕೆ ಬರುವದು. ಈ ರೀತಿಯಿಂದ ವರ್ಗಮೂಲ ತೆಗಿದ ಬಳಿಕ, ಕೊಟ್ಟ ಸಂಖ್ಯೆಯ ವರ್ಗಮೂಲವು ಶುದ್ಧ ಪದವದೆಯೋ ಕರಣೀಪದವದೆಯೋ ಎಂಬದನ್ನು ಹ್ಯಾಗೆ ತಿಳಿಯಬೇಕು?

೩. $\left\{\left(\sqrt[೦]{೩}\right)^{-೦}\ \frac{೩}{೩}\right\}^{\frac{೩}{೦}} \sqrt[೦]{೩}\ \sqrt[೩]{೩}\ \left(೩\right)^{\frac{೦}{೦}} \div \frac{\sqrt[೩]{೩}}{\sqrt[೩]{೩}}$

ಇದಕ್ಕೆ ಸರಳರೂಪ ಕೊಡಲಾಗಿ, $\frac{೩\sqrt[೩]{೩}}{೩}$ ಬರುವದೆಂಬದನ್ನು ತೋರಿಸಿರಿ.

೪. $\frac{೧}{\sqrt{೦}+\sqrt{೩}-\sqrt{೩}}$ ಮತ್ತು $\frac{೧}{\sqrt{೩}-\sqrt{೩}}$ ಈ ಅಪೂರ್ಣಾಂಕಗಳ ಛೇದಗಳು ಶುದ್ಧಪದ ಬರುವಂತೆ ಮಾಡಿರಿ.

೫. $೩+\sqrt{೩}=೩+\sqrt{೩}$, ಈ ರೂಪದಲ್ಲಿರುವ ಸವಿಾಕರಣದಲ್ಲಿ $೩=೩$ ಮತ್ತು $\sqrt{೩}=\sqrt{೩}$ ಇರತಕ್ಕದ್ದೆಂಬದನ್ನು ಸಿದ್ಧ ಮಾಡಿರಿ.

೬. $೩೩+೧೬\sqrt{೩}$ ಇದರ ವರ್ಗ ಮೂಲವನ್ನು ತೆಗೆಯಿರಿ.

ಕೆಳಗೆ ಹೇಳಿದ ಸಮೀಕರಣಗಳನ್ನು ಬಿಡಿಸಿರಿ.

೬. (ಅ). $\frac{೧}{ಳ-೨}+\frac{೧}{ಳ-೩}=೨=\frac{೫}{ಳ-೨}-\frac{೩}{ಳ-೩}$

(ಆ). $\frac{\sqrt{ಅ}+\sqrt{ಅ-ಳ}}{\sqrt{ಅ}-\sqrt{ಅ-ಳ}}=\frac{೧}{ಅ}$

೮. ಒಬ್ಬ ವರ್ತಕನು ಎಷ್ಟೋ ಹೇರು ಬೆಲ್ಲ ಕೊಂಡನು. ಅವನ್ನು ಅವನು ೩೦ ರೂಪಾಯಿಗೆ ಹೇರಿನಂತೆ ಮಾರಿದ್ದರೆ, ಅವನಿಗೆ ಒಟ್ಟಿಗೆ ೬೦ ರೂಪಾಯಿ ಲಾಭವಾಗುತ್ತಿತ್ತು. ೭೦ ರೂಪಾಯಿಗೆ ಹೇರಿನಂತೆ ಮಾರಿದ್ದರೆ, ೩೦ ರೂಪಾಯಿ ಲುಕ ಸಾನು ಆಗುತ್ತಿತ್ತು. ಆದರೆ ಅವನು ಬೆಲ್ಲ ಹ್ಯಾಗೆ ಕೊಂಡಿದ್ದನು?

೯. ಅಂಕಗಣಿತದ ಒಂದು ಪುಸ್ತಕದೊಳಗೆ ಭಾಗಾಕಾರದ ಉದಾಹರಣೆಗಳಲ್ಲಿ ೧೪××೪೯ ಈ ಸಂಖ್ಯೆಗೆ ೯ ರಿಂದ ಭಾಗಿಸಲಾಗಿ ೪, ೧೧ ರಿಂದ ಭಾಗಿಸಲಾಗಿ ೩, ಹೀಗೆ ಉಳಿಯುತ್ತವೆ ಎಂದು ತೋರಿಸು, ಎಂತ ಬರೆದಿರುತ್ತದೆ. ಇಲ್ಲಿ ಶತ, ಸಹಸ್ರ ಸ್ಥಾನಗಳಲ್ಲಿ ಇರತಕ್ಕ ಅಂಕಿಗಳು ಯಾವವು?

೧೦. ಭೀವವಲ್ಲಿ ೨, ೩ ರ ಹೊರತು ಬೇರೆ ಯಾವದಾವದೊಂದು ಅವಿಭಾಜ್ಯ ಸಂಖ್ಯೆಯುಳ್ಳ ಅಪೂರ್ಣಾಂಕಕ್ಕೆ ದಶಾಂಶ ರೂಪ ಕೊಡಲು, ಅವರ್ತ ಅಪೂರ್ಣಾಂಕ ಬರುತ್ತದೆಂಬದನ್ನು ಸಿದ್ಧ ಮಾಡಿರಿ.

೧೧. ೩ ಮಂದಿ ಅಂಬಿಗರು ಹರಿಯುವ ನೀರಿನಲ್ಲಿ ಪ್ರವಾಹವಗೂಡ ಕೆಲವು ಅಂತರದವರೆಗೆ ಒಂದು ದೋಣಿಯನ್ನು ಬಯ್ಯಲಿಕ್ಕೆ ಹತ್ತುವ ವೇಳೆಯ ೪ ವೇಳೆಯು ೬ ಮಂದಿ ಅಂಬಿಗರಿಗೆ ಅಷ್ಟೇ ದೋಣಿಯನ್ನು ಅಷ್ಟೇ ಅಂತರವವರೆಗೆ ಪ್ರವಾಹದ ಎದುರಿಗೆ ತರುವದಕ್ಕೆ ಹತ್ತುತ್ತದೆ. ಪ್ರವಾಹದ ವೇಗವು ತಾಸಿಗೆ ೩ ಮೈಲು ಇದ್ದರೆ, ಪ್ರತಿಬ್ಬ ಅಂಬಿಗನು ನಿಂತ ನೀರಿನಲ್ಲಿ ಆ ದೋಣಿಯನ್ನು ಎಷ್ಟು ದೂರ ಬಯ್ಯುವನು?

ವರ್ಗಣಿ ವಸೂಲು

ಕಾರವಾರಜಿಲ್ಲೆ.

	ರೂ.	ಆ.	ಪೈ.
೧. ಸದಾಶಿವಗಡ ತಾಲೂಕ ಮಾಸ್ತರರಿಂದ ಜುಲೈ, ಅಗಷ್ಟ, ಸಪ್ಟಂಬರ ತಿಂಗಳ ಬಾಬತು ...			
೨. ಸಿರಸಿ ,, ,, ...	೮	೨	೦

ಧಾರವಾಡಜಿಲ್ಲೆ

೧. ಶಿಗ್ಗಾವಿ ತಾಲೂಕ ಸ್ಕೂಲ ಮಾಸ್ತರರಿಂದ ...	೩	೧೩	೬
೨. ನವಲಗುಂದ ,, ,, ಜನೆವರಿಯಿಂದ ಮೇ ದ ವರೆಗೆ.	೧೦	೧೧	೦
೩. ಧಾರವಾಡ ೧ ನೇ ನಂಬರ ಸ್ಕೂಲ ಮಾಸ್ತರರಿಂದ.	೦	೬	೦

ವಿಜಾಪುರ ಜಿಲ್ಲೆ.

೧. ಮುದ್ದೆಬಿಹಾಳ ತಾಲೂಕ ಸ್ಕೂಲ ಮಾಸ್ತರರಿಂದ.	೬	೫	೦
೨. ತೊರವಿ ತಾಲೂಕ ಸ್ಕೂಲ ಮಾಸ್ತರಿಂದ ಜನೆವರಿಯಿಂದ ಜೂನದವರೆಗೆ.	೧೩	೧೨	೦
೩. ಸದಾಶಿವರಾವ ವಿಜಾಪುರ ೧ ನೇ ನಂಬರ ಶಾಲೆಯ ಮಾಸ್ತರ.	೧	೦	೩

ಬೆಳಗಾಂವಿ ಜಿಲ್ಲೆ.

೧. ಚಿಕ್ಕೋಡಿ ತಾಲೂಕ ಸ್ಕೂಲ ಮಾಸ್ತರರಿಂದ ಏಪ್ರಿಲ್, ಮೇ, ಜೂನ ತಿಂಗಳ ಬಾಬತು. ...	೪	೨	೦

---

* ಸೂಚನೆ—ಇದರಲ್ಲಿ ಏನಾದರೂ ತಪ್ಪು ಆಗಿದ್ದರೆ ಮಾಸ್ತರ ಜನರು ತಿಳಿಸಬೇಕು.

ವರ್ಷಕ್ಕೆ ಮುಂಗಡ.....೧೫ ಆಣೆ.

ಬಿಡಿ ನಂಬರಿಗಾಗಿ.....೧ ಆಣೆ.

ಸೂಚನೆ—ಪ್ರಕಟನೆಗಳನ್ನು ತಕ್ಕ ಫೀ ತಕ್ಕೊಂಡು ಛಾಪಿಸುವೆವು. ಈ ಸಂಬಂಧದಿಂದ ವ್ಯವಸ್ಥಾಪಕರಿಗೆ ಸಮಕ್ಷ ಭೆಟ್ಟಿಯಾಗಬೇಕು, ಇಲ್ಲವೆ ಪತ್ರ ದ್ವಾರವಿಂದ ಕೇಳಿಕೊಳ್ಳುವುದು.

ವ್ಯವಸ್ಥಾಪಕ,
ಕನ್ನಡ ಕಾಲಾಪತ್ರಿಕೆ.

ನೋಟೀಸು.

ತಾಲೂಕೆ ಮಾಸ್ತರರು ತಮ್ಮ ತಮ್ಮ ತಾಲೂಕಿನೊಳಗಿನ ಶಾಲೆಗಳ ವರ್ಗಣಿಯನ್ನು ಕಳುಹಿಸುವಾಗ್ಗೆ ಆ ಶಾಲೆಗಳ ಹೆಸರುಗಳನ್ನು ಬರೆಯುವದಿಲ್ಲ. ಹೀಗೆ ಮಾಡುವದರಿಂದ ನಮ್ಮ ಲೆಕ್ಖಕ್ಕೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ, ಅವರು ತಮ್ಮ ತಾಲೂಕಿನೊಳಗಿನ ಯಾವ ಯಾವ ಶಾಲೆಯಿಂದ ಯಾವ ಯಾವ ತಿಂಗಳ ಬಗ್ಗೆ ಎಷ್ಟೆಷ್ಟು ವರ್ಗಣಿ ಬಂತೆಂಬುದರ ವಿವರವನ್ನು ಅವಶ್ಯವಾಗಿ ತಿಳಿಸಬೇಕು.

ತಾರೀಖು ೨೦ನೇ ಮಾರ್ಚ ಜಾನಸನ್ ೧೮೯೦ನೇ ಇಸವಿ.

(Signed) R. B. KARANDIKAR,
ವ್ಯವಸ್ಥಾಪಕ, ಕ. ಕಾ. ಪತ್ರಿಕೆ.

ಕನ್ನಡಶಾಲಾಪತ್ರಿಕೆ.

KANARESE
SCHOOL PAPER.

ಪುಸ್ತಕ ೭೫.] ಆಗಷ್ಟ ೧೮೯೦. [ಸಂಚಿಕೆ ೮.

ಅನುಕ್ರಮಣಿಕೆ. ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು... ... ೧೬೯
೨. ಟ್ರೇನಿಂಗ ಕಾಲೇಜದಲ್ಲಿ ನಿಂತು ಅಭ್ಯಾಸ ಮಾಡುವದರಿಂದ ಆಗುವ ಉಪಯೋಗ... ... ... ೧೭೨
೩. ಫ್ರೀಬೆಲನ ಶಿಶು-ಶಿಕ್ಷಣಪದ್ಧತಿ ೧೭೩
೪. ಇತಿಹಾಸ... ... ... ೧೮೧
೫. ಗ್ರಂಥದ ಮೇಲಿಂದ ವ್ಯಾಕರಣ ಹೇಳುವದು ೧೮೫
೬. ಪತ್ರವ್ಯವಹಾರ... ... ... ೧೯೧

CONTENTS.

1 Educational Intelligence and Useful Notes.....169
2. The Value of Training Collage Life.....172
3. Froebel's Kinder-Garten System.....173
4. History.....181
5. Notes on Grammar.....185
6. Correspondence.....191

DHARWAR:

PRINTED AT THE KARANTIC BOOK DEPOT PRESS,
1890.

ಪುಸ್ತಕ ಮಾರಲಿಕ್ಕೆ ಸಿದ್ಧವಾಗಿದೆ.

ಶಬ್ದಮಂಜರಿ ಕೋಶವು:—ಈ ಪುಸ್ತಕವನ್ನು ಕೈ. ವಾ. ಗಂ ಗಾಧರ ಮಡಿನಾಳೇಶ್ವರ ತೂಫಮರಿ ಇವರು ರಚಿಸಿದ್ದು, ಇದರ ಪ್ರತಿಗಳು ಈಗ ಜನರಿಗೆ ಶಿಗುವದು ದುರ್ಲಭವಾದ್ದರಿಂದ, ಅದನ್ನು ಒಳ್ಳೇ ದಪ್ಪ ಕಾಗದದ ಮೇಲೆ ಸುವಾಚ್ಯ ಮೊಳೆಗಳಿಂದ ಛಾಪಿಸಿ, ಮೊದಲಿಗಿಂತಲೂ ೫೦೦೦ ಶಬ್ದಗಳನ್ನೂ ಶಬ್ದವ್ಯುತ್ಪತ್ತಿಯನ್ನೂ ಹೆಚ್ಚಿಗೆ ಹಾಕಿ ತಯಾರು ಮಾಡಿದ್ದೇವೆ. ಅದರ ಬೆಲೆ ೪ ರೂಪಾಯಿ, ಟಪಾಲ ಹಾಸಲು ೪ ಆಣೆ. ಪುಸ್ತಕವು ಸಂಗ್ರಹಕ್ಕೆ ಎಷ್ಟು ಯೋಗ್ಯವಾದದ್ದೆಂಬದು ಅದನ್ನು ನೋಡಿದರೆ ತಿಳಿಯುವದು.

ಧಾರವಾಡ,
28–4–90.

ಚನ್ನವೀರ ಫಕೀರಪ್ಪ,
ಪ್ರೊಪ್ರೈಟರ್, ಕರ್ನಾಟಕ ಬುಕ್‌ಡಿಪೋ ಪ್ರೆಸ್

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಬಯಸುತ್ತಂ ಪ್ರತಿವಾಸದಾನಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆಪ್ಪೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂ ದೋಷವತಿದ್ದನೇಳ್ವುದುಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ॥೧

ಪುಸ್ತಕ ೨೫೫.] ಆಗಷ್ಟ ೧೮೯೯. [ಸಂಚಿಕೆ ೮.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಯುನಿವರ್ಸಿಟಿಯಲ್ಲಿ ನೇಮಿಸಲ್ಪಡುವ ಪರೀಕ್ಷಕರಿಂದ ಪರೀಕ್ಷೆಯು ಕೆಲಸವು ಚನ್ನಾಗಿ ಸಾಗುವದಿಲ್ಲ. ಬಂದು ವರ್ಷ ಪರೀಕ್ಷೆ ಸಸಾರವಾದರೆ, ಮರುವರ್ಷ ಬಿರಿ; ಸಂಸ್ಕೃತದಲ್ಲಿ ಒ ಪಡಳ ವಿದ್ಯಾರ್ಥಿಗಳನ್ನು ಕಿತ್ತಿ ಹಾಕಿದರೆ, ಫಾರ್ಸಿಗೀ ಭಾಷೆಯಲ್ಲಿ ಬಪಡಳ ಹುಡುಗರನ್ನು ಇಳಿಸುವರು; ಕೆಲ ಒಬ್ಬ ಪರೀಕ್ಷಕನ ವಿದ್ಯಾರ್ಥಿಗಳ ಬುದ್ಧಿ ಸಾಮರ್ಥ್ಯವನ್ನು ನೋಡದೆ, ತನ್ನ ಜ್ಞಾನವನ್ನು ಮೆರಿಸುವವಕ್ಕೆ ಮನಸಿಗೆ ಬಂದಂತೆ ಅಡ್ಡ ತಿಡ್ಡ ಪ್ರಶ್ನೆಗಳನ್ನು ಹಾಕುವನು; ಇವೇ ಮುಂತಾದ ಕಾರಣಗಳಿಂದ ಪರೀಕ್ಷೆಯಲ್ಲಿ ಇರತಕ್ಕ ಸಮತ್ವವು ಉಳಿಯದೆ, ವಿದ್ಯಾರ್ಥಿಗಳು ಎದೆಗುಂದಿ ಬಪಡಳೇ ಕೇಡಿಗೆ ಬಳಗಾಗುತ್ತಾರೆ. ಅದಲ್ಲದೆ, ಪರೀಕ್ಷೆಯು ಬೇರೆ ಬೇರೆ ವಿಷಯಗಳು ಯಾವಾಗಲೂ ಬಂದೇ ಸಮನಾಗಿ ಕಠಿಣವಾಗಿರುವಂತೆ ಏನು ಹಂಚಿಕೆ ಮಾಡಬೇ

ಕೊಂಬದನ್ನು ಕುರಿತು ಆಲೋಚಿಸುವದಕ್ಕೆ ಸೆನೆಟ್ ಸಭೆಯವರು, ಮಿಸ್ತರ ಫೆರೋಜಶಹ ಮೆಹತಾ ಎಂಬವರ ಸೂಚನೆಯನ್ನು ಅನುಸರಿಸಿ, ಬಾದು ಕಮಿಟಿಯನ್ನು ನೇಮಿಸಿದ್ದಾರೆ. ಈ ಕಮಿಟಿಯೊಳಗಿನ ಗೃಹಸ್ಥರು ಅನುಭವವುಳ್ಳವರೂ ಬಳ್ಳೀ ವಿವೇಕಿಗಳೂ ಧೂರ್ತರೂ ಆಗಿರುವವರಿಂದ, ಅವರು ಚಲೋ ಯುಕ್ತಿಯನ್ನು ತೆಗೆದು, ಬಹಳ ಜಾಣತನದಿಂದ ಈ ಮಾತಿನ ನಿರ್ಣಯ ಮಾಡುವರೆಂದು ನಮಗೆ ತೋಚುತ್ತದೆ.

ಇಂಗ್ಲಂಡದೊಳಗೆ ಕೇಂಬ್ರಿಜ ಯುನಿವರ್ಸಿಟಿಯಲ್ಲಿ ಬಿ. ಏ. ಪರೀಕ್ಷೆಯಾಯಿತು. ಆ ಪರೀಕ್ಷೆಯಲ್ಲಿ ಗಣಿತ ವಿಷಯವನ್ನು ತಕ್ಕೊಂಡ ಉಮೇದವಾರರಲ್ಲಿ ಮಿಸ್. ಫಾಸೆಟ್ ಎಂಬವಳು ಮೊದಲನೇ ನಂಬರವನ್ನು ದೊರಕಿಸಿದಳು. ಈಕೆಗೆ ಎರಡನೇ ನಂಬರಿನವನಿಗಿಂತ ೪೦ ಗುಣಗಳು ಹೆಚ್ಚು ದೊರೆದವೆ. ಅಲ್ಲಿಯ ಪುರುಷರಿಗೆ ಕನಿಷ್ಟ ಪಕ್ಷಕ್ಕೆ ಗಣಿತವಲ್ಲ್ಯಾದರೂ, ಸ್ತ್ರೀಯರು ನಮ್ಮ ಕೈ ಹಿಡಿಯಲಾರರು, ಎಂದು ಹೆಮ್ಮೆ ಇತ್ತು. ಗಣಿತ ವಿಷಯವನ್ನು ಅಭ್ಯಾಸಿಸಿ, ಅದನ್ನು ಆಕಲನ ಮಾಡಿಕೊಳ್ಳಲಿಕ್ಕೆ ಬೇಕಾಗುವಷ್ಟು ದೃಢ ನಿಶ್ಚಯವೂ ಏಕಾಗ್ರತೆಯೂ ಅವರಲ್ಲಿ ಎಂದಿಗೂ ಬರಲಾರವು, ಎಂದು ಅವರು ತಿಳಿದಿದ್ದರು. ಆದರೆ ಸ್ತ್ರೀಯರು ಈ ದುರ್ಗವನ್ನಾದರೂ ಕೈವಶ ಮಾಡಿಕೊಂಡು ಬಿಟ್ಟರು. ಇನ್ನು, ಸ್ತ್ರೀಯರು ರಾಜಕೀಯ ವಿಷಯಗಳಲ್ಲಿ ಮನಸು ಹಾಕಿ, ಪುರುಷರನ್ನು ಸರಿಗಟ್ಟುವದೊಂದೇ ಕೆಲಸವನ್ನು ನೆರವೇರಿಸುವದು ಮಾತ್ರ ಉಳಿಯಿತು.

ಕ್ಷಯುರೋಗವುಳ್ಳ ಮನುಷ್ಯನ ಶ್ವಾಸ ಕೋಶದ ಕೆಟ್ಟಂಥ ಭಾಗವನ್ನಷ್ಟೇ ಕೊಯ್ದು ತೆಗೆದು, ಪ್ರೊಫೆಸರ ಟಿಲ್ಮನ್ನೆಂಬ ಒಬ್ಬ ಯುರೋಪಿನ ಡಾಕ್ತರನು ಅವನನ್ನು ವಾಸಿ ಮಾಡಿದನಂತೆ.

ನಮ್ಮ ಹೊಸ ಗವರ್ನರರಾದ ಹ್ಯಾರಿಸ ಪ್ರಭುಗಳು ತಮ್ಮ ಸರಕಾರೀ ಕೆಲಸವನ್ನು ಬಳ್ಳೇ ವ್ಯವಸ್ಥೆಯಿಂದಲೂ, ನಿಯಮದಿಂದಲೂ ಮಾಡುತ್ತಲಿದ್ದಾರೆ. ಇವರಿಂದ ಅವರು ಹೆಚ್ಚೆಚ್ಚು ಲೋಕಪ್ರಿಯರಾಗ ಹತ್ತಿದ್ದಾರೆ.

ಚೀಟೀ ಕಳಿಸಿ ಇಲ್ಲವೆ ಸುದ್ದೀ ಹೇಳಿಕಳಿಸಿ, ಒಬ್ಬನು ತನ್ನೊಬ್ಬನ ಅರವು ತಪ್ಪಿಸ ಬಹುದು. ಮತ್ತು ಹೀಗೆ ಅರವು ತಪ್ಪಿದಾಗ ಅವನ ಮೇಲೆ ಬೇಕಾದಂಥ ಕಠಿಣವಾದ ಶಸ್ತ್ರ ಪ್ರಯೋಗಗಳನ್ನು ಮಾಡಬಹುದೆಂದು ಸಿದ್ಧವಾಗಿದೆ.

ನ್ಯೂಗ್ರಾನಡಾ ಎಂಬ ದೇಶವಲ್ಲಿ ಒಂದು ಜಾತಿಯ ಗಿಡ ಉಂಟು. ಅವರ ಹಾಲನ್ನು ಮೇಲಾದ ಮಸಿಯಂತೆ ಉಪಯೋಗಿಸ ಬಹುದು. ಆ ಹಾಲಿನಿಂದ ಕಾಗದದ ಮೇಲೆ ಬರೆಯಲಾಗಿ, ಅಕ್ಷರಗಳು ಕೆಂಪಗೆ ಕಾಣುತ್ತವೆ. ಆದರೆ ಐದಾರು ತಾಸಿನಲ್ಲಿ ಅವು ತೀರಾ ಕರ್ಪಗಾಗುತ್ತವೆ. ಮತ್ತು ಆ ಕಾಗದವು ನೀರೊಳಗೆ ಬಿದ್ದು ತೊಯ್ದಿದರೂ, ಅಕ್ಷರಗಳು ಮೊದಲಿದ್ದಂತೆಯೇ ಇರುತ್ತವೆ.

ಫಿಲಿಪ್ಪೈನ ನಡುಗಡ್ಡೆಯೊಳಗಿನ ಒಂದು ಜಾತಿಯ ಗಿಡಕ್ಕೆ ಬಂಡಿಯು ಗಾಲಿಯಷ್ಟು ದೊಡ್ಡ ಹೂಗಳಾಗುತ್ತವೆ. ಒಂದೊಂದು ಹೂವಿನ ತೂಕ ಹನ್ನೊಂದು ಸೇರು. ಈ ಹೂವಿಗೆ ಅಲ್ಲಿಯ ಜನರು ಬೋಲೋ ಅನ್ನುತ್ತಾರೆ.

ಯಾವತ್ತು ಬ್ರಿಟಿಶ ಹಿಂದುಸ್ಥಾನದ ಜಾನೇಸುಮ್ಮಾರಿಯು ಳಿರುವ ವರ್ಷ ಫೆಬ್ರುವರಿ ತಿಂಗಳ ಕಡೆಯ ದಿವಸ ರಾತ್ರಿ ಆಗ ತಕ್ಕದ್ದೆಂದು ಗೊತ್ತು ಮಾಡಿದ್ದಾರೆ.

THE VALUE OF TRAINING COLLEGE LIFE.

ಟ್ರೇನಿಂಗ ಕಾಲೇಜವಲ್ಲಿ ನಿಂತು ಅಭ್ಯಾಸ ಮಾಡುವದರಿಂದ ಆಗುವ ಉಪಯೋಗ.

ಲಂಡನ್ ಪಟ್ಟಣದೊಳಗೆ ಚೆಲ್ಸಿ ಎಂಬಲ್ಲಿರುವ ಸೆಂಟ್ ಮಾರ್ಕ್ಸ್ ಟ್ರೇನಿಂಗಕಾಲೇಜದ ಪ್ರಿನ್ಸಿಪಾಲರಾದ ರೆವರೆಂಡ್ ಜಾರ್ಜ ಪಬ್ಲ್ಯೆ ಗೆಂಟ ಧೊರೆಗಳು ಚರ್ಚ ರಿಫಾರ್ಮರ ಎಂಬ ವರ್ತಮಾನ ಪತ್ರವಲ್ಲಿ "ಟ್ರೇನಿಂಗ ಕಾಲೇಜಗಳು" ಎಂಬ ವಿಷಯದ ಮೇಲೆ ಬಂದು ನಿಬಂಧವನ್ನು ಬರೆದು ಪ್ರಕಟಿಸಿದ್ದಾರೆ. ಆ ನಿಬಂಧದ ಕಡೆಯಲ್ಲಿ ಪ್ರಾಥಮಿಕ ಶಾಲೆಗಳ ಶಿಕ್ಷಕರು ಕಾಲೇಜವಲ್ಲಿ ಕೆಲವು ಕಾಲ ನಿಂತು ಶಿಕ್ಷಣ ಹೊಂದುವದರಿಂದ ಆಗುವ ಲಾಭಗಳನ್ನು ಕೆಳಗೆ ಬರೆವಂತೆ ಸಂಕ್ಷಿಪ್ತವಾಗಿ ವಿವರಿಸಿ ಆ ನಿಬಂಧವನ್ನು ಮುಗಿಸಿದ್ದಾರೆ.

'ಟ್ರೇನಿಂಗ ಕಾಲೇಜವಲ್ಲಿರುವವರಿಂದ ಪ್ರಾಥಮಿಕ ಶಾಲೆಗಳ ನಮ್ಮೆಲ್ಲಾಭಾವಿ ಶಿಕ್ಷಕರಿಗೆ ಶಿಕ್ಷಣ ಪದ್ಧತಿಯಲ್ಲಿ ಪ್ರವೀಣತೆ, ಜ್ಞಾನಾಭಿವೃದ್ಧಿ ಮುಂತಾದ ಲಾಭಗಳಾಗುವದರಿಂದಲೇ ಟ್ರೇನಿಂಗ ಕಾಲೇಜದಿಂದ ಬಹಳ ಉಪಯೋಗವದೆ ಎಂದು ತಿಳುಕೊಳ್ಳತಕ್ಕದ್ದಲ್ಲ. ಅದರೆ ಅಗಾಗ್ಗೆ ಇವುಗಳಿಗಿಂತ ಹೆಚ್ಚಿನ ಲಾಭಗಳೆನಿಸದಿದ್ದರೂ ಇಷ್ಟೇ ಮಹತ್ವದ ಕೆಲವು ದೊಡ್ಡ ದೊಡ್ಡ ಲಾಭಗಳಾಗುತ್ತವೆ. ಅವು ಯಾವವೆಂದರೆ—ಯಾವತ್ತು ಶಿಕ್ಷಕರು ಬಂದೇ ನಿಯಮಿತ ರೀತಿಯಿಂದ ಕಾಲಕ್ರಮಣ ಮಾಡುತ್ತಿ

ರುವವರಿಂದ ಅವರಲ್ಲಿ ನಿಯಮಿತತ್ವ ಉಂಟಾಗುತ್ತದೆ. ಹಳ್ಳಿಪ್ರ
ಡವ ಅಲ್ಪ ವಿಚಾರಗಳು ಹೋಗಿ ತಮ್ಮ ನೆರಿ ಸಮಾನಸ್ಕಂಧಕ್ಷಣ
ದೊಡ್ಡ ಸಮಾಜದೊಳಗೆ ಕಾಲ ಕಳೆಯುವವರಿಂದ ದೀರ್ಘ ವ್ಯೆ
ಚಾರ ಮಾಡುವ ರೂಢಿ ಬೀಳುತ್ತದೆ. ಮತ್ತು ಟ್ರೇನಿಂಗಕ
ಲೇಜವಲ್ಲಿ ಶ್ರೇಷ್ಠ ತರದ ಶಿಕ್ಷಣವನ್ನು ಹೊಂದಿದಂಥ ಒಳ್ಳೆಪು
ತಿಮ್ಮಪಾಟುಳ್ಳಂಥ ಪಂಡಿತರ ಅತಿ ನಿಕಟ ಸಂಘಟ್ಟಣವಾಗುವಿನಾ
ರಿಂದ ಅವರಿಗೆ ಬಹಳೇ ಹಿತವಾಗುತ್ತದೆ. ಬೇರೆ ಉದ್ಯೋಗಪಿ
ಗಳನ್ನು ಮಾಡುವ ಜನರಿಗೆ ವಿಶ್ವ ವಿದ್ಯಾಲಯಗಳಿಂದಲೂ ಸೇಜ
ರ್ಜನಿಕ ಶಾಲೆಗಳಿಂದಲೂ ಎಷ್ಟು ಉಪಯೋಗವಾಗುತ್ತಿಕ್ಕಂ
ದೋ, ಅಷ್ಟೇ ಉಪಯೋಗವು ಪ್ರಾಥಮಿಕ ಶಾಲೆಗಳ ಭಾವಿ
ಶಿಕ್ಷಕರಿಗೆ ಟ್ರೇನಿಂಗಕಾಲೇಜಗಳಿಂದ ಆಗುತ್ತದೆ. ಹಗಲು ಅ
ಭ್ಯಾಸ ಸಾಗುವ ಪೂರ್ತಿ ಕೂಡುವ ಟ್ರೇನಿಂಗಕಾಲೇಜಗಳನ್ನು
ಈಗ ಸ್ಥಾಪಿಸಬೇಕೆಂದು ಎಷ್ಟೋ ಜನರು ಆಲೋಚನೆಯನ್ನು
ಮಾಡಿರುವರಷ್ಟೆ? ಈ ತರದ ಕಾಲೇಜಗಳಿಂದ ಕೆಲವು ಮಟ್ಟಿಗೆ
ಉಪಯೋಗವಾದಾಗ್ಯೂ, ಈಗ ಸದ್ಯಕ್ಕೆ ಇರುವ ಕಾಲೇಜಗಳಿಂ
ದ ಆಗುವಷ್ಟು ಉಪಯೋಗವು ಅವುಗಳಿಂದ ಎಂದಿಗೂ ಆಗಲಾ
ರದು. ಆದಕಾರಣ, ಈ ಪ್ರಸಕ್ತಿಯಲ್ಲಿಯಾದರೂ ವಿದ್ಯಾಖಾತೆಯ
ಮೇಲಧಿಕಾರಿಗಳು ಏನಾದರೂ ಹೊಸ ಸುಧಾರಣೆ ಮಾಡುವದಾ
ದರೆ, ಅದುವೆ ಹಳೆ ಸಂಸ್ಥೆಗಳು ಅಳಿದು ಇಲ್ಲವೆ ಕೆಟ್ಟು ಹೋ
ಗುವಂತೆ ಮಾಡಲಿಕ್ಕಲ್ಲೆಂದು ನಾವು ತುಂಬಾ ಆಶಿಸುತ್ತೇವೆ.

FROEBEL'S KINDER-GARTEN SYSTEM.

ಫ್ರೋಬೆಲನ ಶಿಶು-ಶಿಕ್ಷಣಾಪದ್ಧತಿ.

(೧೫೭ನೇ ಪುಟದಿಂದ ಮುಂದೆ ಸಾಗಿದ್ದು.)

ಶಿಕ್ಷಣ ಕ್ರಮದ ಮೂಲಾಧಾರವು ಒಳ್ಳೇ ವ್ಯವಸ್ಥೆ, ಸೌಂ
ದರ್ಯ, ಸಮುಪಯೋಗ ಈ ಮೂರರಲ್ಲಿರುತ್ತದೆ. ಈ ಮೂರು

ಗುಣಗಳು ಇಲ್ಲದ ಶಿಕ್ಷಣ ಕ್ರಮವು ತೀರ ಕೀಳ ತರದ್ದೆನ್ನಲಿ
ಕ್ಕೆ ಅಡ್ಡಿ ಇಲ್ಲ. ನಮ್ಮ ದೇಶದೊಳಗಿನ ಶಿಕ್ಷಣ ಕ್ರಮದಲ್ಲಿ ಈ
ಮೂರೂ ಗುಣಗಳು ಅಪರೂಪವೆಂದು ನಮಗೆ ತೋರುತ್ತದೆ.
ಒಳ್ಳೇ ವ್ಯವಸ್ಥೆಯ ಸುದ್ದಿಯೇ ನಮ್ಮ ಜನರಲ್ಲಿ ಇಲ್ಲ. ಈ ಗು
ಣ ಇಲ್ಲವಲ್ಲಿ ಉಳಿವ ಎರಡು ಗುಣಗಳಾದರೂ ವಾಸಿಸಲಾರವೆಂ
ದು ಹೇಳುವದು ಅವಶ್ಯವಿಲ್ಲ. ಯಾಕಂದರೆ, ಇವೆರಡೂ ವಿಶೇ
ಷವಾಗಿ ಆ ಗುಣವನ್ನೇ ಅವಲಂಬಿಸಿರುತ್ತವೆ. ಈ ಗುಣಗಳು
ನಮ್ಮಲ್ಲಿ ಇಲ್ಲೇ ಇಲ್ಲೆಂದು ಹೇಳುವದು ಸಟೆಯಲ್ಲ. ಈಗಿನ ಅ
ನುಭವದಿಂದ ನೋಡಿದರೆ, ನಮ್ಮಲ್ಲಿ ಒಳ್ಳೇ ವ್ಯವಸ್ಥೆಯುಂಟಾ
ಗಲಿಕ್ಕೆ ಇನ್ನೂ ಒಂದು ತಲಾಂತರವಾದರೂ ಬೇಕಾದೀತು.
ಇಷ್ಟು ಕಾಲವಲ್ಲಿ ಈಗುಣವು ನಮ್ಮಲ್ಲಿ ಶೇರುವದೋ ಇಲ್ಲವೋ
ಎಂಬ ಬಗ್ಗೆ ಸಂಶಯವೇ ತೋರುತ್ತದೆ. ಅದರೂ ನಮ್ಮ ಹಿಂ
ದೂ ಜನರು ಯಾವ ವಿಷಯವಲ್ಲಿಯೂ ಸಿನೂ ಮಾಡಿಲ್ಲವೆಂದು
ಮಾತ್ರ ಯಾರೂ ತಿಳಿಯಲಾಗದು. ಪ್ರತಿ ಒಂದು ಜನಾಂಗದಲ್ಲಿ
ಒಂದಿಲ್ಲ ಒಂದು ವಿಶೇಷ ಗುಣವಿರುವಂತೆ ನಮ್ಮಲ್ಲಿಯೂ ಉಂ
ಟು. ಪಾರ್ಸಿ ಜನರು ವ್ಯವಹಾರ ಶಾಸ್ತ್ರದಲ್ಲಿ ನಿಪುಣರು. ಗ್ರೀ
ಕರು ಸೌಂದರ್ಯ ಜ್ಞಾನದಲ್ಲಿ ಚತುರರು. ಇದೇ ಪ್ರಕಾರ ಹಿಂ
ದೂ ಜನರು ಧರ್ಮ ಜ್ಞಾನದಲ್ಲಿ ಬಲ್ಲಿದರು. ನಮ್ಮ ಹಿಂದೂ
ಜನರು ಮಾಡಿವಷ್ಟು ಧರ್ಮವಿಚಾರವನ್ನು ಮತ್ತ್ಯಾವ ಜನ
ರೂ ಮಾಡಿಲ್ಲ. ಅಮೇರಿಕ, ಇಂಗ್ಲಂಡ, ಫ್ರಾನ್ಸ ಮುಂತಾದ
ಸುಧಾರಿಸಿದ ದೇಶಗಳ ಜನರು ಸೌಂದರ್ಯವನ್ನು ನೋಡಲಿ
ಕ್ಕೆ ಇನ್ನೂ ವರೆಗೆ ಹ್ಯಾಗೆ ಗ್ರೀಸ ದೇಶಕ್ಕೆ ಹೋಗುವರೋ
ಹಾಗೆ ಅಧ್ಯಾತ್ಮ ವಿಚಾರವನ್ನು ಕುರಿತು ಆ ಜನರು ನಮ್ಮ
ಗ್ರಂಥಗಳನ್ನು ಪರಿಶೋಧಿಸುತ್ತಾರೆ. ಸಾರಾಂಶವೇನಂದರೆ

ನಮ್ಮಲ್ಲಿಯೂ ಕೆಲವು ವಿಶೇಷ ಗುಣಗಳುಂಟು. ಇನ್ನು, ಶಿಕ್ಷಣ ಕ್ರಮವನ್ನು ಮುಂದಕ್ಕೆ ಸಾಗಿಸೋಣ. ಮೊದಲು ಬಳ್ಳೇ ವ್ಯವಸ್ಥೆಯನ್ನು ಕುರಿತು ಆಲೋಚಿಸುವ.

ಬಳ್ಳೇ ವ್ಯವಸ್ಥೆ ಎಂಬ ಗುಣದ ಅವಶ್ಯಕತೆಯನ್ನು ಎಷ್ಟು ವರ್ಣಿಸಿದರೂ ತೀರದು. ಈ ಗುಣವು ಪ್ರಾಥಮಾವಸ್ಥೆಯಲ್ಲಿ ಅನಾಯಾಸವಾಗಿ ದೊರೆಯುವದಿಲ್ಲೆಂಬದನ್ನು ನಾವು ಚನ್ನಾಗಿ ನೆನಪಿನಲ್ಲಿಡತಕ್ಕದ್ದು. ತೀರ ಬಾಲ್ಯಾವಸ್ಥೆಯಲ್ಲಿ ಈ ಗುಣದ ಬೀಜವನ್ನು ಊರಿದರೆ ಮುಂದೆ ಅವಕ್ಕೆ ಫಲಗಳು ಬರುವವು. ಚಿಕ್ಕಂದಿನಿಂದ ಓರಣದಿಂದ ನಡೆಯುವ ಅಭ್ಯಾಸವಿದ್ದರೆ ಅದರಿಂದ ಬಹಳ ಹಿತವಾಗುವದು. ಯಾವ ಕೆಲಸವನ್ನು ಮಾಡುವದಾದರೂ ಅದರಲ್ಲಿ ಓರಣವು ಬೇಕೇ ಬೇಕು. ಪ್ರತಿ ಒಬ್ಬನು ಗಾಯನವನ್ನು ಅರಿತಿರಬೇಕೆಂದು ಒಬ್ಬ ಗ್ರಂಥಕಾರನು ಬರೆಯುತ್ತಾನೆ. ಗಾಯನವೆಂದರೆ ಸಪ್ತಸ್ವರಗಳ ಮೂರ್ಛನೆಯು. ಏಳೂ ಸ್ವರಗಳ ಸಮತೋಲನವಾದರೆ ಅದು ನಿಜವಾದ ಗಾಯನವೆನಿಸುತ್ತದೆ. ಈ ಮಾತು ಯಾವತ್ತು ವಿಷಯಗಳಿಗೆ ಹಚ್ಚಲಿಕ್ಕೆ ಬೇಕು. ಪ್ರತಿ ಬಂದು ವಿಷಯವಲ್ಲಿ ಗಾಯನವಿರಬೇಕು— ಅಂದರೆ ಬಳ್ಳೇ ವ್ಯವಸ್ಥೆ ಇರಬೇಕೆಂಬ ಅರ್ಥವು. ಪ್ಲೇಟೊ ಎಂಬುವನೊಬ್ಬ ಗ್ರೀಕ ಗ್ರಂಥಕರ್ತನು ಬಂದು ಅತ್ಯಂತ ರಮಣೀಯವಾವಂಥ ಉದಾತ್ತ ವಿಚಾರಗಳಿಂದ ತುಂಬಿ ತುಳುಕುವಂಥ 'ರಿಪಬ್ಲಿಕ್' ಎಂಬದೊಂದು ಗ್ರಂಥವನ್ನು ಬರೆದಿದ್ದಾನೆ. ಅದರೊಳಗೆ ಅವನು ಹುಡುಗರ ಆಟಗಳಲ್ಲಿ ಸಹ ಓರಣವಿರಬೇಕೆಂದು ಅನ್ನುತ್ತಾನೆ. ಓರಣವು ಸಾಧಿಸಿದರೆ, ಮೇಳೆಯು ಉಪಯೋಗವು ಬಹಳ ಚನ್ನಾಗಿಯೂ ಯೋಗ್ಯವಾಗಿಯೂ ಆಗುತ್ತದೆ. ಮತ್ತು ಪ್ರತಿ ಬಂದು ಕೆಲಸದಲ್ಲಿ ಪರಿಮಾಣಶುದ್ಧತ್ವವು ಬರುತ್ತದೆ.

ಶಿಕ್ಷಣದ ಸತ್ಯ ಕ್ರಮವು, ಪರಿಮಾಣಶುದ್ಧತ್ವದಿಂದ ಆರಂಭವಾಗುತ್ತದೆ. ನಮ್ಮ ಪಂಚೇಂದ್ರಿಯಗಳ ಬೆಳವಣಿಗೆಯನ್ನು ಸಮತೋಲ ಮಾಡಿಡುವದೇ ಶಿಕ್ಷಣದ ಮುಖ್ಯಾಂಗವಾಗಿದೆ. ಸೌಂದರ್ಯವೆಂಬದು ಪರಿಮಾಣಶುದ್ಧಿಯಲ್ಲಿಯೇ ಇರುತ್ತದೆ. ಇಗೋ ನೋಡಿರಿ! ಇಲ್ಲಿ ರೋಮದ ವೀರನಾದ ಅಗಸ್ತಸ ಕೇಸರ ಎಂಬವನ ತದ್ರೂಪ ಚಿತ್ರವದೆ. ಈ ಚಿತ್ರವು ಬಲು ಸುಂದರವಾಗಿದೆ. ಸುಂದರವಾಗಿದೆ ಎಂದರೆ ಇದರ ಯಾವತ್ತು ಅವಯವಗಳು ಪರಿಮಾಣಶುದ್ಧವಾಗಿವೆ. ಪರಿಮಾಣಶುದ್ಧತೆಯೂ ಬಳ್ಳೇ ವ್ಯವಸ್ಥೆಯೂ ಇಲ್ಲವಲ್ಲಿ ಸೌಂದರ್ಯವೇ ಬಾರದು. ಬರೀ ಬಳ್ಳೇ ವ್ಯವಸ್ಥೆಯೂ ಪರಿಮಾಣಶುದ್ಧತ್ವವೂ ಇದ್ದರೂ ಅವರಿಂದ ಏನೂ ಉಪಯೋಗವಾಗುವದಿಲ್ಲ. ಆದವರಿಂದ, ಪ್ರತಿಯೊಂದು ಶಿಕ್ಷಣವಲ್ಲಿ ಸದುಪಯೋಗವು ಇರಲಿಕ್ಕೆ ಬೇಕು. ನಿರುಪಯೋಗದ ಶಿಕ್ಷಣವು ಎಷ್ಟು ಬಳ್ಳೇ ವ್ಯವಸ್ಥಿತವಿದ್ದರೂ, ಎಷ್ಟು ಸುಂದರವಿದ್ದರೂ ಏನೂ ಕೆಲಸವಲ್ಲ. ನಾನು ಈಗ ಹೇಳಿದ್ದೇನೆಂದರೆ—ಪ್ರತಿಯೊಂದು ಶಿಕ್ಷಣವಲ್ಲಿ ಗಾಯನವು ಬೇಕು. ಗಾಯನವೆಂದರೆ ದಿನಾಲು ನಾವು ಏನು ತಿಳಿಯುತ್ತೇವೋ ಅದೇ ಅರ್ಥ ಇಲ್ಲಿಯೂ ತಿಳಿಯಬೇಕು. ಬಳ್ಳೇ ವ್ಯವಸ್ಥೆ ಇರದಿದ್ದರೆ, ಗಾಯನವು ಸುಂದರವಾಗದೆಂಬ ಮಾತೂ ಸರಿಯೇ ಸರಿ. ಗಾಯನದಿಂದ ಬಹಳ ಪ್ರಯೋಜನವಾಗುತ್ತದೆ. ಅವರಿಂದಲೇ ಶಿಕ್ಷಣ ಕ್ರಮವಲ್ಲಿ ಗಾಯನವು ಬಹಳ ಅವಶ್ಯವದೆ. ವಾಣಿಗೆ ಶುದ್ಧತ್ವವೂ, ಶ್ವಾಸಕೋಶಗಳಿಗೆ ಪುಷ್ಟಿಯೂ ಬರಲಿಕ್ಕೆ ಗಾಯನವು ಅತ್ಯಂತ ಉಪಯುಕ್ತವದೆ. ನರಗಳು, ಕಿವಿ, ನಾಲಿಗೆ ಮುಂತಾದ ಇಂದ್ರಿಯಗಳಿಗಾದರೂ ಗಾಯನದಿಂದ ಬಹಳ ಉಪಯೋಗವಾಗುತ್ತದೆ.

ಈ ಎಲ್ಲ ಸಂಗತಿಗಳನ್ನು ಚನ್ನಾಗಿ ಮನಸ್ಸಿಗೆ ತಂದು ಫ್ರೆ
ಬೆಲನು ತನ್ನ ಶಿಕ್ಷಣ ಕ್ರಮವನ್ನು ರಚಿಸಿದ್ದಾನೆ. ಅದನ್ನು
ಮುಂದಿನ ವ್ಯಾಖ್ಯಾನವಲ್ಲಿ ನಾನು ನಿಮಗೆ ಹೇಳುವೆನು. ಆ
ವ್ಯಾಖ್ಯಾನವಲ್ಲಿ ಹೇಳಿದ ಫ್ರೇಬೆಲನ ಚರಿತ್ರವನ್ನೂ, ಶಿಕ್ಷಣಕ್ರ
ಮವೆಂಬ ಇವಾರತಿಯ ಭಾರವೆಲ್ಲ ಯಾವ ಮೂರು ಗುಣಗಳ
ಮೇಲೆ ಉಂಟೋ ಆ ಮೂರು ಗುಣಗಳನ್ನೂ ಚನ್ನಾಗಿ ನೆನ
ಪಿನಲ್ಲಿಡಿರಿ. ಆ ಗುಣಗಳು ಯಾವವೆಂದರೆ, (೧) ಬಳ್ಳೀ ವ್ಯವಸ್ಥೆ
(೨) ಸೌಂದರ್ಯ, (೩) ಸಮುಪಯೋಗ.

ಎರಡನೇ ವ್ಯಾಖ್ಯಾನ.

ಮೊದಲಿನ ವ್ಯಾಖ್ಯಾನದೊಳಗೆ ಶಿಕ್ಷಕನಲ್ಲಿ ಅವಶ್ಯವಾಗಿ
ಇರತಕ್ಕ ಗುಣಗಳು ಯಾವವೆಂಬವನ್ನು ಹೇಳಿದೆವು. ವಿನ್ಯಾಸ
ಮುಂತಾದ ಗುಣಗಳಂತೆ ಇನ್ನೂ ಕೆಲವುಗುಣಗಳು ಶಿಕ್ಷಕನಲ್ಲಿ
ಇರುವವು ಅವಶ್ಯವಷೆ. ಅವುಗಳನ್ನು ಸ್ವಲ್ಪದರಲ್ಲಿ ಹೇಳಿ ಆ
ಮೇಲೆ ಮುಂದಿನ ಸಂಗತಿಯನ್ನು ಆರಂಭಿಸೋಣ.

ಶಿಕ್ಷಕನ ನಡಾವಳಿಯು ಮೇಲಾದದ್ದಿರಬೇಕೆಂಬವನ್ನು ಬರೆ
ದು ತಿಳಿಸುವದು ಅವಶ್ಯವಿಲ್ಲ. 'ತಂದೆಯುಂತೆ ಮಗ,' 'ತಾಯಿ
ಯಂತೆ ಮಗಳು,' ಎಂಬನಾಣ್ನುಡಿಯಲ್ಲಿದ್ದ ನಿಜತ್ವವೇ 'ಗುರು
ವಿನಂತೆ ಶಿಷ್ಯ' ಎಂಬವರಲ್ಲಿಯೂ ಉಂಟು. ಒಂದು ವೇಳೆ ಹುಡು
ಗರ ನಡಾವಳಿಯು ಶಿಕ್ಷಕರ ನಡಾವಳಿಯನ್ನು ವಿಶೇಷವಾಗಿ ಅನು
ಯಿಸುತ್ತದೆ ಎಂದರೂ ಸಲ್ಲುವದು.

ಹುಡುಗರಿಗೆ ತಮ್ಮ ಗುರುಗಳಲ್ಲಿರುವಷ್ಟು ನಂಬಿಕೆಯು ತಾ
ಯಿತಂದೆಗಳ ಹೊರ್ತು ಮತ್ತೆಯಾರಲ್ಲಿಯೂ ಇರುವದಿಲ್ಲ. ಬ
ಹ್ಮೆಮ್ಮೆ ಹುಡುಗರು ಹಡೆದ ತಾಯಿತಂದೆಗಳಿಗಿಂತ ಗುರುಗಳ

ಮೇಲೆ ಹುಡುಗ ದೃಢವಾದ ನಂಬಿಗೆಯನ್ನು ಇಡುತ್ತಾರೆ. ಹೀಗೆ ನಂಬಿಗೆಯನ್ನು ಹುಟ್ಟಿಸಿ, ಅದನ್ನು ತಕ್ಕ ರೀತಿಯಿಂದ ಉಪಯೋಗಿಸುವದು ಶಿಕ್ಷಕನ ಕೈಯೊಳಗೆ ಇರುತ್ತದೆ. ಈ ನಂಬಿಗೆಯ ಸಹಾಯದಿಂದಲೇ ಅವನು ಹುಡುಗರಿಗೆ ಶಿಕ್ಷಣವನ್ನು ಕೊಡಬೇಕು. ಇದರಿಂದ ಶಿಕ್ಷಕನ ಬಾಯಿಂದ ಹೊರಟ ಮಾತುಗಳೆಲ್ಲ ನಿಜವೇ ಎಂದು ಅವರಿಗೆ ತೋರುತ್ತದೆ, ಮತ್ತು ಅವರು ತಪ್ಪದೆ ಅವರಂತೆ ನಡೆಯುತ್ತಾರೆ. ಇಷ್ಟರ ಸಲುವಾಗಿ ಶಿಕ್ಷಕನ ನಡೆನುಡಿಗಳು ಸರಳವಾಗಿಯೂ, ಶುದ್ಧವಾಗಿಯೂ, ಪವಿತ್ರವಾಗಿಯೂ ಇರಲಿಕ್ಕೆಬೇಕು. ಅಂದರೆ ಮುಂದೆ ಹುಡುಗರಾದರೂ ಹಾಗೇ ನಡಕೊಳ್ಳುವರು.

ಹುಡುಗರು ಶಿಕ್ಷಕನಲ್ಲಿ ಪೂರ್ಣ ನಂಬಿಗೆ ಇಡುವಂತೆಯೇ ಶಿಕ್ಷಕರಾದರೂ ಹುಡುಗರ ಮೇಲೆ ನಂಬಿಗೆಯನ್ನಿಡಲಿಕ್ಕೆ ಬೇಕು. ಈ ಸಂಗತಿಯನ್ನು ಶಿಕ್ಷಕನು ಎಂದೂ ಮರೆಯಕೂಡದು. ದೇವರ ಪರಿಶುದ್ಧತ್ವದ ವಿಷಯಕ್ಕೆ ಯಾರೂ ಅಪನಂಬಿಗೆಯನ್ನು ಮಾಡುವದಿಲ್ಲ. ಅದೇ ಪ್ರಕಾರ, ಸಣ್ಣ ಮಕ್ಕಳ ಪರಿಶುದ್ಧತ್ವದ ವಿಷಯದಲ್ಲಿಯೂ ಯಾರೂ ಅಪನಂಬಿಗೆಯನ್ನು ಹಿಡಿಯಬಾರದು. ಮೊದಲಿನಿಂದಲೇ ಯಾವನೊಬ್ಬ ಹುಡುಗನಿಗೆ ನೀನು ಕೆಟ್ಟವನು, ಅಪನಂಬಿಗೆಯುವನು, ಎಂದು ಅನ್ನುತ್ತ ನಡೆದರೆ, ಅವನು ಅಂಥವನೇ ಆಗಹತ್ತುತ್ತಾನೆ. ನಾನು ಹುಟ್ಟಾ ಕೆಟ್ಟವನೇ ಇದ್ದೀನಿ. ಏನು ಮಾಡಲಿ? ಎಂದು ತಿಳುಕೊಂಡು ಅವನು ನಿಷ್ಕಾರಣವಾಗಿ ಕೆಟ್ಟು ಹೋಗುತ್ತಾನೆ.

ಹೀಗೆ ಆಗಬಾರದೆಂಬ ವಿಷಯದಲ್ಲಿ ಗುರುಹಿರಿಯರು ಬಹಳ ಎಚ್ಚರದಿಂದ ಇರಬೇಕು. ಮೊದಲಿನಿಂದ ಹುಡುಗನಿಗೆ—ನೀನು ಬಲು ಚಳ್ಳೇಯವನು, ನಿನ್ನಮೇಲೆ ನನಗೆ ಪೂರಾ ನಂಬಿಗೆಯುಂ

ಟು, ನೀನು ಎಂದೂ ಕೆಟ್ಟ ಕೆಲಸಕ್ಕೆ ಹೋಗುವವನಲ್ಲ,—ಎಂಜ್ಞೆ ಯೇ ಅನ್ನುತ್ತಿರಬೇಕು. ಅ[illegible] ಅದೇ ಹುಡುಗನು ಬಲು ಬಳ್ಳೀಯವನಾಗುತ್ತಾನೆ. ನನ್ನ ಮೇಲೆ ನಮ್ಮ ಗುರುಗಳು ಇಷ್ಟು ನಂಬಿಗೆಯನ್ನಿಡುತ್ತಾರೆಂದು ಅವನು ಬಹಳ ಹಿಗ್ಗುತ್ತಾನೆ. ಅವನು ತನಗೆ ಇದೊಂದು ದೊಡ್ಡಸ್ತನವೇ ಎಂದು ತಿಳುಕೊಂಡು, ಗುರುವಿನ ನಂಬಿಗೆಯು ತನ್ನ ಮೇಲಿಂದ ಎಂದಿಗೂ ಹಾರಬಾರದೆಂದು ಯಾವಾಗಲೂ ಜಪ್ತಿಸುತ್ತಿರುತ್ತಾನೆ. ಇದೇನು ಸಣ್ಣ ಪುಟ್ಟ ಮಾತಲ್ಲ. ಶಿಕ್ಷಕರು ಆಗಾಗ್ಗೆ ಇವನ್ನು ಮರೆತುಬಿಡುತ್ತಾರೆ. ಅವರಿಂದ ಇದು ನಿಮ್ಮ ಸ್ಮರಣದಲ್ಲಿ ಚೆನ್ನಾಗಿ ನಿಲ್ಲಬೇಕೆಂದು ತಿರುತಿರುಗಿ ಹೇಳುತ್ತೇನೆ. ಮತ್ತು ಈ ವಿಷಯವಲ್ಲಿ ಒಂದು ದೃಷ್ಟಾಂತವದೆ. ಅದೇನಂದರೆ, ಶೆರೆಮನೆಯಲ್ಲಿರುವ ಹೆಂಗಸರ ಸ್ಥಿತಿಯನ್ನು ನೋಡಿ ಏನಾದರೂ ದೋಷವಿದ್ದರೆ, ಅದನ್ನು ತಿದ್ದಬೇಕೆಂಬ ಬಯಕೆಯಿಂದ ಒಬ್ಬ ಪರೋಪಕಾರಿಯಾದ ಹೆಂಗಸು ಎಲ್ಲ ಶೆರೆಮನೆಗಳನ್ನು ನೋಡುವದಕ್ಕಾಗಿ ಪ್ರವಾಸ ಮಾಡುತ್ತಿದ್ದಳು. ಅವಳು ಹೋಗ ಹೋಗುತ್ತ ಅಮೇರಿಕದೊಳಗಿನ ಇಂಡಿಯಾನಾ ಎಂಬ ಸಂಸ್ಥಾನದೊಳಗಿನ ಶೆರೆಮನೆಯನ್ನು ನೋಡಲಿಕ್ಕೆ ಹೋದಳು. ಅಲ್ಲಿ ಒಬ್ಬ ಹೆಂಗಸನ್ನು ಕೋಣೆಯೊಳಗೆ ಶೆರೆ ಇಟ್ಟಿದ್ದರು. ಅವಳಿಗೆ ಅತ್ತಿತ್ತ ಹೋಗಲಿಕ್ಕೆ ಬರಬಾರದೆಂದು ಕೈಕಾಲುಗಳಲ್ಲಿ ಸಂಕೋಲೆಗಳನ್ನು ಹಾಕಿದ್ದರು. ಅವಳ ಕೆದರಿದ ಕೂದಲುಗಳಿಂದಲೂ ಅಸ್ತ್ಯವ್ಯಸ್ತವಾದಂಥ ಮೈಮೇಲಿನ ಕೊಳಕು ಬಟ್ಟೆಗಳಿಂದಲೂ ಆ ಬಡಪ್ರಾಣಿಯು ನೋಡುವವರಿಗೆ ಬಲು ಅಂಜಿಕೆ ಬರುವಂತೆ ತೋರುತ್ತಿದ್ದಳು. "ಆ ಹೆಂಗಸು ಬಹು ಭಯಂಕರಳಾಗಿದ್ದಾಳೆ; ಅವಳ ಬಳಿಯಲ್ಲಿ ಯಾರೂ ಎಂದಿಗೂ ಹೋಗಲಿಕ್ಕಾಗದು;"

ಂದು ಶೆರೆಮನೆಯ ಮೇಲಧಿಕಾರಿಗಳು ನಿಷ್ಠುರವಾದ ಅಪ್ಪಣೆ
ುನ್ನು ಮಾಡಿದ್ದರು. ಇದನ್ನೆಲ್ಲ ಆ ಪರೋಪಕಾರಿಯಾದ ಹೆ
ಣ್ಣುಮಗಳು ಶೆರೆಮನೆಯ ಕಾಯುತ್ತಿರುವ ಹೆಂಗಸರ ಬಾ
ಯಿಂದ ಕೇಳಿದಳು. ಆವರೆ ಶೆರೆಯಲ್ಲಿದ್ದ ಪ್ರಾಣಿಯ ಕ್ರೂರತನ
ಶ್ರ ನಿಜವಾದದ್ದೆಂದು ಅವಳಿಗೆ ತೋರವ್ಪೊಲ್ಲದು. ಆಕೆಯು ಶೆರೆ
ಯಾಗಿದ್ದ ಪ್ರಾಣಿಯ ಬಳಿಗೆ ಹೋಗಲಿಕ್ಕೂ ಅವಳೊಡನೆ ಮಾ
ಡಲಿಕ್ಕೂ ಅಪ್ಪಣೆಯನ್ನು ಕೇಳಹತ್ತಿದಳು. ಶೆರೆಮನೆಯ ಅಧಿ
ಕಾರಿಯು ಹೊವಲು ಏನು ಮಾಡಿದರೂ ಅಪ್ಪಣೆಯನ್ನು ಕೊಡ
ಲ್ಲೊಲ್ಲನು. ಕಡೆಯಲ್ಲಿ ಬಹಳೇ ಹೇಳಿಕೊಂಡದ್ದರಿಂದ, ಮೂರು
ನಾಲ್ಕು ಮಂದಿ ಬಿಚ್ಚುಗತ್ತಿಗಳನ್ನು ಹಿಡುಕೊಂಡ ಹೆಂಗಸರ
ನ್ನು ಸಂಗಡ ಕರಕೊಂಡು ಹೋಗಬಹುದು. ಇಷ್ಟರ ಮೇಲೂ
ಅವಳಿಂದ ಏನಾದರೂ ಬಳಿತು ಹೀನ ಆವರೆ ನಾವು ಜಬಾಬ
ುದಾರರಲ್ಲ, ಎಂದು ಅಪ್ಪಣೆ ಮಾಡಿದನು. ಇದನ್ನೆಲ್ಲ ಒಪ್ಪಿಕೊಂ
ಡು, ಆ ಪರೋಪಕಾರಿಯಾದ ಹೆಣ್ಣುಮಗಳು ಆ ಶೆರೆಮನೆಯ
ಲ್ಲಿದ್ದ ಹೆಂಗಸಿನ ಕೋಣೆಯ ಹತ್ತರಕ್ಕೆ ಹೋಗಿ, ಆ ಬಿಚ್ಚುಗ
ತ್ತಿ ಹಿಡಿದ ಜನರನ್ನು ಬಾಗಿಲಲ್ಲೇ ನಿಲ್ಲಿಸಿ, ತಾನು ಆ ಹೆಂಗಸಿನ
ಬಳಿಗೆ ಬಂದು, ಮೆಲ್ಲಗೆ ಪ್ರೀತಿಯ ದನಿಯಿಂದ " ಏನಮ್ಮಾ, ನನ
ಗಿಂತೂ ನೀವು ಬಲು ಬಳ್ಳೀಯವರಾಗಿ ತೋರುತ್ತೀರಿ, ಹೀ
ನಿದ್ದು ಜನರು ನಿಮಗೆ ಇಂಥ ಮಾತುಗಳನ್ನು ಯಾಕೆ ಹೊರ
ಡುತ್ತಾರಮ್ಮಾ?" ಇವೇ ಮುಂತಾದ ಮಾತುಗಳನ್ನು ಆಡಪ
ತ್ತಿದಳು. ಬಹಳ ದಿವಸಕ್ಕೆ ಅಂಥ ಪ್ರೇಮದ ನುಡಿಗಳನ್ನು
ಅವಳು ಕೇಳಿದ್ದರಿಂದ, ಬೆರಗಾಗಿ ತುಸುಹೊತ್ತು ಏನೂ ಮಾತಾ
ಡದೆ, ಆ ಪರೋಪಕಾರಿಯಾದ ಹೆಣ್ಣುಮಗಳನ್ನು ಮಿಕಿ ಮಿಕಿ
ನೋಡಹತ್ತಿದಳು. ಅಲ್ಲಿಂದ ಅವಳು ಹೆಂಚ್ಚು ಹೆಚ್ಚಿನ ಪ್ರೇಮ

ದ ನುಡಿಗಳಿಂದ ಆ ಬಡಪ್ರಾಣಿಯಲ್ಲಿ ಪ್ರೇಮಭಾವವನ್ನೂ ವಿ
ಶ್ವಾಸವನ್ನೂ ಹುಟ್ಟಿಸಿ, ಆಕೆಯ ಕೈಕಾಲುಗಳಲ್ಲಿದ್ದ ಸಂಕೋಲೆ
ಗಳನ್ನು ತೆಗೆದು, ಅವಳ ಸಮಾಚಾರವನ್ನೆಲ್ಲ ಕೇಳಿಕೊಂಡಳು.
ಆಗ ಆ ಶೆರೆಯಲ್ಲಿದ್ದ ಹೆಂಗಸಾದರೂ ಆಕೆಯೊಡನೆ ಚೆನ್ನಾಗಿ
ಮನಸು ಬಿಚ್ಚಿ ಮಾತಾಡಹತ್ತಿದಳು.

(ಮುಂದಕ್ಕೆ ಸಾಗುವದು.)

HISTORY.

ಇತಿಹಾಸ.

ಇತಿಹಾಸವೆಂಬದು ಬಹು ದೊಡ್ಡ ವಿಷಯವು. ಇದನ್ನು ಕುರಿತು ಎಷ್ಟು ಬರೆದರೂ ಸ್ವಲ್ಪವೇ. ಯಾಕಂದರೆ, ಸ್ವತಃ ಈ ವಿಷಯವು ದೊಡ್ಡದಿರುವದಲ್ಲದೆ, ಇದರ ಅಂಗೋಪಾಂಗಗಳು ಅನೇಕ ಉಂಟು. ಹ್ಯಾಗಂದರೆ, ಈ ವಿಷಯವನ್ನು ಕುರಿತು ಬರೆಯುವವನು ಯಾವತ್ತು ಜಗತ್ತಿನ ಇತಿಹಾಸದ ಮೇಲೆ ದೃಷ್ಟಿ ಇಡಲಿಕ್ಕೆ ಬೇಕು. ಅದರಿಂದ ಅತನಿಗೆ ತೋರುವ ಮುಖ್ಯವಾದ ಸಾಮಾನ್ಯ ಸಿದ್ಧಾಂತಗಳನ್ನು ಅವನು ಉಲ್ಲೇಖಿಸಬೇಕು. ಆ ಮೇಲೆ, ದೊಡ್ಡ ದೊಡ್ಡ ರಾಷ್ಟ್ರಗಳ ಇತಿಹಾಸಗಳನ್ನು ನೋಡಿ ಆ ಬಗ್ಗೆ ಬರೆಯಬೇಕು. ಇದೇ ಮೇರೆಗೆ, ಇತಿಹಾಸದ ನೇತ್ರಗಳೆನಿಸಿಕೊಳ್ಳುವ ಭೂಗೋಲವೂ ಕಾಲ ಕ್ರಮವೂ, ಇವುಗಳ ವಿಷಯಕ್ಕೆ; ದೇಶಗಳ ಸ್ಥಿತಿವಿಶೇಷಗಳ ಫಲಗಳು, ಅಂದರೆ ಇಂಥಿಂಥ ದೇಶಗಳ ರಚನೆಯು ಈ ಪ್ರಕಾರ ಇದರಿಂದ ಇಂಥಿಂಥ ಪರಿಣಾಮಗಳು ಬದಗಿದವೆಂಬ ವಿಷಯಕ್ಕೆ; ವಿದ್ಯಾಕಲಾಕೌಶಲ್ಯ ಮುಂತಾದವುಗಳು ಹ್ಯಾಗೆ ಊರ್ಜಿತ ಸ್ಥಿತಿಯನ್ನು ಹೊಂದುತ್ತಾ ನಡೆದವೆಂಬ ವಿಷಯಕ್ಕೆ; ನಡೆನುಡಿಗಳು;

ಉಡಿಗೆ ತೊಡಿಗೆಗಳು—ಮುಂತಾದ ಯಾವತ್ತು ಸಣ್ಣ ಪುಟ್ಟ ಸಂಗತಿಗಳ ವಿವರವು ಇತಿಹಾಸವಲ್ಲಿ ಬರಲಿಕ್ಕೆ ಬೇಕು. ಸಾರಾಂಶ, ಇತಿಹಾಸವೆಂದರೆ ಇತ್ಯಂಭೂತ ವೃತ್ತಾಂತವು. ಆರಂಭದಿಂದ ಇಂದಿನ ವರೆಗೆ ವರ್ತಿಸಿವ ಯಾವತ್ತು ಸಂಗತಿಗಳ ಟಿಪ್ಪಣಿಗಳು ಅಂದರೆ ವಿವರವು ಯಾವ ಗ್ರಂಥದಲ್ಲಿ ಉಂಟೋ, ಅದೇ ಇತಿಹಾಸವು.

ಇನ್ನು, ಮೊದಲು ಈ ಶಬ್ದದ ವ್ಯುತ್ಪತ್ತಿಯು ಸ್ವಲ್ಪ ಚಪ್ಪು ತ್ಕಾರವುಳ್ಳದ್ದಿದ್ದವರಿಂದ, ಅದನ್ನು ಇಲ್ಲಿ ಬರೆಯುತ್ತೇವೆ. ಈ ಶಬ್ದದೊಳಗೆ ಮೂರು ಘಟಕಾವಯವಗಳುಂಟು: ಇತಿ—ಹ—ಆಸ ಇವುಗಳ ಅರ್ಥವು 'ಈ ಪ್ರಕಾರ ಆಯಿತು' ಎಂದು ಆಗುತ್ತದೆ. ಆದದರಿಂದ, ಈ ಶಬ್ದದ ಅರ್ಥವು 'ಹಿಂದೆ ವರ್ತಿಸಿದ ವೃತ್ತಾಂತ' ಎಂದು ಆಗುತ್ತದೆ. ಆದರೆ, ಮೊದಲಿನ ಅರ್ಥಕ್ಕೂ ಈಗಿನ ಅರ್ಥಕ್ಕೂ ದೊಡ್ಡದೊಂದು ಭೇದ ಉಂಟು. ಈ ಶಬ್ದದ ಮೂಲ ಅರ್ಥವು ಪುರಾಣಗಳೊಳಗಿನ ಉಪಕಥೆ ಅಂದರೆ ಅಪ್ರಧಾನವಾದ ಸಂಗತಿಯೆಂಬದಿತ್ತು. ಉದಾಹರಣ—ಧರ್ಮರಾಯ ಮುಂತಾದವರಿಗೆ ಬೇರೆ ಬೇರೆ ಪ್ರಸಂಗಗಳಲ್ಲಿ ಋಷಿಗಳು ಹೇಳಿದ ಪ್ರಾಚೀನ ಕಾಲದ ಅರಸರ ಕಥೆಗಳು. ಆದರೆ ಈಗ ಇತಿಹಾಸವೆಂಬ ಶಬ್ದವನ್ನು ಚರಿತ್ರವೆಂಬ ಅರ್ಥದಿಂದ ಉಪಯೋಗಿಸುವರು. ಆದಕಾರಣ, ಈ ಎರಡೂ ಅರ್ಥಗಳಲ್ಲಿರುವ ಭೇದವೇನೆಂದರೆ—ಮೊದಲನೇದಕ್ಕೆ ಕೇವಲ ಋಷಿಗಳು ಪುರಾಣಗಳಲ್ಲಿ ಬರೆದಿದ್ದ ಲೇಖಗಳೇ ಪ್ರಮಾಣವು; ಎರಡನೇದಕ್ಕೆ ಅವಕ್ಕೂ ಸಬಲವಾದ ಎಷ್ಟೋ ಆಧಾರಗಳು ಬೇಕಾಗುತ್ತವೆ.

---

* ಈ ಶಬ್ದದೊಳಗೆ 'ಹ' ಎಂಬದು ಕೇವಲ ಅವ್ಯಯವು. ಇದನ್ನು ವೇದ ಮುಂತಾದ ಹಳೇ ಗ್ರಂಥಗಳಲ್ಲಿ ಪ್ರಯೋಗಿಸುವರು.

ಮೇಲೆ ಹೇಳಿದ ಇತಿಹಾಸ ಎಂಬ ಶಬ್ದದ ಪೂರ್ವಾರ್ಥದಿಂದ ಸ್ಪಷ್ಟವಾಗಿ ತಿಳಿಯುವದೇನಂದರೆ, ಈಗಿನ ಅರ್ಥವು ಯಾವ ಗ್ರಂಥಗಳಿಗೆ ಹತ್ತುತ್ತದೋ, ಅಂಥ ಗ್ರಂಥಗಳು ನಮ್ಮ ದೇಶದಲ್ಲಿ ಬುನಾದಿಯಲ್ಲಿ ಇದ್ದಿಲ್ಲ. ಅಂದರೆ ಗ್ರೀಕರಲ್ಲಿಯೂ ರೋಮನ್ನರಲ್ಲಿಯೂ ಸಪ್ರಮಾಣದ ನಿಜವಾದ ಇತಿಹಾಸವನ್ನು ಬರೆದಿಡುವ ರೂಢಿಯು ಹ್ಯಾಗೆ ಬಿತ್ತೋ, ಹಾಗೆ ನಮ್ಮ ದೇಶದಲ್ಲಿ ಎಂದೂ ಬಿದ್ದಂತೆ ತೋರುವದಿಲ್ಲ. ಬಂದು ರೀತಿಯಿಂದ ನೋಡಿದರೆ, ಇದು ಬಹು ಚಮತ್ಕಾರವೇ ತೋರುತ್ತದೆ. ಯಾಕಂದರೆ, ಆ ಕಾಲಕ್ಕೆ ಉಳಿದ ಯಾವತ್ತು ರಾಷ್ಟ್ರಗಳಿಗಿಂತ ಬಗೆ ಬಗೆಯ ರೀತಿಯಿಂದ ಮೇಲಾಗಿದ್ದಂಥ ವಿದ್ಯೆಯು ಪ್ರತಿಬಿಂಬ ರೂಪದಿಂದ ಪೂರ್ಣವಾಗಿ ಅವತರಿಸಿದಂಥ ಪ್ರಾಜೀನ ಹಿಂದೂ ಜನರಲ್ಲಿ ಇತಿಹಾಸವನ್ನು ಬರೆದಿಡುವ ಸಂಪ್ರದಾಯವು ಇರದೆ ಇರುವದು ಬಹು ಸೋಜಿಗದ ಮಾತೇ ಸರಿ. ಆದರೂ, ಹೀಗೆ ಆಗಲಿಕ್ಕೆ ಕೆಲವು ಕಾರಣಗಳನ್ನು ಹೇಳಬಹುದೆಂದು ನಮಗೆ ತೋರುತ್ತದೆ. ಇತಿಹಾಸವು ಯಾವಾಗ ಉಬ್ಬಿಸಹತ್ತುತ್ತದೆಂಬದನ್ನು ಕುರಿತು ನಾವು ಸ್ವಲ್ಪ ವಿಚಾರ ಮಾಡುವ. ಯಾವ ಕಾಲಕ್ಕೆ ಜನಾಂಗದೊಳಗೆ ದೊಡ್ಡ ದೊಡ್ಡ ಕಾಳಗ, ರಾಜ್ಯಕ್ರಾಂತಿ ಮುಂತಾದ ಮಹತ್ವದ ಸಂಗತಿಗಳು ಸಂಭವಿಸುತ್ತವೋ, ಆ ಕಾಲಕ್ಕೆ ಇತಿಹಾಸವನ್ನು ಬರೆದಿಡಲಿಕ್ಕೆ ಆರಂಭ ಮಾಡುತ್ತಾರೆಂದು ತೋರುತ್ತದೆ. ಅಥೆನ್ಸ, ರೋಮ, ಇಂಗ್ಲಂಡ, ಮುಂತಾದ ದೇಶಗಳ ಜನರಲ್ಲಿಯೂ, ಮುಸಲ್ಮಾನರು, ಮೊಗಲರು, ಮಹಾರಾಷ್ಟ್ರರು, ಮುಂತಾದ ಜನರಲ್ಲಿಯೂ ತಮ್ಮತಮ್ಮೊಳಗೆ ವರ್ತಿಸಿದ ಸಂಗತಿಗಳ ವೃತ್ತಾಂತವನ್ನು ಬರೆದಿಡುವ ಪರಿಪಾಠವು ಇಂಥ ಪ್ರಸಂಗಗಳಲ್ಲಿಯೇ ಬಿದ್ದಿರಲಿಕ್ಕೆ ಬೇಕು

ಇವೇ ನಿಜವಾದ ಮೇಲೆ, ಪ್ರಾಚೀನ ಕಾಲದ ಹಿಂದೂ ಜನರು ಇತಿಹಾಸ ಗ್ರಂಥವನ್ನು ಯಾಕೆ ಬರೆದಿಡಲಿಲ್ಲವೆಂಬದರ ಕಾರಣವು ಬಹುತರವಾಗಿ ಸ್ಪಷ್ಟವಾಗುವದು. ನಮ್ಮ ದೇಶದ ನಾಲ್ಕೂ ದಿಕ್ಕುಗಳು ಬಹುಶಃ ಉಲ್ಲಂಘಿಸ ಕೂಡದಂಥವಿರುವದರಿಂದ, ಪ್ರಾಚೀನ ಕಾಲದ ಚೀನೀ ಜನರಂತೆ ನಮ್ಮ ಪೂರ್ವಜರಾದರೂ ತಮ್ಮ ದೇಶದಲ್ಲಿ ಯುದ್ಧ ಪ್ರಸಂಗ ಮುಂತಾದ ತೊಡರುಗಳೇನೂ ಇಲ್ಲದೆ ಸುಖದಿಂದ ಕಾಲ ಕಳೆಯುತ್ತಿದ್ದರು. ಗ್ರೀಕ್, ರೋಮನ್, ಮುಂತಾದ ಜನರ ಸಂಬಂಧವು ನೆರೆಯಲ್ಲಿದ್ದ ಜನಾಂಗಗಳ ಕೂಡ ಹ್ಯಾಗೆ ಯಾವಾಗಲೂ ಬೀಳುತ್ತಿತ್ತೋ, ಹಾಗೆ ನಮ್ಮಲ್ಲಿ ಬೀಳದ್ದರಿಂದ ಪರರಾಷ್ಟ್ರದವರ ಕೂಡ ಯುದ್ಧಾದಿ ಪ್ರಸಂಗಗಳು ಪ್ರಾಚೀನಕಾಲದ ಹಿಂದೂ ಜನರಿಗೆ ಬಿದ್ದಗಲೇ ಇಲ್ಲ. ಬಾಮು ಮೇಳೆ ಅವರಿದ್ದ ದೇಶದೊಳಗೆ ಅರಸರೊಳಗೆ ಕಾಳಗಗಳು ಆಗಿದ್ದರೂ ಆಗಿರಬಹುದು. ಆದರೆ ಇತಿಹಾಸರೂಪದಿಂದ ಅವುಗಳನ್ನು ವಿವರಿಸಿಡುವಂತೆ ಅವು ಎಂದಿಗೂ ಸಂಭವಿಸಿರಲಿಕ್ಕಿಲ್ಲವೆಂದು ತೋಚುತ್ತದೆ. ಯಾಕಂದರೆ, ಈಗಲೂ ಉಪಲಬ್ಧವಾಗಿರುವ ಆ ಕಾಲದ ಸಂಸ್ಕೃತ ಗ್ರಂಥಗಳೊಳಗೆ ಅನೇಕ ಜನ ಅರಸರು ಸ್ವತಂತ್ರರಾಗಿ ರಾಜ್ಯಕಾರಭಾರವನ್ನು ಮಾಡುತ್ತಿದ್ದರೆಂಬ ಬಗ್ಗೆ ಉಲ್ಲೇಖಗಳುಂಟು. ಆದರೆ ಕೆಲ ಒಬ್ಬ ಅರಸನು ಸಾರ್ವಭೌಮತ್ವವನ್ನು ಪಡೆದು, ಉಳಿದ ಯಾವತ್ತು ಅರಸರನ್ನು ಪೂರ್ಣಾಕ್ರಾಂತರಾಗಿ ಮಾಡಿಕೊಂಡಂತೆ ಎಲ್ಲಿಯೂ ಕಾಣುವದಿಲ್ಲ. ಆವಕಾರಣ, ದೊಡ್ಡ ದೊಡ್ಡ ಯುದ್ಧ ಪ್ರಸಂಗ, ರಾಜ್ಯಕ್ರಾಂತಿ ಮುಂತಾವ ಇತಿಹಾಸದ ಸಾಹಿತ್ಯವು ಇಲ್ಲದ್ದರಿಂದ, ಇತಿಹಾಸವನ್ನು ಬರೆದಿಡುವ ಪರಿಪಾಠವು ನಮ್ಮದೇಶದಲ್ಲಿ ಬಿದ್ದಿರಲಿಕ್ಕಿಲ್ಲವೆಂದು ತೋರುತ್ತದೆ. ಮತ್ತೊಂದು ದೊಡ್ಡ ಕಾರಣವು

ಯಾವದೆಂದರೆ, ನಮ್ಮ ಪೂರ್ವಜರು ಪಾರಮಾರ್ಥಿಕ ಹೇತ್ವಂ-
ಗಳನ್ನು ಸಾಧಿಸುವವರಲ್ಲಿ ಎಷ್ಟು ಮಗ್ನರಾಗಿರುತ್ತಿದ್ದರೋ, ಆ
ಷ್ಟು ಪ್ರಾಪಂಚಿಕ ಕಾರ್ಯಗಳನ್ನು ಸಾಧಿಸುವದರಲ್ಲಿ ತೊಡಗು
ತ್ತಿದ್ದಿಲ್ಲ. ಜಗತ್ತೆಲ್ಲ ಸುಳ್ಳು; ಪ್ರಪಂಚದೊಳಗಿನ ವ್ಯವಹಾರಗ
ಳೆಲ್ಲ ಸುಳ್ಳು; ಯಾವತ್ತು ದೇವರ ಮಾಯಾ ಲೀಲೆಯೇ ಎಂದು
ಯಾವ ಜನರ ಮನಸಿನಲ್ಲಿ ಸರ್ವಕಾಲ ಬರುತ್ತಿತ್ತೋ, ಆ ಜ
ಜನರು ಯುದ್ಧದಲ್ಲಿ ಆಗುವ ರಕ್ತ ಪ್ರವಾಹ, ರಾಜ್ಯಕ್ರಾಂತಿ
ಮುಂತಾದ ಸಂಗತಿಗಳನ್ನು ವಿವರಿಸಿ ಮನುಷ್ಯನನ್ನೇ ಹೊಗ
ಳುತ್ತ ಕೂಡುವದರಲ್ಲಿ ಬೇಸರಗೊಂಡಿರುವದೇನಾಶ್ಚರ್ಯವು;
ಆವಕಾರಣ, ನಮ್ಮ ದೇಶದಲ್ಲಿ ಇತಿಹಾಸ ಕರ್ತರು ಆಗದೆ
ಇರಲಿಕ್ಕೆ ಇವೇ ಎರಡು ದೊಡ್ಡ ಕಾರಣಗಳಿರಬೇಕೆಂದು ನಮ
ಗೆ ತೋರುತ್ತದೆ.

(ಮುಂದಕ್ಕೆ ಸಾಗುವದು.)

NOTES ON GRAMMAR.

ಗ್ರಂಥದ ಮೇಲಿಂದ ವ್ಯಾಕರಣ ಹೇಳುವದು.

(ಗತ ಪುಟದಿಂದ ಮುಂದೆ ಸಾಗಿದ್ದು.)

"ಕೊಣೆಯಲ್ಲಿ ದೀಪ ಇಟ್ಟುಕೊಂಡು ಮಲಗುವವರು ಈ
ಸೂಚನೆಯನ್ನು ಮರೆಯಲಾಗದು"

ಈ ವಾಕ್ಯದಲ್ಲಿ 'ಮಲಗುವವರು' ಕರ್ತೃ, 'ಸೂಚನೆಯ
ನ್ನು' ಕರ್ಮ, 'ಮರೆಯಲಾಗದು' ಕ್ರಿಯಾಪದ, ಭಾವಿಪ್ರ
ಯೋಗ.

---

* ಶಿಕ್ಷಕರು ತಮಗೆ ಕಠಿಣ ತೋರುವ ವಾಕ್ಯಗಳನ್ನಾಗಲಿ ವ್ಯಾಕರಣ
ದ ಕಠಿಣ ಅಥವಾ ಸಂದಿಗ್ಧ ಪ್ರಶ್ನೆಗಳನ್ನಾಗಲಿ ಬರೆದು ತಿಳಿಸಿದರೆ, ಅವು
ಗಳ ಉತ್ತರಗಳನ್ನು ಕೊಡುವದಕ್ಕೆ ಯತ್ನವಾಗುವದು. ಎ. ಕ. ಚ. ಪ

ಕೊಣೆಯಲ್ಲಿ—'ಕೊಣೆ' ರೂಢನಾಮ, ಎಕಾರಾಂತ, ನಪುಂಸಕ ಲಿಂಗ, ಸಪ್ತಮಿ ಏಕವಚನ. ಇದರ ಅರ್ಥ ಸ್ಥಾನ 'ಇಟ್ಟುಕೊಂಡು' ಎಂಬ ಕ್ರಿಯೆಗೆ.

ದೀಪವ—'ದೀಪ' ರೂಢನಾಮ, ಅಕಾರಾಂತ, ನಪುಂಸಕಲಿಂಗ ದ್ವಿತೀಯಾ ಏಕವಚನ. ಇದರ ಅರ್ಥ ಕರ್ಮ 'ಇಟ್ಟುಕೊಂಡ' ಎಂಬ ಕ್ರಿಯೆಗೆ.

ಇಟ್ಟುಕೊಂಡು—'ಇಟ್ಟುಕೊಳ್ಳು' ಎಂಬ ಸಕರ್ಮಕಧಾತು ವಿನ ಭೂತಕ್ರಿಯಾನ್ವಯನ, ಇದರ ಅರ್ಥ ರೀತಿ, 'ಮಲಗು' ಎಂಬ ಕ್ರಿಯೆಗೆ.

ಮಲಗುವವನು—'ಮಲಗುವವ' ಕೃದ್ನಾಮ, ಪುಂಸ್ತ್ರೀಲಿಂಗ, ಪ್ರಥಮಾಬಹುವಚನ, ಇದರ ಅರ್ಥ ಕರ್ತೃ, 'ಮರೆಯಲಾಗದು' ಎಂಬ ಕ್ರಿಯಾಪದಕ್ಕೆ.

ಈ—ದರ್ಶಕ ವಿಶೇಷಣ, ಇದರ ವಿಶೇಷ್ಯ 'ಸೂಚನೆ'

ಸೂಚನೆಯನ್ನು—'ಸೂಚನೆ' ಭಾವವಾಚಕನಾಮ, ಎಕಾರಾಂತ, ನಪುಂಸಕಲಿಂಗ, ದ್ವಿತೀಯಾಏಕವಚನ, ಇದರ ಅರ್ಥ ಕರ್ಮ, ಮರೆಯಲಾಗದು ಎಂಬ ಕ್ರಿಯಾಪದಕ್ಕೆ.

ಮರೆಯಲಾಗದು—ಅನುಬಂಧ ಕ್ರಿಯಾಪದ, 'ಮರೆ'ಧಾತು, ಸಕರ್ಮಕ, ನಿಷೇಧಾರ್ಥ, ನಪುಂಸಕಲಿಂಗ, ಪ್ರಥಮ ಪುರುಷ, ಏಕವಚನ.

"ರಾಮನಿಗೆ ಹತ್ತು ರೂಪಾಯಿಗಳನ್ನು* ಕೊಟ್ಟೆನೆ."

ಈ ವಾಕ್ಯದಲ್ಲಿ 'ರೂಪಾಯಿಗಳನ್ನು' ಕರ್ಮ, 'ಕೊಟ್ಟೆನೆ'

---

* 'ರಾಮನಿಗೆ ಹತ್ತು ರೂಪಾಯಿ ಕೊಟ್ಟೆನೆ' ಹೀಗೆ ವಾಕ್ಯ ಬರೆದರೆ ಕರ್ಮಣಿ ಪ್ರಯೋಗ ಮಾಡಬಹುದು.

ಕ್ರಿಯಾಪದವ, ಭಾವೀ ಪ್ರಯೋಗ. ಇಲ್ಲಿ ಕೊಟ್ಟದೆ ಅಂದರೆ ಕೊಡೋಣವಾಗಿದೆಎಂಬ ಅರ್ಥವು. ಆದದರಿಂದ, ಕೊಡು ಎಂಬ ಕ್ರಿಯೆಯು ಭಾವವೇ ಕರ್ತೃವೆಂದು ತಿಳಿಯತಕ್ಕದ್ದು.

ರಾಮನಿಗೆ—'ರಾಮು,' ಅಂಕಿತನಾಮ, ಅಕಾರಾಂತ, ಪುಲ್ಲಿಂಗ, ಚತುರ್ಥೀ ಏಕವಚನ. ಇದರ ಅರ್ಥ ಸಂಪ್ರದಾನ, 'ಕೊಟ್ಟದೆ' ಎಂಬ ಕ್ರಿಯೆಗೆ.

ಹತ್ತು—ಸಂಖ್ಯಾವಾಚಕ ವಿಶೇಷಣ. ಇದರ ವಿಶೇಷ್ಯ 'ರೂಪಾಯಿಗಳು.'

ರೂಪಾಯಿಗಳನ್ನು—'ರೂಪಾಯಿ' ರೂಢನಾಮ, ಇಕಾರಾಂತ, ನಪುಂಸಕಲಿಂಗ, ದ್ವಿತೀಯಾ ಬಹುವಚನ. ಇದರ ಅರ್ಥ ಕರ್ಮ, 'ಕೊಟ್ಟದೆ' ಎಂಬ ಕ್ರಿಯೆಗೆ.

ಕೊಟ್ಟದೆ—ಕ್ರಿಯಾಪದ, 'ಕೊಡು' ಧಾತು, ಸಕರ್ಮಕ, ನಿಶ್ಚಯಾರ್ಥ, ಭೂತಕಾಲ, ಪ್ರಥಮಪುರುಷ, ನಪುಂಸಕಲಿಂಗ, ಏಕವಚನ.

"ಕೂಳಬಕ್ಕನ ಹಾಗೆ ಬುಬ್ಬನೇ ಎಲ್ಲಾ ಬೇಡಪತ್ತಿವಲೆ ಅವನಿಗೆ ಏನೂ ತಿನ್ನಲಿಕ್ಕೆ ಕೊಡಬಾರದು."

ಈ ವಾಕ್ಯದಲ್ಲಿ 'ಏನೂ' ಕರ್ಮ, 'ಕೊಡಬಾರದು' ಕ್ರಿಯಾಪದ. ಭಾವೀ ಪ್ರಯೋಗ.

ಕೂಳಬಕ್ಕನ—'ಕೂಳಬಕ್ಕ' ಸಾಮಾಸಿಕನಾಮ, ಅಕಾರಾಂತ, ಪುಲ್ಲಿಂಗ, ಷಷ್ಠೀ ಏಕವಚನ. ಇದರ ಅರ್ಥ ಸಂಬಂಧ, 'ಹಾಗೆ' ಎಂಬ ಕ್ರಿಯಾವಿಶೇಷಣಕ್ಕೆ.

ಹಾಗೆ—ರೀತಿವಾಚಕ ಕ್ರಿಯಾವಿಶೇಷಣಾವ್ಯಯ.

ಒಬ್ಬನು—'ಒಬ್ಬ' ಸಂಖ್ಯಾವಾಚಕಸರ್ವನಾಮ, ಪುಲ್ಲಿಂಗ, ಪ್ರಥಮಾ ಏಕವಚನ. ಇದರ ಅರ್ಥ ಕರ್ತೃ, 'ಬೇಡಹತ್ತು' ಎಂಬ ಕ್ರಿಯೆಗೆ.

ಏ—ನಿಶ್ಚಯಾರ್ಥಕ ನಿಪಾತ.

ಎಲ್ಲಾ—ವಿಶೇಷಣಾರ್ಥಕ ಸರ್ವನಾಮ, ನಪುಂಸಕಲಿಂಗ, ದ್ವಿತೀಯಾ ಏಕವಚನ. ಇದರ ಅರ್ಥ ಕರ್ಮ, 'ಬೇಡಹತ್ತು' ಎಂಬ ಕ್ರಿಯೆಗೆ.

ಬೇಡಹತ್ತಿದರೆ—'ಬೇಡಹತ್ತಿದ' ಇದು 'ಬೇಡಹತ್ತು' ಎಂಬ ಸಕರ್ಮಕ ಧಾತುವಿನ ಭೂತಕೃದ್ವಾಚಕವು. 'ರೆ' ಎಂಬ ಪಕ್ಷಾರ್ಥಕ ಸಮುಚ್ಚಾಯಕಾವ್ಯಯದ ಸಂಯೋಗದಿಂದ ಇಡೀ ಪದವು ಪಕ್ಷಾರ್ಥಕ ಸಮುಚ್ಚಾಯಕಾವ್ಯಯವಾಗಿದೆ.

ಅವನಿಗೆ—'ಅವನು' ದರ್ಶಕಸರ್ವನಾಮ, ಪುಲ್ಲಿಂಗ, ಚತುರ್ಥೀ ಏಕವಚನ. ಇದರ ಅರ್ಥವು 'ಸಂಪ್ರದಾನ' ಕೊಡಬಾರದು ಎಂಬ ಕ್ರಿಯೆಗೆ.

ಏನೂ—ಸಾಮಾನ್ಯಾರ್ಥಕ ಸರ್ವನಾಮ, ನಪುಂಸಕಲಿಂಗ ದ್ವಿತೀಯಾ ಏಕವಚನ. ಇದರ ಅರ್ಥ 'ಕರ್ಮ' ತಿನ್ನು ಎಂಬ ಕ್ರಿಯೆಗೆ.

ತಿನ್ನಲಿಕ್ಕೆ—'ತಿನ್ನು' ಎಂಬ ಸಕರ್ಮಕ ಧಾತುವಿನ ಭಾವರೂಪ.

ಕೊಡಬಾರದು—ಅನುಬಂಧ ಕ್ರಿಯಾಪದ, 'ಕೊಡು' ಧಾತು,

ಒಮ್ಮೊಮ್ಮೆ ಶಬ್ದಗಳ ಪ್ರಕೃತಿ ರೂಪವನ್ನು ದ್ವಿತೀಯಾ ವಿಭಕ್ತಿಯಲ್ಲಿ ಉಪಯೋಗಿಸುವರು. ಆಗ ಅದರ ಅಂತ್ಯ ಸ್ವರವು ದೀರ್ಘವಾಗುವುದು.

† ಈ ಭಾವರೂಪದ ಧಾತ್ವರ್ಥವು 'ಕೊಡಬಾರದು' ಎಂಬ ಕ್ರಿಯೆಗೆ ಕರ್ಮ.

ಸಕರ್ಮಕ, ನಿಷೇದಾರ್ಥ, ನಪುಂಸಕಲಿಂಗ,
ಪ್ರಥಮಪುರುಷ, ಏಕವಚನ.

" ನೀನು ನನಗೆ ಹತ್ತು ರೂಪಾಯಿಗಳನ್ನು ಕೊಟ್ಟರೆ, ಬಹಳ ಉಪಕಾರ ಮಾಡಿದಂತೆ ಆಗುತ್ತದೆ."

ಈ ವಾಕ್ಯದಲ್ಲಿ ' ನೀನು ನನಗೆ ಹತ್ತು ರೂಪಾಯಿಗಳನ್ನು ಕೊಟ್ಟರೆ,' ಎಂಬ ವಾಕ್ಯದಿಂದ ಸೂಚಿತವಾಗುವ ಕ್ರಿಯೆಯ 'ಭಾವವು' ಅಧ್ಯಾಹೃತ ಕರ್ತೃ, ' ಆಗುತ್ತದೆ ' ಕ್ರಿಯಾಪದ, ಭಾವಿಪ್ರಯೋಗ.

ನೀನು—ಮಧ್ಯಮಪುರುಷಾರ್ಥಕ ಸರ್ವನಾಮ, ಪುಂಸ್ತ್ರೀಲಿಂಗ, ಪ್ರಥಮಾ ಏಕವಚನ. ಇವರ ಅರ್ಥ ' ಕರ್ತೃ' ಕೊಟ್ಟದೆ ಎಂಬ ಕ್ರಿಯೆಗೆ.

ನನಗೆ—'ನಾನು' ಉತ್ತಮಪುರುಷಾರ್ಥಕ ಸರ್ವನಾಮ, ಪುಂಸ್ತ್ರೀಲಿಂಗ, ಚತುರ್ಥೀ ಏಕವಚನ. ಇವರ ಅರ್ಥ ' ಸಂಪ್ರದಾನ ' ' ಕೊಟ್ಟದೆ ' ಎಂಬ ಕ್ರಿಯೆಗೆ.

ಹತ್ತು—ಸಂಖ್ಯಾವಾಚಕವಿಶೇಷಣ, ಇದರ ವಿಶೇಷ್ಯ 'ರೂಪಾಯಿಗಳು.'

ರೂಪಾಯಿಗಳನ್ನು—'ರೂಪಾಯಿ' ರೂಢನಾಮ, ಇಕಾರಾಂತ, ನಪುಂಸಕಲಿಂಗ, ದ್ವಿತೀಯಾ ಬಹುವಚನ. ಇವರ ಅರ್ಥ 'ಕರ್ಮ' ಕೊಟ್ಟದೆ ಎಂಬ ಕ್ರಿಯೆಗೆ.

ಕೊಟ್ಟರೆ—'ಕೊಟ್ಟ' ಇದು 'ಕೊಡು' ಎಂಬ ಸಕರ್ಮಕಧಾತುವಿನ ಭೂತಕೃದ್ವಾಚಕವು. ' ರೆ ' ಎಂಬ ಪಕ್ಷಾರ್ಥಕ ಸಮುಚ್ಚಾಯಕಾವ್ಯಯದ ಸಂಯೋಗದಿಂದ ಇಡೀ ಪದವು ಪಕ್ಷಾರ್ಥಕ ಸಮುಚ್ಚಾಯಕಾವ್ಯಯವಾಗಿದೆ.

ಬಹಳ—ಕ್ರಿಯಾವಿಶೇಷಣಾವ್ಯಯ. ಇವರ ಸಂಬಂಧವು 'ಉಪಕಾರ ಮಾಡು' ಈ ಕ್ರಿಯೆಯ ಕಡೆಗೆ.

ಉಪಕಾರ ಮಾಡಿದಂತೆ—' ಉಪಕಾರ ಮಾಡಿದ ' ಇದು ' ಉಪಕಾರ ಮಾಡು ' ಎಂಬ ಸಾಮಾನಿಕ ಕ್ರಿಯೆಯ ಭೂತಕೃದ್ವಾಚಕವು. ಅಂತೆ ಎಂಬ ರೀತಿವಾಚಕ ಕ್ರಿಯಾವಿಶೇಷಣಾವ್ಯಯದ ಸಂಯೋಗದಿಂದ ಇಡೀ ಪದವು ರೀತಿವಾಚಕ ಕ್ರಿಯಾವಿಶೇಷಣಾವ್ಯಯವಾಗಿದೆ.

ಆಗುತ್ತದೆ—ಕ್ರಿಯಾಪದ. ' ಆಗು ' ಧಾತು, ಅಕರ್ಮಕ, ನಿಶ್ಚಯಾರ್ಥ, ವರ್ತಮಾನಕಾಲ, ಪ್ರಥಮಪುರುಷ, ನಪುಂಸಕಲಿಂಗ, ಏಕವಚನ.

" ತಾಯಿತಂದೆಗಳಿಗೆ ಅಂತಃಕರಣ ಹುಟ್ಟಿದರೆ, ಅವರು ತನಗೆ ಶಿಕ್ಷೆ ಮಾಡಲಿಕ್ಕಿಲ್ಲೆಂಬ ಅತ್ಮನಿಗೆ ತಿಳಿದದೆ."

ಈ ವಾಕ್ಯದಲ್ಲಿ ' ಅವರು ತನಗೆ ಶಿಕ್ಷೆ ಮಾಡಲಿಕ್ಕಿಲ್ಲ ' ಎಂಬುದು ಉದ್ದೇಶಪದ ಕರ್ತೃ, ' ತಿಳಿದದೆ ' ಕ್ರಿಯಾಪದ. ಅಕರ್ಮಕಕರ್ತರಿ ಪ್ರಯೋಗ.

ತಾಯಿತಂದೆಗಳಿಗೆ—' ತಾಯಿತಂದೆಗಳು ' ಸಾಮಾನಿಕನಾಮ, ದ್ವಂದ್ವ ಸಮಾಸ, ಎಕಾರಾಂತ, ಪುಲ್ಲಿಂಗ, ಚತುರ್ಥೀ ಬಹುವಚನ. ಇವರ ಅರ್ಥ ' ಸಂಪ್ರದಾನ ' ಹುಟ್ಟಿದರೆ ಎಂಬ ಕ್ರಿಯೆಗೆ.

(ಮುಂದಕ್ಕೆ ಸಾಗುವದು.)

CORRESPONDENCE.

ಪತ್ರವ್ಯವಹಾರ.

ವಿಜಾಪುರ ಜಿಲ್ಲೆಯ ಒಬ್ಬ ಮಾಸ್ತರರು ಆ ಜಿಲ್ಲೆಯ ವಿದ್ಯಾ ಖಾತೆಯ ಅಧಿಕಾರಿಗಳ ಸಂಬಂಧದಿಂದ ಮರಾಠಿ ಭಾಷೆಯುಳ್ಳ ಮೋಡಿ ಅಕ್ಷರಗಳಿಂದ ಗಿಜಿಬಿಜಿಯಾಗಿ ಬಂದ ಪತ್ರವನ್ನು ಮನಸಿಗೆ ಬಂದಹಾಗೆ ಬರೆದು ಕಳಿಸಿದ್ದಾರೆ. ಇಂಥ ಪತ್ರಗಳಿಗೆ ಈ ಶಾಲಾಪತ್ರಕದಲ್ಲಿ ಎಂದಿಗೂ ಸ್ಥಳ ದೊರೆಯಲಾರದು. ತಮ್ಮಗೆ ವರಿಷ್ಠರಿಂದ ಏನಾದರು ಅನ್ಯಾಯವಾಗುತ್ತಿದ್ದರೆ, ಮೇಲಧಿಕಾರಿಗಳಿಗೆ ಬಿನ್ನಹ ಮಾಡಿಕೊಂಡು ನ್ಯಾಯ ಪಡಕೊಳ್ಳತಕ್ಕದ್ದು. ನಮ್ಮ ಶಾಲಾಪತ್ರಕದಲ್ಲಿ ಛಾಪಿಸುವದಕ್ಕೆ ಏನಾದರೂ ಸಾರ್ವಜನಿಕ ಶಾಲೋಪಯೋಗಿ ವಿಷಯಗಳಿದ್ದರೆ ಕಳಿಸಬೇಕು. ಇಂಥ ವಿಷಯಗಳಿಗೆ ನಾವು ಬಹಳ ಸಂತೋಷದಿಂದ ನಮ್ಮ ಪತ್ರಕದಲ್ಲಿ ಸ್ಥಳ ಕೊಡುವೆವು. ವಿಷಯಗಳನ್ನು ಕಳಿಸುವದಾವರೆ ಶುದ್ಧ ಕನ್ನಡ ಭಾಷೆಯಲ್ಲಿ ಸುವಾಚ್ಯ ಅಕ್ಷರಗಳಿಂದ ಕಾಗದವನ ಬಂದೇ ಮಗ್ಗಲಿಗೆಬರೆದು ಕಳಿಸಬೇಕು.

ಎಡಿಟರ, ಕ. ಶಾ. ಪ.

ಬಂಕಾಪೂರ ತಾಲೂಕದೊಳಗಿನ ಹಿರೇ ಬೂದಿಹಾಳದ ಶಾಲೆಯ ಹೆಡ್‌ಮಾಸ್ತರರು ತಮಗೆ ಮೇ ತಿಂಗಳ ಪತ್ರಿಕೆ ಮುಟ್ಟಿಲ್ಲವೆಂದು ಪತ್ರ ಬರೆದಿದ್ದಾರೆ. ಇತ್ತಕಡಿಂದ ಎಲ್ಲರಗೂಡ ಮೇ ಜೂನ ತಿಂಗಳಗಳ ಪತ್ರಕಗಳು ಜಾಗ್ರತೆಯಿಂದ ರವಾನೆಯಾಗಿರುತ್ತವೆ. ಪತ್ರಕ ಮುಟ್ಟದೆ ಇದ್ದರೆ ಮೊದಲು ಟಪಾಲ ಖಾತೆಯ ಅಧಿಕಾರಿಗಳನ್ನು ವಿಚಾರಿಸಿ ನಮಗೆ ತಿಳಿಸತಕ್ಕದ್ದು, ಅಂದರೆ ನಾವು ವಿಚಾರಿಸುವೆವು. ಎಡಿಟರ, ಕ. ಶಾ. ಪ.

ನೋಟೀಸು.

ಯಾವತ್ತು ಜನರಿಗೆ ತಿಳಿಸುವದೇನಂದರೆ:—

ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಬರುವ ನೊವೆಂಬರ ತಿಂಗಳ ಎಷ್ಟನೇ ತಾರೀಖು ಗುರುವಾರ ದಿವಸ ಕನ್ನಡ ಒನೇ ಇಯತ್ತ್ಹೆಯಂತೆ ಆಗುವದು. ಪರೀಕ್ಷೆಗೆ ಬರುವವರು ಒನೇ ಅಥವಾ ಸೆನೇ ಗ್ರೇಡಿನ ಮುಲ್ಕೀ ಸರ್ಟಿಫಿಕೇಟು ಪಡೆದವರೂ, ಸಶಕ್ತರೂ, ವ್ಯಂಗರಹಿತರೂ, ಐದು ಫೂಟಗಿಂತ ಎತ್ತರವಿದ್ದವರೂ, ಹದಿನೇಳರಮೇಲೆ ಇಪ್ಪತ್ತೈದರ ಒಳಗೆ ವಯಸ್ಸುಳ್ಳವರೂ ಇರಬೇಕು. ಮತ್ತು ಅವರು ವಯಸ್ಸಿನ ದಾಖಲೆಯನ್ನೂ, ಮುಲ್ಕೀ ಸರ್ಟಿಫಿಕೇಟನ್ನೂ ಸಂಗಡ ತಕ್ಕೊಂಡು, ಮೇಲೆ ಕಾಣಿಸಿದ ತಾರೀಖಿನ ಒಳಗಾಗಿ ಕಾಲೇಜಕ್ಕೆ ಬಂದು ಹಾಜರಾಗಬೇಕು. ಪರೀಕ್ಷೆಗೆ ಬಂದವರು ಅಸಿಸ್ಟಂಟರೇ ಇರಲಿ, ವಿದ್ಯಾರ್ಥಿಗಳೇ ಇರಲಿ, ಅವರಲ್ಲಿ ಉತ್ತಮ ರೀತಿಯಿಂದ ಪಾಸಾದ ನೂರು ಜನರನ್ನು ಪಗಾರೀ ವಿದ್ಯಾರ್ಥಿಗಳಾಗಿ ತೆಗೆದುಕೊಳ್ಳಲಾಗುವದು.

೨. ಪರೀಕ್ಷೆಗೆ ಬರುವವರು ಪರೀಕ್ಷೆಯ ವಿಷಯಗಳನ್ನು ಚೆನ್ನಾಗಿ ನೋಡಿಕೊಂಡು ಬಂದರೆ, ಅವರನ್ನು ಹಿಂದಿರುಗಿ ಕಳುಹಿಸುವ ಪ್ರಸಂಗವು ಬರಲಿಕ್ಕಿಲ್ಲ, ಮತ್ತು ಅವರ ಶ್ರಮವು ವ್ಯರ್ಥವಾಗಲಿಕ್ಕಿಲ್ಲ. ಕಾಲೇಜಕ್ಕೆ ಬರಲಪೇಕ್ಷಿಸುವ ಚುರುಕು ಬುದ್ಧಿಯ ವಿದ್ಯಾರ್ಥಿಗಳು ಈ ಪ್ರಸಂಗವನ್ನು ಕಳಕೊಳ್ಳಬಾರದು.

ಟ್ರೇನಿಂಗ ಕಾಲೇಜ ಧಾರವಾಡ,
ತಾರೀಖು ೧–೫–೯೦.

RAOJI B. KARANDIKAR,
ಪ್ರಿನ್ಸಿಪಾಲ.

ಪುಸ್ತಕ ಮೂರಲಿಕ್ಕೆ ಸಿದ್ಧವಾಗಿದೆ.

ಶಬ್ದಮಂಜರಿ ಕೋಶವು:—ಈ ಪುಸ್ತಕವನ್ನು ಕೈ. ವಾ. ಗಂ ಗಾಧರ ಮಡಿವಾಳೇಶ್ವರ ತೂರಮರಿ ಇವರು ರಚಿಸಿದ್ದು, ಇದರ ಪ್ರತಿಗಳು ಈಗ ಜನರಿಗೆ ಶಿಗುವದು ದುರ್ಲಭವಾದ್ದರಿಂದ, ಅದನ್ನು ಒಳ್ಳೇ ಡಪ್ಪ ಕಾಗದದ ಮೇಲೆ ಸುವಾಚ್ಯ ಮೊಳೆಗಳಿಂದ ಛಾಪಿಸಿ ಮೊದಲಿಗಿಂತಲೂ ೫೦೦೦ ಶಬ್ದಗಳನ್ನೂ ಶಬ್ದಪ್ರವೃತ್ತಿಯನ್ನೂ ಪೆಜಿ ಗೆ ಹಾಕಿ ತಯಾರು ಮಾಡಿದ್ದೇವೆ. ಅದರ ಬೆಲೆ ೪ ರೂಪಾಯಿ, ಟಪಾಲ ಹಾಸಲು ೪ ಆಣೆ. ಪುಸ್ತಕವು ಸಂಗ್ರಹಕ್ಕೆ ಎಷ್ಟು ಯೋಗ್ಯವಾದದ್ದೆಂಬದು ಅದನ್ನು ನೋಡಿದರೆ ತಿಳಿಯುವದು.

ಬಾಲಶಿಕ್ಷಣ ಅಥವಾ ಅಂಕರಪಿ. (ಎನೇ ಆವೃತ್ತಿ).

ಈ ಪುಸ್ತಕವನ್ನು ರಾ. ರಾ. ವಿರೂಪಾಕ್ಷಪ್ಪಾ ಹೂಲಿ ಇವರು ರಚಿಸಿದ್ದಾರೆ. ಇದರಲ್ಲಿ ಬಿನ್ನ ಇಯತ್ತೆಯವರಿಂದ ಎನೇ ಇಯತ್ತೆಯ ವಿದ್ಯಾರ್ಥಿಗಳಿಗೆ ಉಪಯೋಗವಾಗುವ ಬಳ್ಳಿಗಳು, ಎರಡು ಮೂರು ನಾಷ್ಟು ಅಕ್ಷರದ ಸುಲಭ ಶಬ್ದಗಳು, ದ್ವಿತ್ತಕ್ಷರದ ಶಬ್ದಗಳು, ಅಂಕೆ, ೩೦ ವರಿಗೆ ಮೊಗ್ಗೆ, ಕಾಲು, ಅರ್ಧ, ಮುಕ್ಕಾಲು, ಒಂದುಕಾಲು, ಒಂದುವರೆ, ಎರಡುವರೆ, ಆಣೆ ಮತ್ತು ಮನೆಯಲ್ಲಿ ಹಾಡುವ ನೀತಿಯ ಪದಗಳು, ಜೋಗುಳ ಪದಗಳು, ಶಿವಸ್ತೋತ್ರ, ಪಾರ್ವತಿ ಸ್ತೋತ್ರ, ಕೋಲಿನ ಪದ ಇವೆಲ್ಲ ಸಂಗ್ರಹಿಸಿ ಬಹು ಶ್ರಮದಿಂದ ದೊಚಿಕಿಸಿ ಛಾಪಿಸಿದ್ದಾರೆ. ಕ್ರಯ ಬಹು ಕಡಿಮೆ ಒಂದೇ ಆಣೆ.

ಧಾರವಾಡ,
20–8–90.

ಚನ್ನವೀರ ಫಕೀರಪ್ಪ,
ಪ್ರೊಪ್ರೈಟರ್, ಕರ್ನಾಟಕ ಬುಕ್‌ಡಿಪೋ ಪ್ರೆಸ್

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಬಯಸುತ್ತಂ ಪ್ರತಿಮಾಸದಾವಿಗೊಲವಿಂವೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆನ್ನೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ಬಯಿಯಿಂ ಸೋಷವತಿಪ್ಪನೇಳ್ವುದುಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ॥೧॥

ಪುಸ್ತಕ ೨೫.] ಸೆಪ್ಟಂಬರ ೧೮೯೯ನೇ ಇ. [ಸಂಚಿಕೆ ೯.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಇಂಗ್ಲಂಡವಲ್ಲಿ ಆಗುವ ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಈ ವರ್ಷ ನಾಲ್ವತ್ತೈದು ಜನರು ಪಾಸಾದರು. ಇವರಲ್ಲಿ ನಾಲ್ವರು ಹಿಂದೂ ಜನರು ಒಬ್ಬನು ಮುಸಲ್ಮಾನನು, ಅಂತೂ ಐದು ಜನರು ನಮ್ಮ ಹಿಂದುಸ್ಥಾನದಿಂದ ಪಾಸಾದರು. ಅವರ ಹೆಸರು ಗುಣ ನಂಬರಗಳು ಕೆಳಗೆ ಬರೆವಂತೆ:—

ಹೆಸರು.	ಗುಣಗಳು.	ನಂಬರ.
ನಾತಿಶ ಚಂದರ ಮುಕರಜಿ ...	೧೪೯೦	೧೦
ಆರ ಬಿಂದು ಘೋಷ ...	೧೪೫೪	೧೧
ಮೂಡಗಾವೆಕರ ...	೧೪೪೩	೪೨
ಯೂಸೂಫ ...	೧೪೧೩	೪೩
ಮೊಹಿನಿ ಮೊಹನ ಘೋಷ ...	೧೪೦೯	೪೫

ಇವರ ಮೇಲಿಂದ ಪರೀಕ್ಷೆ ಕೊಡುವವರಲ್ಲಿ ಬಾಬು ಜನರು ಎಷ್ಟು ಜಾಣರಿದ್ದಾರೆಂಬದು ಓದುವವರ ಲಕ್ಷ್ಯಕ್ಕೆ ಬರುವದು. ಐವರಲ್ಲಿ ಮೂರು ನಂಬರುಗಳನ್ನು ಬಾಬು ಜನರು ದೊರಕಿಸಿವರು. ಈ ಪರೀಕ್ಷೆಯು ಅಮಲಿನಲ್ಲಿ ಬಂದು ಈಗ ಸುಮಾರು ೩೦ ವರುಷಗಳಾದವು. ಆದರೆ ಇನ್ನೂ ವರೆಗೆ ನಮ್ಮಲ್ಲಿಯ ಬಬ್ಬ ಕರ್ನಾಟಕಸ್ಥನಾದರೂ ಈ ಪರೀಕ್ಷೆಗೆ ಹೋದಂತೆ ತೋರುವದಿಲ್ಲ. ಈಗ ವಯಸ್ಸಿನ ನಿರ್ಬಂಧವು ಹತ್ತೊಂಬತ್ತು ಇದ್ದದ್ದು ಇಪ್ಪತ್ತುಮೂರು ಮಾಡಲ್ಪಟ್ಟದ್ದರಿಂದ, ಇನ್ನು ಮೇಲಾದರೂ ನಮ್ಮ ದೇಶದ ಜನರು ಈ ಪರೀಕ್ಷೆಗೆ ಹೋಗಿ ಯಶ ಪಡೆದು, ದೊಡ್ಡ ದೊಡ್ಡ ಅಧಿಕಾರದ ಸ್ಥಳಗಳನ್ನು ಸಂಪಾದಿಸುವರೆಂದು ತುಂಬಾ ಆಶಿಸುತ್ತೇವೆ.

ಹೊಗೆ ಬಂಡಿಯಿಂದ ಶಿಕ್ಷಣಕ್ಕೆ ಅನುಕೂಲತೆ—ಪಶ್ಚಿಮ ತೀರ್ತರಿಯೊಳಗೆ ಕೆಲವು ಕಡೆಯಲ್ಲಿ ಶಾಲಾಗೃಹಗಳನ್ನು ಸ್ಥಾಪಿಸುವದಕ್ಕೆ ಅನುಕೂಲತೆ ಇಲ್ಲದ್ದರಿಂದ, ರಶಿಯನ್ ಸರಕಾರದವರು ಹೊಗೆ ಬಂಡಿಗಳ ಸಹಾಯದಿಂದ ಅಲ್ಲಲ್ಲಿ ವಿದ್ಯಾ ಪ್ರಸಾರ ಮಾಡುವದನ್ನು ಕೈಕೊಂಡಿದ್ದಾರೆ. ಹೊಗೆ ಬಂಡಿಗಳೊಳಗೆ ಕೆಲವು ಬಂಡಿಗಳನ್ನು ಶಿಕ್ಷಣದ ಕೆಲಸದ ಸಲುವಾಗಿಯೇ ಸಿದ್ಧಮಾಡಿ, ಅವುಗಳೊಳಗೆ ಶಿಕ್ಷಣದ ಯಾವತ್ತು ಸಾಹಿತ್ಯವನ್ನೂ ಬುಡಿಸಿಂದು ಬಂಡಿಯೊಳಗೆ ಬಬ್ಬೊಬ್ಬ ಶಿಕ್ಷಕನನ್ನೂ ನೇಮಿಸಿ ಇಟ್ಟಿರುವರು. ಈ ಬಂಡಿಗಳು ಬೇರೆ ಬೇರೆ ಸ್ಟೇಶನಗಳಿಗೆ ಹೋಗಲಾಗಿ, ಅಲ್ಲಿ ಹೊವಲೇ ಕೂಡಿಸಿ ಇಟ್ಟ ಹುಡುಗರಿಗೆ ಆ ಶಿಕ್ಷಕನು ಓದು, ಬರಹ, ವ್ಯಾಕರಣ ಮುಂತಾದ ವಿಷಯುಗಳನ್ನು ಕಲಿಸುತ್ತಾನೆ. ಬಳಿಕ ಅದೇ ಬಂಡಿಯು ಮುಂದಿನ ಸ್ಟೇಶನಕ್ಕೆ ಹೋಗುತ್ತದೆ.

ಒಬ್ಬ ಫ್ರೆಂಚ್ ರಸಾಯನಶಾಸ್ತ್ರಜ್ಞನು ಬಂದು ತೆರದ ಗಾಯವುಳ್ಳವನನ್ನು ಶೋಧಿಸಿ ತೆಗೆದಿದ್ದಾನೆ. ಅವರಿಂದ ತುಬಾಕಿ, ತೋಪು ಮುಂತಾದವುಗಳ ಗುಂಡುಗಳನ್ನು ಮತ್ತು ಹಾಕದೆ ಹಾರಿಸಲಿಕ್ಕೆ ಬರುತ್ತದೆ. ಗುಂಡು ಹಾರಿಸುವಾಗ ಹೊಗೆ ಹೊರಡುವದಿಲ್ಲ, ಮತ್ತು ಸಪ್ಪಳವೂ ಆಗುವದಿಲ್ಲ.

ಡಾಕ್ಟರ್ ಗ್ಯಾಟ್ಲಿಂಗನೆಂಬ ಬಬ್ಬ ಶೋಧಕನು ಬರ್ಫ ಮಾಡುವ ಒಂದು ಯಂತ್ರವನ್ನು ರಚಿಸುವವರಲ್ಲಿ ತೊಡಗಿದ್ದಾನೆ. ಈ ಯಂತ್ರವು ತಯಾರಾದರೆ, ಮೊದಲಿನ ೫ ದಪ್ಪ ಖರ್ಚಿನೊಳಗೆ ಬರ್ಫವನ್ನು ಸಿದ್ಧ ಮಾಡಬಹುದೆಂದು ಅವನು ಹೇತ್ತಾನೆ.

ಧಾರವಾಡ ಟ್ರೇನಿಂಗಕಾಲೇಜದ ವಾರ್ಷಿಕ ಪರೀಕ್ಷೆಯು ಬರುವ ಅಕ್ಟೋಬರ ತಿಂಗಳ ೧೬ನೇ ತಾರೀಖಿಗೆ ಆಗುತ್ತದಂತೆ.

ಜಾವಾ ನಡುಗಡ್ಡೆಯು ಸೂರ್ಯಕ್ಕೆ ಜೂಲೈ ತಿಂಗಳ ೧೦ನೇ ತಾರೀಖಿನ ದಿವಸ ಬೆಳಿಗ್ಗೆ ಭೂಕಂಪವಾದದರಿಂದ, ಆಸ್ಟ್ರೇಲಿಯಕ್ಕೆ ತಂತಿಯಿಂದ ವರ್ತಮಾನ ಕಳಿಸುವದು ಬಂದು ಆಗಿತ್ತು. ಜಾವಾದಿಂದ ಪೋರ್ಟ ಡಾರ್ವಿನವರೆಗೆ ಸಮುದ್ರದೊಳಗೆ ಹೊದಲು ಹಾಕಿರುವ ಎರಡು ತಂತಿಯ ಮಿಣಿಗಳಲ್ಲದೆ, ಬಳಗಡೆಯಲ್ಲಿ ಅಲ್ಲಿಂದ ಪಶ್ಚಿಮ ಆಸ್ಟ್ರೇಲಿಯದ ವರೆಗೆ ಬಂದು ತಂತಿಯ ಮಿಣಿಯನ್ನು ಚಲ್ಲಿದ್ದರು. ಭೂಕಂಪದಿಂದ ಈ ಮೂರೂ ತಂತಿಗಳು ಹರಿದು ಹೋದವು. ೧೦ನೇ ತಾರೀಖಿಗೆ ಶಿರರ್ಡ ಆಸಬರ್ನ್ ಎಂಬ ಹಡಗವು ಮೇಲಿಂದ ಸಮುದ್ರದೊಳಗೆ ಪ್ರವಾಹದೊಸ ತಂತಿಯ ಮಿಣಿಯನ್ನು ಚಲ್ಲಿ, ತಂತಿಯ ಟಪಾಲದ ಮಾರ್ಗವನ್ನು ಬಹುಬೇಗ ನಟ್ಟಗೆ ಮಾಡಿದರು.

ಎಲ್ಫಿನ್‌ಸ್ಟನ್ ಕಾಲೇಜದ ಪ್ರಿನ್ಸಿಪಾಲರಾದ ಮೇಹಬ್ಯಾನ

ಡಬಲ್ಯೂ. ವೆಡ್ಡರ್ಬರ್ನ ಸಾಹೇಬ ಎಮ್. ಪಿ. ಸಿ. ಐ. ಇ ಇವರನ್ನು ಮುಂಬಯಿ ಯುನಿವರ್ಸಿಟಿಯ ಫೈಸ ಚಾನ್ಸಲರರಾಗಿ ನೇಮಿಸಿದರು.

ಸೀರಿಯದಲ್ಲಿ ದಮಾಸ್ಕನ ಪಟ್ಟಣದ ಹತ್ತಿರ ಬಂದು ಗವಿಯೊಳಗೆ ನವರತ್ನಗಳಿಂದ ಕೆಚ್ಚಿದಂಥ ಬಂಗಾರ ಬೆಳ್ಳಿಯದೊಂದು ಮಂಚವು ದೊರೆದದೆ. ಅದರ ಮೇಲೆ ಇಂಗ್ಲಿಂಷ ಲಿಪಿಯಲ್ಲಿ ಎಲಿನೌರರಾಣಿ' ಎಂಬ ಅಕ್ಷರಗಳು ಕೆತ್ತಲ್ಪಟ್ಟವೆ. ಇಂಗ್ಲಂಡದ ಅರಸನಾದ ಮೊದಲನೇ ಎಡ್ವರ್ಡನು ೧೨೮೯ನೇ ವರ್ಷ ಆ ದೇಶಕ್ಕೆ ಧರ್ಮ ಯುದ್ಧಕ್ಕೆ ಹೋದಾಗ, ಆ ಮಂಚವು ಸುರಕ್ಷಿತವಾಗಿ ಇರಬೇಕೆಂದು ಗವಿಯೊಳಗೆ ಇಟ್ಟಿದ್ದನೆಂದು ಹೇಳುತ್ತಾರೆ. ಅಲ್ಲಿಯ ಸುಲ್ತಾನನ ಅಧಿಕಾರಿಗಳು ಅದನ್ನು ಈಗ ತಮ್ಮ ವಶಕ್ಕೆ ತಕ್ಕೊಂಡಿದ್ದಾರೆ. ಅದು ಯಾರ ಭೂಮಿಯಲ್ಲಿ ದೊರೆದಿರುವದೋ ಅವರಿಗೆ ಅದನ್ನು ತಿರಿಗಿ ಕೊಡತಕ್ಕದ್ದೆಂದು ಬಹು ಜನರು ಅನ್ನುತ್ತಾರೆ.

A NEW PROPOSAL.

ಒಂದು ಹೊಸ ಆಲೋಚನೆ.

ಮಧ್ಯ ಭಾಗದ ಎಜುಕೇಶನಲ್ ಇನ್ಸಪೆಕ್ಟರರಾದ ಮಿಹರ ಬಾನ ಕಖ್ರ್ಯಾಮ್ಜಿ ಸಾಹೇಬರು ಸರಕಾರದವರಿಗೆ ಬಂದು ಸೂಚನೆಯನ್ನು ಮಾಡಿದ್ದಾರೆ. ಅದು ಬಹುಜನರಿಗೆ ಸಂಬಂಧಿಸಿರುವದೆಂದೆನ್ನಬಹುದು. ಅದನ್ನು ಸರಕಾರದವರು ಒಪ್ಪಿಕೊಂಡರೆ, ಅವರಿಂದ ನಮ್ಮ ಮುಂಬಯಿ ಇಲಾಖೆಯೊಳಗಿನ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಬಹಳ ಸಹಾಯವಾಗುವದೆಂದು ತೋರುತ್ತ್ಹ

ಡಿ. ಆ ಸೂಚನೆಯು ಮಾಡಿದ ಸೂಚನೆಯ ಮುಖ್ಯ ಅಭಿಪ್ರಾಯವು ನಿನ್ನವರೆ, ಟ್ರೇನಿಂಗ ಕಾಲೇಜಗಳ ಪ್ರಿನ್ಸಿಪಾಲರು ಡೆಪ್ಯುಟಿ ಎಜುಕೇಶನಲ್ ಇನ್ಸ್‌ಪೆಕ್ಟರರು ಮುಂತಾದವರ ಅಧಿಕಾರದ ಸ್ಥಳಗಳಿಗೆ ನೇಮಿಸಲ್ಪಡುವಂಥ ಕೆಲ ಏತದ್ದೇಶೀಯ ಗೃಹಸ್ಥರನ್ನು, ಆ ಸ್ಥಳಗಳು ತಲವಾಗುವವಕ್ಕೆ ಕೆಲವು ಕಾಲ ಮುಂಚಿತವಾಗಿ, ನೇಮಿಸುವ ಆಲೋಚನೆ ಮಾಡಿರಬೇಕು. ಮತ್ತು ಇಂಥವರನ್ನು ಇಂಗ್ಲಂಡಕ್ಕೆ ಕಳುಹಿಸಿ, ಅಲ್ಲಿಯ ಟ್ರೇನಿಂಗ ಕಾಲೇಜಗಳಲ್ಲಿಟ್ಟು ಅಭ್ಯಾಸ ಮಾಡಿಸಬೇಕು, ಅಂದರೆ ಆ ದೇಶದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ನಡೆಯುವ ಮೇಲಾದ ಶಿಕ್ಷಣ ಪದ್ಧತಿಗಳೂ ವ್ಯವಸ್ಥೆಯೂ ಚನ್ನಾಗಿ ತಿಳಿಯುವವು. ಹಿಂದುಸ್ಥಾನದಲ್ಲಿ ಮೊದಲಿನಿಂದ ಹಳೇ ಪದ್ಧತಿಯನ್ನೇ ಅನುಸರಿಸುವ ರೂಢಿಯು ಬಲವತ್ತರವಾಗಿದೆ. ಆದವರಿಂದ, ಈ ಸೂಚನೆಯಂತೆ ಆಗಾಗ್ಗೆ ಹೊಸ ಹೊಸ ವಿಚಾರಗಳನ್ನು ಅವರೊಳಗೆ ಶೇರುವದರಿಂದ ಬಹಳೇ ಹಿತವಾಗುವದು. ಮುಂಬಯಿ ಕಾಪ್ರೊ-ರೇಶನವೆಂಬ ಸಭೆಯವರು ಕೆಲವು ತಿಂಗಳ ಕೆಳಗೆ ಊರೊಳಗಿನ ಹೊಲಸು ನೀರು ಹೊರಗೆ ಹೋಗುವದಕ್ಕೆ ಪರದೇಶಗಳಲ್ಲಿ ಹ್ಯಾಗೆ ಹ್ಯಾಗೆ ಪಂಚಿಕೆಗಳನ್ನು ಮಾಡಿದ್ದಾರೆಂಬವನ್ನು ಕಲಿಯುವವಕ್ಕಾಗಿ ತಮ್ಮ ಒಬ್ಬ ಉದ್ಯೋಗಸ್ಥನನ್ನು ಕಳುಹಿಸಿದ್ದರಷ್ಟೇ? ಇದು ಬಹು ಜಾಣತನದ ಕೆಲಸವು. ಇದೇ ಪ್ರಕಾರ, ಪ್ರಾಥಮಿಕ ಶಿಕ್ಷಣವಲ್ಲಿ ಮನಸುಹಾಕಿ, ಒಬ್ಬ ಇನ್ಸ್‌ಪೆಕ್ಟರನನ್ನಾಗಲಿ, ಸೆಕ್ರೆಟರಿಯನ್ನಾಗಲಿ ಇಂಗ್ಲಂಡಕ್ಕೆ ಕಳಿಸಿ, ಅಲ್ಲಿಯ ಶಿಕ್ಷಣ ಪದ್ಧತಿಗಳನ್ನು ತಿಳುಕೊಂಡರೆ, ಮ್ಯುನಿಸಿಪಾಲಿಟಿಯ ಶಾಲೆಗಳ ಸ್ಥಿತಿಯು ಸುಧಾರಿಸುವದು; ಮತ್ತು ಜನರಿಗೆ ಬಹಳ ಹಿತವಾಗುವದು.

ವಿದ್ಯಾಸುಧಾರಣೆಯಾಗಬೇಕೆಂಬ ಆ ಕಾಂಕ್ಷೆಯುಳ್ಳ ಜನಾಂಗ

ವರು ಈ ಕ್ರಮವನ್ನು ಅನುಸರಿಸುತ್ತಲಿದ್ದಾರೆ. ಜೇ. ಜಿ. ಫಿಚ್ ಸಾಹೇಬರು ರಾಯಲ್‌ಕಮಿಶನ್ ಎಂಬ ಸಭೆಯ ಮುಂದೆ ಈ ವಿಷಯವಲ್ಲಿ ಹೇಳಿದ ಸಾಕ್ಷಿಯು ಎಲ್ಲರೂ ಲಕ್ಷ್ಯವಲ್ಲಿಡತಕ್ಕಂಥಾವದೆ. ಫ್ರೆಂಚ್ ಸರಕಾರವವರು ಎಷ್ಟೋ ವರ್ಷಗಳಿಂದ ಫ್ರೆಂಚ ನಾರ್ಮಲ್ ಸ್ಕೂಲುಗಳಿಗೆ ಅಧಿಕಾರಿಗಳಾಗತಕ್ಕವರನ್ನು ಇಂಗ್ಲಂಡ ದೇಶಕ್ಕೆ ಕಳುಹಿಸುತ್ತಲಿದ್ದಾರೆ. ಮತ್ತು ಇಂಗ್ಲಂಡದೊಳಗಿನ ವಿದ್ಯಾಖಾತೆಯ ಅಧಿಕಾರಿಗಳು ಈ ಪರದೇಶದ ಯೌವನಸ್ಥರನ್ನು ಮುಖ್ಯವಾಗಿ ಫಿಚ್ ಸಾಹೇಬರ ವಶಕ್ಕೆ ಕೊಟ್ಟದ್ದರಿಂದ, ವಿದ್ಯಾಖಾತೆಯ ಜನರನ್ನು ಬಂದು ದೇಶದಿಂದ ಮತ್ತೊಂದು ದೇಶಕ್ಕೆ ಕಳುಹಿಸುವವರಿಂದ ಎಷ್ಟು ಉಪಯೋಗವಾಗುತ್ತದೆಂಬವನ್ನು ತಿಳುಕೊಳ್ಳುವದಕ್ಕೆ ಉತ್ತಮವಾದ ಪ್ರಸಂಗವು ಒದಗಿರುತ್ತದೆ. ಆತನು ಹೇಳಿದ ಸಾಕ್ಷಿಯ ವಿವರವು ಹ್ಯಾಗಂದರೆ—

"ಪ್ರಶ್ನ—ಪ್ರಾಥಮಿಕ ಶಿಕ್ಷಣ ಕೊಡುವ ಟ್ರೇನಿಂಗಕಾಲೇಜದೊಳಗಿನ ಶಿಕ್ಷಕರಿಗೂ ಮೇಲ್ತರದ ಪ್ರಾಥಮಿಕ ಶಿಕ್ಷಣ ಕೊಡುವ ಶಾಲೆಗಳ ವಿದ್ಯಾರ್ಥಿಗಳಿಗೂ ಫ್ರೆಂಚ ಸರಕಾರದವರು ಸ್ಕಾಲರಶಿಪ್ಪುಗಳನ್ನು ಕೊಟ್ಟು ಪರದೇಶಗಳಲ್ಲಿ ಕಲಿಯಲಿಕ್ಕೆ ಇಟ್ಟ ಸಂಬಂಧದಿಂದ ಹೊಸದಾಗಿ ಮಾಡಿದ ವ್ಯವಸ್ಥೆಯನ್ನು ಕುರಿತು ನೀವು ಆಲೋಚನೆ ಮಾಡಿದ್ದೀರಾ?

ಉತ್ತರ—ಹೌದು, ಆ ವಿಷಯದಲ್ಲಿ ನಾನು ಚನ್ನಾಗಿ ಆಲೋಚನೆ ಮಾಡಿದ್ದೇನೆ. ಯಾಕಂದರೆ, ಫ್ರಾನ್ಸ ದೇಶದ ವಿದ್ಯಾಖಾತೆಯ ಅಧಿಕಾರಿಗಳು ಈ ವಿಷಯವಲ್ಲಿ ಸಹಾಯ ಮಾಡಲಿಕ್ಕೆ ನನಗೆ ಹೇಳಿದ್ದರು. ಮತ್ತು ಈ ಸ್ಕಾಲರಶಿಪ್ಪುಗಳನ್ನು ಸ್ಥಾಪಿಸುವ ಮೂಲ ಉದ್ದೇಶವನ್ನಾದರೂ ನನಗೆ ತಿಳಿಸಿದ್ದರು.

ಪ್ರಶ್ನ—ಆ ಉದ್ದೇಶವನ್ನು ನೀವು ದಯವಿಟ್ಟು ಕಮಿಶನರ ವರಿಗೆ ತಿಳಿಸುವಿರಾ?

ಉತ್ತರ—ಅವರ ಆಲೋಚನೆ ಏನೆಂದರೆ, ಫ್ರಾನ್ಸ ದೇಶದೊಳಗಿನ ದೊಡ್ಡ ದೊಡ್ಡ ನಾರ್ಮಲ್ ಕಾಲೇಜುಗಳಲ್ಲಿ ಗುರುಗಳಾಗಲಿಚ್ಛಿಸುವವರು ಸರಕಾರೀ ಖರ್ಚಿನಿಂದ ಇಂಗ್ಲಂಡದಲ್ಲಿ ಒಂದು ವರುಷ ನಿಂತು, ಇಂಗ್ಲಿಷ ಭಾಷೆಯನ್ನೂ ನಮ್ಮ ದೇಶದ ಬೇರೆ ಬೇರೆ ವಿಕ್ಷಣ ಪದ್ಧತಿಗಳನ್ನೂ ಕಲಿಯತಕ್ಕದ್ದು.

ಪ್ರಶ್ನ—ಇಂಗ್ಲಂಡ ದೇಶಕ್ಕಷ್ಟೇ ಕಳುಹಿಸಿ ಅಭ್ಯಾಸ ಮಾಡಿಸಬೇಕೆಂದು ಅವರ ಉದ್ದೇಶವಿತ್ತೋ?

ಉತ್ತರ—ಅವರ ಉದ್ದೇಶವು ಮುಖ್ಯವಾಗಿ ಇಂಗ್ಲಂಡಕ್ಕೆ ಕಳುಹಿಸಬೇಕೆಂಬುವದೇ ಇತ್ತು. ನನಗೆ ಈ ದೇಶದ ಪೂರ್ತಿ ಗೊತ್ತು ಅದೆ. ಫ್ರೆಂಚ ಸರಕಾರದವರು ತಾವು ಮಾಡಿದ ಆಲೋಚನೆಯನ್ನು ನೆರವೇರಿಸುವಲ್ಲಿ ಎಷ್ಟೋ ಜನರಿಗೆ ಸಹಾಯ ಮಾಡಲಿಕ್ಕೆ ಹೇಳಿದಂತೆ ನನಗೂ ಹೇಳಿದರು. ಮತ್ತು ಈ ಪ್ರಾಯಸ್ಥರಲ್ಲಿ ಎಷ್ಟೋ ಜನರನ್ನು ನನ್ನ ಕಡೆಗೆ ಕಳುಹಿಸಿದರು. ನಮ್ಮ ಟ್ರೇನಿಂಗಕಾಲೇಜುಗಳಲ್ಲಿ ಈ ಪ್ರಾಯಸ್ಥರನ್ನು ತಕ್ಕೊಳ್ಳಬಹುದೋ ಹ್ಯಾಗೆ, ಅವರ ಅಭ್ಯಾಸದ ವಿಷಯವಾಗಿ ತಕ್ಕ ವ್ಯವಸ್ಥೆಯನ್ನು ಮಾಡಲಿಕ್ಕೆ ಬರುವದೋ ಇಲ್ಲವೋ ಎಂಬ ಬಗ್ಗೆ ಕೆಲವು ಕಾಲೇಜುಗಳ ಮುಖ್ಯಸ್ಥರ ಅಭಿಪ್ರಾಯುಗಳನ್ನು ತಕ್ಕೊಂಡೆವು. ಬಳಿಕ ಒಬ್ಬ ಪ್ರಾಯಸ್ಥನನ್ನು ಗ್ಲಾಸಗೋಕ್ಕೆ, ಒಬ್ಬನನ್ನು ಎಡಿಂಬರೋಕ್ಕೆ, ಒಬ್ಬನನ್ನು ಬ್ರಿಸ್ಟಲಿಗೆ, ಒಬ್ಬನನ್ನು ಎಕ್ಸಿಟರಕ್ಕೆ, ಒಬ್ಬನನ್ನು ಚೆಲ್ಟನ್‌ಹ್ಯಾಮಕ್ಕೆ ಕಳಿಸಿದೆವು. ಈ ಜನರ ಅಭ್ಯಾಸವು ಹ್ಯಾಗೆ ಸಾಗುತ್ತದೆಂಬವನ್ನು ನಾನು ಬಹಳ ಮನಸ್ಸುಕೊಟ್ಟು ನೋಡಿದ್ದೇನೆ.

ಅವರು ಇಲ್ಲಿ ಇರುವಾಗ ಮೇಲಿಂದ ಮೇಲೆ ನನ್ನ ಭೆಟ್ಟಿಗೆ ಬರುತ್ತಿದ್ದರು. ಅವರು ನಮ್ಮ ಭಾಷೆಯನ್ನು ತೀವ್ರ ಕಲಿತರು. ಲಂಡನವಲ್ಲಿ ಬಂದು ನಿಂತ ವಿದ್ಯಾರ್ಥಿಗಳನ್ನು ಬೇರೆಬೇರೆ ವ್ಯಾಖ್ಯಾನಗಳಿಗೂ, ಪುಸ್ತಕಾಲಯಗಳಿಗೂ, ಸಮಾಜಗಳಿಗೂ ಕರಕೊಂಡು ಹೋಗುವ ಪ್ರಸಂಗಗಳು ಆಗಾಗ್ಗೆ ಬರುತ್ತಿದ್ದವು. ಹೀಗೆ ಮಾಡುವವರಿಂದ ಆವ ಪರಿಣಾಮವೇನಂದರೆ, ಆ ಪ್ರಾಯಸ್ಥರು ಶಿಕ್ಷಣಪದ್ಧತಿಯ ಮೇಲಾದ ಜ್ಞಾನವನ್ನೂ ಅನುಭವವನ್ನೂ ಚನ್ನಾಗಿ ಸಂಪಾದಿಸಿಕೊಂಡು, ಒಂದೇ ವರ್ಷದಲ್ಲಿ ಫ್ರಾನ್ಸ ದೇಶಕ್ಕೆ ಮರುಳಿ ಹೋದರು. ಈ ಮೇರೆಗೆ ತರುಣ ಜನರನ್ನು ತಯಾರು ಮಾಡಿ, ನಾರ್ಮಲ್ ಕಾಲೇಜಗಳ ಮುಖ್ಯಾಧಿಕಾರಿಗಳಾಗಿಯೂ, ಗುರುಗಳಾಗಿಯೂ ನೇಮಿಸುವವರಿಂದ, ಬಹಳೇ ಉಪಯೋಗವಾಗುತ್ತದೆಂದು ಅವರೂ ಫ್ರೆಂಚ ಸರಕಾರದವರೂ ನನಗೆ ತಿಳಿಸಿದ್ದಾರೆ.

ಪ್ರಶ್ನ—ಇದೇ ಪ್ರಕಾರ ನಮ್ಮ ದೇಶದ ಜನರನ್ನು ಪರದೇಶಗಳಿಗೆ ಕಳಿಸಿ, ಅಲ್ಲಿಯ ಶಿಕ್ಷಣಪದ್ಧತಿಗಳನ್ನು ತಿಳುಕೊಳ್ಳುವದು ಯೋಗ್ಯವೆಂದು ತೋರುತ್ತದೋ?

ಉತ್ತರ—ಹೌದು, ಹಾಗೆ ಮಾಡುವದು ನನ್ನ ಮನಸಿಗೆ ಬರುತ್ತದೆ. ನಮ್ಮ ಶಿಕ್ಷಕಿಯರ ಟ್ರೇನಿಂಗಕಾಲೇಜಗಳಲ್ಲಿ ವ್ಯಾಖ್ಯಾನ ಕೊಡುವ ಎಷ್ಟೋ ಜನ ಸ್ತ್ರೀಯರಲ್ಲಿ ತಕ್ಕಷ್ಟು ಜ್ಞಾನವಿಲ್ಲೆಂಬ ಸಂಗತಿಯು ಬಹಳೇ ವ್ಯಕ್ತವಾಗಿ ತೋರುತ್ತದೆ. ಈ ಜನರು ಚಲೋ ಚಲೋ ಸಾಲೆಗಳ ಮತ್ತು ಕಾಲೇಜಗಳ ಸ್ಥಿತಿ ರೀತಿ ಹ್ಯಾಗೆ ಇರುತ್ತದೆ, ಅಲ್ಲಿಯ ಅಭ್ಯಾಸನ ಪದ್ಧತಿಯು ಹ್ಯಾಗೆ, ಎಂಬದನ್ನು ಮೇಲಿಂದ ಮೇಲೆ ನೋಡುತ್ತಿದ್ದರೆ, ಬಹಳೇ ಹಿತವಾಗುವದೆಂದು ನನ್ನ ಅಭಿಪ್ರಾಯ

ಉಂಟು. ಫ್ರೆಂಚ್ ರಿಪಬ್ಲಿಕ್‌ನ ಅಧ್ಯಕ್ಷರು, ಫ್ರಾನ್ಸ್ ದೇಶದಲ್ಲಿ ವಿದ್ಯಾ ಪ್ರಸಾರಕ್ಕೆ ಅನುಕೂಲ ಮಾಡಿಕೊಟ್ಟಿದ್ದರಿಂದಲೂ, ಇಂಗ್ಲಂಡದಲ್ಲಿ ಬಂದು ನಿಂತ ಯೌವನಸ್ಥರು ಯಾವ ಯಾವ ರೀತಿಯಿಂದ ಅಭ್ಯಾಸ ಮಾಡಬೇಕೆಂಬುದನ್ನು ಹೇಳಿ, ಆಗಾಗ್ಗೆ ಅವರಿಗೆ ಬಹು ಪ್ರೀತಿಯಿಂದ ಸಹಾಯ ಮಾಡಿದ್ದರಿಂದಲೂ, ಫಿಚ್ ಸಾಹೇಬರಿಗೆ "ಶಿವೆಲಿಅರ ಆಫ್ ದಿ ಲಿಜನ್ ಆಫ್ ಆನರ" ಎಂಬ ಬಿರುದನ್ನು ಬಹುಮಾನಪೂರ್ವಕವಾಗಿ ಕೊಟ್ಟಿದ್ದಾರೆಂದು ಇತ್ತಲಾಗಿ ಬಂದ ವರ್ತಮಾನಪತ್ರಗಳಿಂದ ತಿಳಿದಿದೆ. ಇದೇ ಮೇರೆಗೆ, ಹಿಂದುಸ್ಥಾನದ ವಿದ್ಯಾಖಾತೆಯ ಯೌವನಸ್ಥರು ನಮ್ಮ ಇಂಗ್ಲಂಡಕ್ಕೆ ತಮ್ಮ ಶಿಕ್ಷಣದ ಜ್ಞಾನವನ್ನು ಬೆಳಿಸಲಿಕ್ಕೂ ಇಲ್ಲಿಯ ಶಿಕ್ಷಣಪದ್ಧತಿಗಳನ್ನು ತಿಳುಕೊಳ್ಳಲಿಕ್ಕೂ ಬಂದರೆ, ಅವರಿಗೆ ಫಿಚ್ ಸಾಹೇಬರು ಬಹು ಪ್ರೀತಿಯಿಂದ ಸಹಾಯ ಮಾಡುವರೆಂಬುವಕ್ಕೆ ಏನೂ ಸಂಶಯವಿಲ್ಲ."

HERBERT SPENSER.

ಹರ್ಬರ್ಟ್ ಸ್ಪೆನ್ಸರ.

ಈಗ ಇಂಗ್ಲಂಡದಲ್ಲಿ ಹರ್ಬರ್ಟ್ ಸ್ಪೆನ್ಸರನೆಂಬವನೊಬ್ಬ ಪ್ರಸಿದ್ಧ ಗೃಹಸ್ಥನಿದ್ದಾನೆ. ಇವನು ಫೆನವಿದ್ವಾಂಸನೂ ಒಳ್ಳೇ ತತ್ವಜ್ಞಾನಿಯೂ ಆಗಿರುವನು. ಇವನ ವಿಚಾರಶಕ್ತಿಯನ್ನು ನೋಡಿ ಜನರು ಬೆರಗಾಗುತ್ತಾರೆ. ಇಂಥ ತತ್ವಜ್ಞಾನಿಗಳು ಈಗ ಬಹಳ ಅಪರೂಪ.

ಈತನು ೧೮೨೦ನೇ ವರ್ಷ ಹುಟ್ಟಿದನು. ಈತನ ವಿದ್ಯಾಭ್ಯಾಸವೆಲ್ಲ ಮನೆಯಲ್ಲಿಯೇ ಆಯಿತು. ತಂದೆಯೂ ಚಿಕಪ್ಪನೂ ಕೂಡಿ ಇವನಿಗೆ ವಿದ್ಯೆ ಕಲಿಸಿದರು. ಈತನು ಬಾಲ್ಯಾವಸ್ಥೆಯಲ್ಲಿ

ಕಾಲೇಜಕ್ಕಾಗಲಿ ಹೋಗಿ ಅಭ್ಯಾಸ ಮಾಡಲಿಲ್ಲ. ಇವನಿಗೆ ಯುನಿವರ್ಸಿಟಿಯ ಪದವಿಗಳೇನೂ ಇಲ್ಲ. ಇವನು ತನ್ನ ವಯಸ್ಸಿನ ೧೩ನೇ ವರ್ಷ ಸಿವಿಲ್ ಎಂಜನಿಅರನಾದನು. ಈತನು ತನ್ನ ಉದ್ಯೋಗವನ್ನಷ್ಟೇ ಮಾಡಿ ಸುಮ್ಮನೇ ಕೂಡುತ್ತಿದ್ದಿಲ್ಲ. ತನ್ನ ಉದ್ಯೋಗದ ಸಂಬಂಧದ ವಿಷಯಗಳ ಮೇಲೆ ಎಷ್ಟೋ ನಿಬಂಧಗಳನ್ನು ಬರೆಯುತ್ತಿದ್ದನು. ಈತನು ೧೮೭೦ನೇ ವರ್ಷ "ಅರಸರ ನಿಜವಾದ ಅಧಿಕಾರ" ಎಂಬ ವಿಷಯದ ಮೇಲೆ ಒಂದು ನಿಬಂಧವನ್ನು ಬರೆದು ಪ್ರಕಟಿಸಿದನು. ೧೮೭೦ರಿಂದ ೧೮೭೫ರವರೆಗೆ "ಎಕಾನಾಮಿಸ್ಟ" ಎಂಬದೊಂದು ಪ್ರಸಿದ್ಧ ವರ್ತಮಾನ ಪತ್ರವಲ್ಲಿ ಎಷ್ಟೋ ಲೇಖನಗಳನ್ನು ಬರೆದನು. ಆ ಕಾಲಕ್ಕೆ "ಸೋಶಲ್‌ಸ್ಟ್ಯಾಟಿಕ್ಸ" ಎಂಬದೊಂದು ವಿಶೇಷ ಮಹತ್ವದ ಗ್ರಂಥವನ್ನು ಪ್ರಸಿದ್ಧ ಮಾಡಿದನು. ೧೮೭೯ನೇ ವರ್ಷ "ಮಾನಸ ಶಾಸ್ತ್ರದ ತತ್ವಗಳು" ಎಂಬ ಲೋಕಮಾನ್ಯವಾದ ಈತನ ಗ್ರಂಥವು ಪ್ರಕಟಿಸಲ್ಪಟ್ಟಿತು. ಈ ಗ್ರಂಥದಿಂದ ಇವನು ತತ್ವಜ್ಞಾನಕ್ಕೆ ಒಂದು ಬಗೆಯ ಹೊಸ ಮಾರ್ಗವನ್ನೇ ತೋರಿಸಿ ಕೊಟ್ಟನೆಂದು ಹೇಳಬಹುದು. ಮುಂದೆ ೧೮೮೨ನೇ ವರ್ಷ ಅಮೇರಿಕದೊಳಗೆ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರವಾಸ ಮಾಡಿದನು. ೧೮೮೫ನೇ ವರ್ಷ ಫ್ರಾನ್ಸದೇಶದಲ್ಲಿ ರಾಜಕೀಯ ಮತ್ತು ನೀತಿಯ ಸಂಬಂಧದ ಶಾಸ್ತ್ರಗಳನ್ನು ಊರ್ಜಿತ ಸ್ಥಿತಿಗೆ ತರುವದಕ್ಕಾಗಿ ಸ್ಥಾಪಿಸಲ್ಪಟ್ಟ ಪ್ರಸಿದ್ಧವಾದ ವಿದ್ಯಾಪೀಠದಲ್ಲಿ ಹೆಸರಾದ ಇಮೆರಸನ್ನನೆಂಬ ತತ್ವಜ್ಞಾನಿಯು ಕೆಲಸಕ್ಕೆ ಇವನನ್ನು ವ್ಯಾಖ್ಯಾನಕಾರನಾಗಿ ನೇಮಿಸಿದರು. ಈತನು ಇದುವರೆಗೆ ಎಷ್ಟೋ ಮಾಸಿಕ ಪುಸ್ತಕಗಳಲ್ಲಿ ಅನೇಕ ವಿಷಯಗಳ ಮೇಲೆ ತನ್ನ ವಿಚಾರಗಳನ್ನು

ಬರೆದಿದ್ದಾನೆ. ಆ ಮಾಸಿಕ ಪುಸ್ತಕಗಳೊಳಗಿನ ಎಪ್ಪತ್ತೇ ಲೇಖನಗಳು ಈತನು ಪ್ರಕಟಿಸಿದ "ಶಾಸ್ತ್ರೀಯ, ರಾಜಕೀಯ, ತಾತ್ವಿಕ ನಿಬಂಧಗಳು" ಎಂಬ ಗ್ರಂಥಮಾಲೆಗೆ ಬಂದಿರುತ್ತವೆ. ಇವನು ಮಾನಸಿಕ, ಶಾರೀರಿಕ, ನೀತಿಯ ಸಂಬಂಧದ ವಿಷಯವನ್ನು ಕುರಿತು ತಾನು ಪೂರ್ವದಲ್ಲಿ ಬರೆದ ಲೇಖನಗಳನ್ನೆಲ್ಲ ಒತ್ತಟ್ಟಿಗೆ ಕೂಡಿಸಿ, ಒಂದು ಸ್ವತಂತ್ರವಾದ ಗ್ರಂಥವನ್ನು ೧೮೬೦ನೇ ವರ್ಷ ಪ್ರಸಿದ್ಧಮಾಡಿದನು. ಈ ಗ್ರಂಥದ ಎರಡನೇ ಆವೃತ್ತಿಯು ಅಮೆರಿಕ ಖಂಡದೊಳಗಿನ ನ್ಯೂಯಾರ್ಕ್ ದಲ್ಲಿ ೧೮೬೮ನೇ ವರ್ಷ ಮುದ್ರಿಸಲ್ಪಟ್ಟಿತು. ಇವನು ಪ್ರಾಣಿಧರ್ಮಶಾಸ್ತ್ರ, ಸಮಾಜಶಾಸ್ತ್ರ, ಶಾರೀರಶಾಸ್ತ್ರ ಮುಂತಾದ ಎಷ್ಟೋ ಗಹನ ವಿಷಯಗಳನ್ನು ಕುರಿತು ಸರ್ವಮಾನ್ಯವಾದ ಗ್ರಂಥಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಕೆಲವು ಗ್ರಂಥಗಳು ಮೂರನೇ ನಾಲ್ಕನೇ ಆವೃತ್ತಿ ಹೊಮ್ಮಿಸಲ್ಪಟ್ಟಿದ್ದರಿಂದ ಅವು ಜನರಿಗೆ ಎಷ್ಟು ಪ್ರಿಯವಾಗಿವೆ, ಮತ್ತು ಆವುಗಳ ಮಹತ್ವವೆಷ್ಟು ಎಂಬುದರ ಕಲ್ಪನೆಯನ್ನು ಮಾಡಬಹುದು. ಹರ್ಬರ್ಟ್ ಸ್ಪೆನ್ಸರ ಸಾಹೇಬನು ಪರಿಣತಿವಾದದ ಪರಮ ಭಕ್ತನಾಗಿದ್ದಾನೆ. ಮತ್ತು ಅವನು ಈ ತತ್ವಜ್ಞಾನ ಪದ್ಧತಿಯ ಉಪಪತ್ತಿಯನ್ನು ಮೊದಲಿನಿಂದ ಕಡೆತನಕ ಬಂದೀಸವನಾಗಿ ಪ್ರತಿಪಾದಿಸಿದ್ದಾನೆ. ಈ ಪರಿಣತಿವಾದದ ಇತಿಹಾಸದಲ್ಲಿ ನಾಲ್ಕು ಅಂಗಗಳುಂಟು. ಮೊದಲು ೧೫೦ ವರ್ಷಗಳ ಪೂರ್ವದಲ್ಲಿ ಒಬ್ಬ ತತ್ವಜ್ಞಾನಿಯು ಜ್ಯೋತಿಷ್ಕಕ್ಕಾಗಿ ಈ ಉಪಪತ್ತಿಯನ್ನು ಪ್ರತಿಪಾದಿಸಿದನು. ಮುಂದೆ ಮತ್ತೊಬ್ಬ ವಿದ್ವಾಂಸನು ಭೂಮಂಡಲಕ್ಕೂ, ಈ ಉಪಪತ್ತಿಗೂ ಇರುವ ಸಂಬಂಧವನ್ನು ತೋರಿಸಿದನು. ಮುಂದೆ ಹೆಸರಾದ ಡಾರ್ವಿನ್ನನೆಂಬ ಪಂಡಿತನು ಪ್ರಾಣಿ

ಗಳ ಉಪಪತ್ತಿಯೂವರೂ ಇದೇ ತತ್ವವನ್ನೆನುಸರಿಸಿರುತ್ತ
ದೆಂಬವನ್ನು ಸಿದ್ಧಮಾಡಿದನು. ಅದರೆ ಇದುವರೆಗೆ ಪ್ರತಿಬಬ್ಬ
ತತ್ವಜ್ಞಾನಿಯು ತನ್ನ ಅಂಗವನ್ನು ಸ್ಥಾಪಿಸಿ ಹಿಂದಿನ ತತ್ವ
ಜ್ಞಾನಿಯ ಪಕ್ಷವನ್ನು ಅಂಗೀಕರಿಸುತ್ತಿದ್ದನು. ಮುಂದಿನ ಆ
ಗಗಳಿಗೆ ಸಹ ಇದೇ ಉಪಪತ್ತಿಯು ಸಂಬಂಧಿಸಿರುತ್ತದೆಂಬನ್ನು
ಮಾತ್ರ ಒಪ್ಪಿಕೊಳ್ಳುತ್ತಿದ್ದಿಲ್ಲ, ಇದೇ ಬಂದು ವಿಶೇಷವಾದ ಸಂ
ಗತಿಯು. ಅದರೆ ಕಡೆಗೆ ಹರ್ಬರ್ಟ್‌ಸ್ಪೆನ್ಸರನು ಮನಸ್ಸಿಗೂ,
ಮನೋವಿಕಾರಗಳಿಗೂ ಇದೇ ಉಪಪತ್ತಿಯು ಸಂಬಂಧಿಸಿರು
ತ್ತದೆಂಬದನ್ನು ಸಿದ್ಧಮಾಡಿ ತೋರಿಸಿ, ಹಿಂದಿನ ಯಾವತ್ತು ಆಂ
ಗಗಳ ಮೆಂಡನ ಮಾಡಿ, ಪರಿಣತಿವಾದಕ್ಕೆ ವ್ಯಾಪಕವಾಗಿ ಉಪ
ಪತ್ತಿಯ ಸ್ವರೂಪವನ್ನೇ ಕೊಟ್ಟು, ಆಕಾಶದೊಳಗಿನ ನಕ್ಷತ್ರ
ಗೋಲಗಳನ್ನು ಆರಂಭ ಮಾಡಿಕೊಂಡು ಮಹಾಕವಿಯ ಇಲ್ಲ
ವೆ ಮಹಾ ತತ್ವಜ್ಞಾನಿಯ ಮನೋಮಂದಿರದ ವರೆಗೆ ಯಾವ
ತ್ತು ಸೃಷ್ಟಿಯು ಪರಿಣತಿಪಾವದ ತತ್ವವನ್ನೇ ಅನುಸರಿಸಿ ಆ
ಗಿರುತ್ತದೆಂಬವನ್ನು ಅವನು ಬಹು ಮನೋಹರವಾದ ರೀತಿ
ಯಿಂದ ಸಿದ್ಧಮಾಡಿ ತೋರಿಸಿದ್ದಾನೆ. ಈತನ ವಿದ್ಯಾವ್ಯಾಸಂಗ
ವು ವರ್ಣಿಸತಕ್ಕಂಥಾದಿರುತ್ತದೆ. ಈತನ ಜ್ಞಾನ ಭಾಂಡಾರ
ವು ಅಗಾಧವಾದದ್ದು! ಈತನ ಪರಿಶ್ರಮವು ವಿಲಕ್ಷಣವಾದದ್ದು!
ಈತನ ವಯಸ್ಸು ಈಗ ಐಂಭತ್ತು ಸಮೀಪಕ್ಕೆ ಬಂದರೂ ಗ್ರಂ
ಥಗಳನ್ನು ಬರೆಯುವ ಕ್ರಮವು ಬೇಸರವಿಲ್ಲದೆ ಬಂದೇ ಸವನಾ
ಗಿ ನಡೆದಿರುತ್ತದೆ! ಈತನು ತನ್ನ ತತ್ವಜ್ಞಾನದಿಂದ ಭೂಮಂ
ಡಲಕ್ಕೆ ಬಂದು ತರದ ಚಲನೆಯನ್ನು ಕೊಟ್ಟಿದ್ದಾನೆ. ಇವನಂ
ಥ ಪಂಡಿತರು ಯಾವತ್ತು ಯುರೋಪ ಖಂಡದಲ್ಲಿ ಈ ವರೆಗೆ
ಬಹು ಸ್ವಲ್ಪ ಜನರು ಹುಟ್ಟಿರುವರು. ಅರಿಸ್ಟಾತಲ್, ಆರ್ಕಿಮೀ

ಕನ್, ಹೆರ್ಬರ್ಟ್‌ಸ್ಪೆನ್ಸರ ಈ ಮೂವರು ಬೀಜೀ ಮೂರಿಕೆಯೊಳಗಿನ ರತ್ನಗಳು. ಈ ಮಾಲಿಕೆಯು ಬಂದುಹೇಳಿ ಇಪ್ಪತ್ತಕ್ಕೇ ಮುಗಿಯು ಬಹುದೆಂದು ತೋರುತ್ತದೆ. ಈ ಮೂವರಲ್ಲಿ ಬಬ್ಬೊಬ್ಬನು ಬಂದೊಂದು ವಿಷಯವಲ್ಲಿ ಪ್ರತಿ ಸೂರ್ಯನೇ ಆಗಿ ಹೋದನೆನ್ನಬಹುದು. ಅದರೆ ಯಾರ ತತ್ವಜ್ಞಾನಕ್ಕೆ ವ್ಯಾಪಕತ್ವವೂ ಸಾರ್ವತ್ರಿಕತೆಯೂ ಇರುವದೋ, ಅಂಥ ತತ್ವಜ್ಞಾನಿಗಳು ಇದುವರೆಗೆ ಯುರೋಪ ಖಂಡವಲ್ಲಿ ಮೂರೇ ಮಂದಿ ಆಗಿ ಹೋದವರೆಂದೆನ್ನಬಹುದು.

PRINCIPLES OF TEACHING.

ಶಿಕ್ಷಣದ ತತ್ವಗಳು.

ಪ್ರತಿ ಬಬ್ಬ ಶಿಕ್ಷಕನು ಶಿಕ್ಷಣದ ಮುಖ್ಯ ತತ್ವಗಳನ್ನು ಸೂಚಿಸುವ ಕೆಳಗೆ ಬರೆದ ಏಳು ನಿಯಮಗಳನ್ನು ಯಾವಾಗಲೂ ಲಕ್ಷ್ಯದಲ್ಲಿಟ್ಟು ನಡೆಯಬೇಕು.

೧. ನಿಮಗೆ ಚನ್ನಾಗಿ ತಿಳಿಯದೇ ಇದ್ದದ್ದನ್ನು ನೀವು ಎಂದಿಗೂ ಕಲಿಸಬೇಡಿರಿ. ಶಿಕ್ಷಕನ ಅಜ್ಞಾನವು ವಿದ್ಯಾರ್ಥಿಗಳಿಗೆ ಸಂಗಡಲೇ ತಿಳಿಯುತ್ತದೆ. ಆದರಿಂದ ಶಿಕ್ಷಕನ ವರ್ಚಸ್ಸು ಕಡಿಮೆಯಾಗುತ್ತದೆ.

೨. ವಿದ್ಯಾರ್ಥಿಗಳಿಂದ ಹೊರಡಿಸಬಹುದಾದ ಸಂಗತಿಗಳನ್ನು ನೀವು ಎಂದಿಗೂ ಹೇಳಬೇಡಿರಿ. ಇದರಿಂದ ವಿದ್ಯಾರ್ಥಿಗಳಿಗೆ ವಿಚಾರ ಮಾಡುವ ಚಟ ಹತ್ತುತ್ತದೆ. ಮತ್ತು ಶಿಕ್ಷಕನು ಹೇಳಿದ ಮಾತುಗಳಿಗಿಂತ ತಾವು ಹೇಳಿದ್ದು ಹುಡುಗರ ನೆನಪಿನಲ್ಲಿ ಹೆಚ್ಚಿಗೆ ಉಳಿಯುವದು.

೩. ಒಮ್ಮೆ ಏನಾದರೊಂದು ಮಾತು ಹೇಳಿದರೆ, ಅದನ್ನು ತಿರಿಗಿ ಕೇಳದೇ ಬಿಡಬೇಡಿರಿ. ವಿದ್ಯಾರ್ಥಿಗಳು ತಮ್ಮ ಮನಸಿನೊಳಗಿನ ಅಲೋಚನೆಯನ್ನು ಸ್ವಂತ ಶಬ್ದಗಳಿಂದ ಹೇಳಬೇಕು. ಇದರಿಂದ ಅವರ ಮನಸಿನಲ್ಲಿ ಆ ಅಲೋಚನೆಯು ಬಂದದೋ ಇಲ್ಲವೋ ತಿಳಿಯುವದು.

೪. ಸಸಾರ ಶಬ್ದಗಳಿಂದ ನೀವು ಹೇಳುವ ಅರ್ಥವು ತಿಳಿಯುವಹಾಗಿದ್ದರೆ, ಬಿಗಿಯಾದ ಶಬ್ದಗಳನ್ನು ಎಂದಿಗೂ ಹಾಕಬೇಡಿರಿ. ಮತ್ತು ನಿರರ್ಥಕವಾದ ಶಬ್ದಗಳನ್ನು ಎಂದಿಗೂ ಉಪಯೋಗಿಸಬೇಡಿರಿ. ಶಿಕ್ಷಕನು ವಿಷಯವನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ಹೇಳಲಿಕ್ಕೆ ಯತ್ನಿಸಬೇಕು. ಅವನಿಗೆ ನಿಜವಾದ ಸಂಗತಿಗಳ ಸ್ಪಷ್ಟ ಜ್ಞಾನವಿರಬೇಕು.

೫. ಪಾಠಾವುವನ್ನು ಸ್ಪಷ್ಟವಾಗಿ ಮನಸಿನಲ್ಲಿ ತಾರದೆ ಯಾವದೊಂದು ಪಾಠವನ್ನಾಗಲಿ ಭಾಷಣವನ್ನಾಗಲಿ ಆರಂಭಿಸಬೇಡಿರಿ. ಪಾಠವನ್ನು ಕಲಿಸಲಿಕ್ಕೆ ಯತ್ನಿಸುವದಕ್ಕಿಂತ ಮುಂಚೆ ಅವನ್ನು ಶಿಕ್ಷಕನು ಸ್ವತಃ ಚನ್ನಾಗಿ ಕಲಿತಿರಬೇಕು. ಶಿಕ್ಷಕನು ವಿದ್ಯಾರ್ಥಿಗಳ ಮನಸಿನಲ್ಲಿ ವಿಷಯವು ಚನ್ನಾಗಿ ನಾಟುವಂತೆ ಕಲಿಸಲಿಕ್ಕೆ ಯಾವಾಗಲೂ ಹವಣಿಸುತ್ತಿರಬೇಕು. ಇದೇ ಶಿಕ್ಷಕನು ಸಾಧಿಸತಕ್ಕ ಮೇಲಾದ ಉದ್ದೇಶವು.

೬. ಅವಶ್ಯವಿಲ್ಲದ ಅಪ್ಪಣೆಯನ್ನಾಗಲಿ ವಿದ್ಯಾರ್ಥಿಗಳು ಪಾಲಿಸಬೇಕೆಂದು ನಿಮ್ಮ ಮನಸಿನಲ್ಲಿ ಇಲ್ಲವಂಥ ಅಪ್ಪಣೆಯನ್ನಾಗಲಿ ಎಂದಿಗೂ ಕೊಡಬೇಡಿರಿ.

೭. ವರ್ಗದಲ್ಲಿ ವಿದ್ಯಾರ್ಥಿಗಳನ್ನು ಕೆಲಸದಲ್ಲಿ ತೊಡಗಿಸದ ಸುಮ್ಮನೆ ಎಂದಿಗೂ ಕೂಡ್ರಗೊಡಬೇಡಿರಿ. ಕೆಲಸದಲ್ಲಿ ತೊಡಗಿರುವ ಕಾರಣವು ಅವರಿಗೆ ತಿಳಿದಿರಬೇಕು. ಯಾವನಾವರೊಬ್ಬ ವಿದ್ಯಾರ್ಥಿಯು ಸ್ವಲ್ಪ ಅಲಕ್ಷ್ಯ ಮಾಡಿದರೆ, ಅವನಿಗೇ ಪ್ರಶ್ನ ಮಾಡಿರಿ. ಜಾಣತನದಿಂದ ಪ್ರಶ್ನ ಮಾಡಿದರೆ, ಇಡೀ ವರ್ಗವ ಲಕ್ಷ್ಯವನ್ನು ಸಹಜವಾಗಿ ಎಳಕೊಳ್ಳಿಬಹುದು.

NOTES ON GRAMMAR.

ಗ್ರಂಥದ ಮೇಲಿಂದ ವಾಕರಣ ಹೇಳುವದು.

ಅಂತೆಃಕರಣ ಹುಟ್ಟಿದರೆ—'ಅಂತೆಃಕರಣ ಹುಟ್ಟಿದ' ಇದು 'ಅಂತೆಃಕರಣ ಹುಟ್ಟಿ' ಎಂಬ ಸಾಮಾನ್ಯಸಿಕ ಕ್ರಿಯೆಯ ಭೂತಕೃದ್ವಾಚಕವು. 'ರೆ' ಎಂಬ ಪಕ್ಷಾರ್ಥಕ ಸಮುಚ್ಚಾಯಕಾವ್ಯಯದ ಸಂಯೋಗದಿಂದ ಇಡೀ ಪದವು ಪಕ್ಷಾರ್ಥಕ ಸಮುಚ್ಚಾಯಕಾವ್ಯಯವಾಗಿದೆ.

ಅವರು—ವರ್ಪಕಸರ್ವನಾಮ, ಪುಂಸ್ತ್ರೀಲಿಂಗ, ಪ್ರಥಮಾ ಬಹುವಚನ. ಇವರ ಅರ್ಥ ಕರ್ತೃ 'ಸೀಟ್ಟು ಮಾಡಲಿಕ್ಕಿಲ್ಲ' ಎಂಬ ಕ್ರಿಯೆಗೆ.

ತನಗೆ—'ತಾನು' ಆತ್ಮಾರ್ಥಕಸರ್ವನಾಮ, ಪುಲ್ಲಿಂಗ, ಚತುರ್ಥೀ ಏಕವಚನ. ಇವರ ಅರ್ಥ ಸಂಪ್ರದಾನ 'ಶಿಕ್ಷೆ ಮಾಡಲಿಕ್ಕಿಲ್ಲ' ಎಂಬ ಕ್ರಿಯೆಗೆ.

ತಿಪ್ಪೆ ಮಾಡಲಿಕ್ಕಿಲ್ಲ—'ತಿಪ್ಪೆ ಮಾಡು' ಸಾಮಾಸಿಕ ಕ್ರಿಯಾಪದ, ನಿಷೇದಾರ್ಥ, ಪುಂಸ್ತ್ರೀಲಿಂಗ, ಪ್ರಥಮ ಪುರುಷದ ಬಹುವಚನ.

ಎಂದು*—ಉಪಮಾವ್ಯ ಸಮುಚ್ಚಾಯಕಾವ್ಯಯ.

ಅವನಿಗೆ—ಅವನು ದರ್ಶಕಸರ್ವನಾಮ, ಪುಲ್ಲಿಂಗ, ಚತುರ್ಥೀ ಏಕವಚನ. ಇವರ ಅರ್ಥ ಸಂಪ್ರದಾನ 'ತಿಳಿವದೆ' ಎಂಬ ಕ್ರಿಯೆಗೆ.

ತಿಳಿವದೆ—ಸಾಯುಕ್ತಕ್ರಿಯಾಪದ, 'ತಿಳಿ' ಧಾತು, ಅಕರ್ಮಕ ನಿಶ್ಚಯಾರ್ಥ, ಪೂರ್ಣ ವರ್ತಮಾನಕಾಲ, ಪ್ರಥಮ ಪುರುಷ, ನಪುಂಸಕಲಿಂಗ, ಏಕವಚನ.

"ಇಂಥ ಹಣ್ಣು ಹಂಪಲಗಳನ್ನು ಬಬ್ಬನೇ ಕೂತು ತಿನ್ನುವ ಹಾಗೆ ನನಗೆ ಆಗುವದಿಲ್ಲ."†

---

* ಚನ್ನಾಗಿ ವಿಚಾರ ಮಾಡಿ ನೋಡಿದರೆ, 'ಎಂದು' ಎಂಬದು ಇಲ್ಲಿ ರೀತಿವಾಚಕಕ್ರಿಯಾವಿಶೇಷಣಾವ್ಯಯವಾಗುತ್ತದೆ. ಇದನ್ನು ದರ್ಶಕ ಸರ್ವನಾಮದಂತೆ ಉಪಯೋಗಿಸಿರುತ್ತದೆಂದು ತಿಳಿದು, ಮುಂದಿನ 'ತಿಳಿದದೆ' ಎಂಬ ಕ್ರಿಯಾಪದಕ್ಕೆ ಕರ್ತೃಪದ ಮಾಡಬಹುದೆಂದು ತೋರುತ್ತದೆ. ಈ ಬಗ್ಗೆ ಶೋಧಕ ಬುದ್ಧಿಯುಳ್ಳ ವಾಚಕರೂ ಮಾಸ್ತರರೂ ತಮ್ಮ ತಮ್ಮ ಅಭಿಪ್ರಾಯವನ್ನು ತಿಳಿಸಬೇಕು.

† ಈ ವಾಕ್ಯದಲ್ಲಿ 'ಹಾಗೆ' ಕರ್ತೃ, 'ಆಗುವದಿಲ್ಲ' ಕ್ರಿಯಾಪದ, ಅಕರ್ಮಕ ಕರ್ತರಿಪ್ರಯೋಗ.

ತಿನ್ನುವ—ಕೃದ್ವಾಚಕ ವಿಶೇಷಣ, 'ಹಾಗೆ' ಎಂಬ ಅವ್ಯಯಾತ್ಮಕ ನಾಮಕ್ಕೆ.

ಹಾಗೆ—ಅವ್ಯಯಾತ್ಮಕನಾಮ, ಪ್ರಥಮೆಯ ಏಕವಚನ. ಇದರ ಅರ್ಥ ಕರ್ತೃ, 'ಆಗು' ಎಂಬ ಕ್ರಿಯೆಗೆ. (ಇಲ್ಲಿ 'ಹಾಗೆ' ಅಂದರೆ 'ಭಾವನೆ' ಎಂಬ ಅರ್ಥವು. ತಿನ್ನುವಹಾಗೆ ಅಂದರೆ ತಿನ್ನುವ ಭಾವನೆ

ಈ ವಾಕ್ಯವಲ್ಲಿ 'ಆಗುವದು' ಎಂಬ ಕ್ರಿಯೆಯ ಭಾವಪೀಕರ್ತೃ, 'ಆಗುವದಿಲ್ಲ' ಕ್ರಿಯಾಪದ. ಇದು ಭಾವಕರ್ತೃಕ ಪ್ರಯೋಗ.

ಮಂಜ—ಪ್ರಕಾರಾರ್ಥಕ ವಿಶೇಷಣ, ಇದರ ವಿಶೇಷ್ಯ 'ಹಣ್ಣು ಹಂಪಲ.'

ಹಣ್ಣು ಹಂಪಲಗಳನ್ನು—ಹಣ್ಣು ಹಂಪಲ ಸಾಮೂಹಿಕನಾಮ (ವ್ಯಂವ್ಯಸಮಾಸ) ಅಕಾರಾಂತ, ನಪುಂಸಕಲಿಂಗ, ದ್ವಿತೀಯಾ ಬಹುವಚನ. ಇವರ ಅರ್ಥ ಕರ್ಮ, 'ತಿನ್ನು' ಎಂಬ ಕ್ರಿಯೆಗೆ.

ಬುಬ್ಬನೇ—'ಬುಬ್ಬ' ಸಂಖ್ಯಾವಾಚಕ ಸರ್ವನಾಮ, ಪುಲ್ಲಿಂಗ, ಪ್ರಥಮಾ ಏಕವಚನ. 'ಏ' ನಿಶ್ಚಯಾರ್ಥಕ ನಿಪಾತ. 'ಬುಬ್ಬನೇ' ಎಂಬದು 'ತಿನ್ನು' ಎಂಬ ಕ್ರಿಯೆಗೆ ಕರ್ತೃ.

ಕೂತು—'ಕೂಡು' ಎಂಬ ಅಕರ್ಮಕ ಧಾತುವಿನ ಭೂತ ನ್ಯೂನ.

ತಿನ್ನವಹಾಗೆ—ಕ್ರಿಯಾವಿಶೇಷಣ 'ಆಗುವದಿಲ್ಲ' ಎಂಬ ಕ್ರಿಯೆಗೆ.

ಆಗುವದಿಲ್ಲ—ಅನುಬಂಧ ಕ್ರಿಯಾಪದ, 'ಆಗು' ಧಾತು ಅಕರ್ಮಕ, ನಿಷೇಧಾರ್ಥ, ನಪುಂಸಕಲಿಂಗ, ತೃತೀಯಪುರುಷದ ಏಕವಚನ.

ಇಚ್ಛೆ—ಮನಸು). ಈ ಮೇರೆಗೆ ವ್ಯಾಕರಣ ಮಾಡುವದು ಹೆಚ್ಚು ಸಯುಕ್ತಿಕವಾಗಿ ತೋರುತ್ತದೆ. ಈ ಬಗ್ಗೆ ಶೋಧಕ ಬುದ್ಧಿಯುಳ್ಳ ವಾಚಕರು ಕಾರಣಗಳ ಸಹಿತ ತಮ್ಮ ತಮ್ಮ ಅಭಿಪ್ರಾಯವನ್ನು ತಿಳಿಸಿದರೆ ಒಳ್ಳೇದಾಗುವದು.

"ನಿನ್ನಂಥ ಗೆಳೆಯರನ್ನು ಕರಕೊಂಡು ತಿಂದರೆ ಮನಸಿಗೆ ನೆಟ್ಟಗೆ ಆಗುತ್ತದೆ."*

ಈ ವಾಕ್ಯದಲ್ಲಿ 'ಆಗುವದು' ಎಂಬ ಕ್ರಿಯೆಯ ಭಾವವೇ ಕರ್ತೃ, 'ಆಗುತ್ತದೆ' ಕ್ರಿಯಾಪದ, ಭಾವಕರ್ತೃಕ ಪ್ರಯೋಗ.

ನಿನ್ನಂಥ—ಪ್ರಕಾರಾರ್ಥಕ ವಿಶೇಷಣ, ಇದರ ವಿಶೇಷ್ಯ 'ಗೆಳೆಯರನ್ನು'.

ನೆಟ್ಟಗೆ—ಕ್ರಿಯಾವಿಶೇಷಣ, 'ಆಗುತ್ತದೆ' ಎಂಬ ಕ್ರಿಯೆಗೆ.

ಉಳಿದ ಶಬ್ದಗಳ ವ್ಯಾಕರಣ ಮಾಡುವದು ಸುಲಭವಿದ್ದದರಿಂದ ಬಿಟ್ಟು ಬಿಟ್ಟಿದ್ದೇವೆ.

(ಮುಂದಕ್ಕೆ ಸಾಗುವದು.)

ನೋಟೀಸು.

ಯಾವತ್ತು ಜನರಿಗೆ ತಿಳಿಸುವದೇನೆಂದರೆ:—

ಧಾರವಾಡ ಟ್ರೇನಿಂಗ ಕಾಲೇಜಿನ ಪ್ರವೇಶ ಪರೀಕ್ಷೆಯು ಬರುವ ನೊವೆಂಬರ ತಿಂಗಳ ಎರಡನೇ ತಾರೀಖು ಗುರುವಾರ ದಿವಸ ಕನ್ನಡ ಒನೇ ಇಯತ್ತೆಯಂತೆ ಆಗುವದು. ಪರೀಕ್ಷೆಗೆ ಬರುವವರು ಒನೇ ಅಥವಾ ೩ನೇ ಗ್ರೇಡಿನ ಮುಲ್ಕೀ ಸರ್ಟಿಫಿಕೇಟು ಪಡೆದವರೂ, ಸಶಕ್ತರೂ, ವ್ಯಂಗರಹಿತರೂ, ಐದು ಫೂಟಿಗಿಂತ ಎತ್ತರವಿದ್ದವರೂ, ಹದಿನೇಳರಮೇಲೆ ಇಪ್ಪತ್ತೈದರ

---

* ಇಲ್ಲಿ 'ನೆಟ್ಟಗೆ' ಅಂದರೆ ಸಮಾಧಾನ ಎಂಬ ಅರ್ಥವು. ಆದ್ದರಿಂದ, ಇದು ಅವ್ಯಯಾತ್ಮಕ ನಾಮವೆಂದು ತಿಳಿಯಬಹುದು. ಹಾಗಾದರೆ 'ನೆಟ್ಟಗೆ' ಅವ್ಯಯಾತ್ಮಕನಾಮ, ಪ್ರಥಮೆಯ ವಿಕವಚನ. ಇದರ ಅರ್ಥ ಕರ್ತೃ, 'ಆಗು' ಎಂಬ ಕ್ರಿಯೆಗೆ,—ಹೀಗೆ ವ್ಯಾಕರಣವಾಗಬಹುದು

ರ ಬಳಗೆ ವಯಸ್ಸುಳ್ಳವರೂ ಇರಬೇಕು. ಮತ್ತು ಅವರು ವಯಸ್ಸಿನ ದಾಖಲೆಯನ್ನೂ, ಮುಲ್ಕೀ ಸರ್ಟಿಫಿಕೇಟನ್ನೂ ಸಂಗಡ ತಕ್ಕೊಂಡು, ಮೇಲೆ ಕಾಣಿಸಿದ ತಾರೀಖಿನ ಬಳಗಾಗಿ ಕಾಲೇಜಕ್ಕೆ ಬಂದು ಹಾಜರಾಗಬೇಕು. ಪರೀಕ್ಷೆಗೆ ಬಂದವರು ಅಸಿಸ್ಟಂಟರೇ ಇರಲಿ, ವಿದ್ಯಾರ್ಥಿಗಳೇ ಇರಲಿ, ಅವರಲ್ಲಿ ಉತ್ತಮ ರೀತಿಯಿಂದ ಪಾಸಾದ ನೂರು ಜನರನ್ನು ಪಗಾರೀ ವಿದ್ಯಾರ್ಥಿಗಳಾಗಿ ತೆಗೆದುಕೊಳ್ಳಲಾಗುವದು.

೨. ಪರೀಕ್ಷೆಗೆ ಬರುವವರು ಪರೀಕ್ಷೆಯ ವಿಷಯಗಳನ್ನು ಚೆನ್ನಾಗಿ ನೋಡಿಕೊಂಡು ಬಂದರೆ, ಅವರನ್ನು ಹಿಂದಿರುಗಿ ಕಳುಹಿಸುವ ಪ್ರಸಂಗವು ಬರಲಿಕ್ಕಿಲ್ಲ, ಮತ್ತು ಅವರ ಶ್ರಮವು ವ್ಯರ್ಥವಾಗಲಿಕ್ಕಿಲ್ಲ. ಕಾಲೇಜಕ್ಕೆ ಬರಲಪೇಕ್ಷಿಸುವ ಚುರುಕು ಬುದ್ಧಿಯ ವಿದ್ಯಾರ್ಥಿಗಳು ಈ ಪ್ರಸಂಗವನ್ನು ಕಳಕೊಳ್ಳಬಾರದು.

ಟ್ರೇನಿಂಗ ಕಾಲೇಜ ಧಾರವಾಡ,
ತಾರೀಖು ೧–೫–೯೦.

RAOJI B. KARANDIKAR,
ಪ್ರಿನ್ಸಿಪಾಲ.

CORRESPONDENCE.
ಪತ್ರವ್ಯವಹಾರ.

ಹಾವೇರಿಯ ಹೆಣ್ಣು ಮಕ್ಕಳ ಶಾಲೆಯ ಮಾಸ್ತರರಾದ ರಾ. ರಾ. ಫಕೀರಪ್ಪ ದ್ಯಾಮಪ್ಪ ಅಡೂರ ಇವರು ತಮ್ಮ ಸಾಲಿಗೆ ರಾ. ರಾ. ಗುರುಸಾಂತಪ್ಪಾ ಅಣ್ಣಾ ನೆಲವಿಗಿ ಎಂಬ ಕಾಟಿನ ಹಳ್ಳಿಯ ಸಾವುಕಾರರು ಬಂದು, ಹೆಣ್ಣು ಮಕ್ಕಳ ಪರೀಕ್ಷೆ ತಕ್ಕೊಂಡು, ಅವರಿಗೆ ಉತ್ತೇಜನಾರ್ಥವಾಗಿ ಖಣಗಳನ್ನು ಇನಾಮು ಕೊಟ್ಟರೆಂದು ತಿಳಿಸುತ್ತಾರೆ. ಈ ಮೇರೆಗೆ ಸಾವುಕಾರ

ಜನರು ವಿದ್ಯಾಭಿವೃದ್ಧಿಯಲ್ಲಿ ಮನಸು ಹಾಕುವದು ಅವರಿಗೆ ಭೂಷಣವೇ ಸರಿ.

ಎಡಿಟರ, ಕ. ಬಾ. ಪತ್ರಿಕ.

DHARWAR TRAINING COLLEGE, TERMINAL EXAMINATION QUESTIONS IN EUCLID AND MENSURATION.

ಧಾರವಾಡ ಟ್ರೇನಿಂಗ ಕಾಲೇಜಿನ ಷಾಣ್ಮಾಸಿಕ ಪರೀಕ್ಷೆಯ ಸಿದ್ಧಾಂತ, ಕ್ಷೇತ್ರಫಲದ ಪ್ರಶ್ನೆಗಳು.

..... ಎನೇ ವರ್ಷದ ವರ್ಗ.

೧. (ಅ). ಕೆಳಗಿನ ಶಬ್ದಗಳ ವ್ಯಾಖ್ಯೆಗಳನ್ನು ಬರೆಯಿರಿ—

ವ್ಯಾಖ್ಯೆ, ಪ್ರತ್ಯಕ್ಷಪ್ರಮಾಣ, ಗೃಹಿತಕೃತ್ಯ, ಪ್ರತಿಜ್ಞೆ, ಸೆವೂಂತರ ರೇಖೆಗಳು.

(ಆ). ಸಿದ್ಧತೆಯಲ್ಲಿ ಮತ್ತು ಸಿದ್ಧಾಂತಗಳಲ್ಲಿ ಪ್ರಕಾರ ಳೆಷ್ಟು? ಯಾವವು? ಸಿದ್ಧಾಂತದಲ್ಲಿ ಭಾಗಗಳ್ಯಾವವು?

೨. ಎನೇ ಪುಸ್ತಕದಲ್ಲಿ ವ್ಯಾಖ್ಯಿಸಿದ ಆಕೃತಿಗಳೆಂಥವು? ಅವುಗಳನ್ನು ಯಾವ ಕ್ರಮದಿಂದ ವ್ಯಾಖ್ಯಿಸಿದ್ದಾರೆ? ಅವುಗಳ ಹೊರತು ಬೇರೆ ಆಕೃತಿಗಳಿರುವವೋ? ಇದ್ದರೆ, ಯಾವವು?

೩. ಎನೇ ಪುಸ್ತಕದ ಎಷ್ಟನೇ ಸಿದ್ಧಾಂತವನ್ನು ಸಿದ್ಧಮಾಡಿರಿ. ಇದರ ಸಿದ್ಧತೆಯನ್ನು ಹೆಚ್ಚು ಸುಲಭ ಮಾಡಲಿಕ್ಕೆ ಬರುವದೋ? ಉತ್ತರಕ್ಕೆ ಕಾರಣ ಬರೆಯಿರಿ.

೪. ಎನೇ ಪುಸ್ತಕದ ೭, ೧೪, ೩೫, ೩೬ ಈ ಸಿದ್ಧಾಂಗಳ ಪ್ರತಿಜ್ಞೆಗಳನ್ನು ಬರೆಯಿರಿ.

೫. ೧. ೨೬ನೇ ಸಿದ್ಧಾಂತದ ೨ನೇ ಭಾಗದ್ದಷ್ಟೇ ಪ್ರತಿಜ್ಞೆ ಹೇಳಿ, ಸಿದ್ಧತೆ ಬರಿಯಿರಿ.

೬. ಬಂದು ಕಾಟಕೋನ ತ್ರಿಕೋನದ ಕ್ಷೇತ್ರವು ೨೬ ಚೌರಸಫೂಟು ಅದೆ. ಅದರ ಕರ್ಣ ೧೦ ಇದ್ದರೆ, ಕರ್ಣಕ್ಕೂ ಪಿರ ಕೋನಕ್ಕೂ ಅಂತರವೆಷ್ಟು?

೭. ೪ ಫೂಟು ವ್ಯಾಸದ ವರ್ತುಳದಲ್ಲಿ ಬಂದು ಚೌರಸ ತೆಗವರೆ, ಆ ಚೌರಸವ ಭುಜವೆಷ್ಟಾಗುವದು?

೮. ಬಂದು ಕೋಣೆಯು ೧೫ ಫೂಟು ಅಗಲ, ೨೦ ಫೂಟು ಉದ್ದ ಅದೆ.. ಅವರ ಗೋಡೆಗಳು ೨೦ಕಿ ಫೂಟು ಎತ್ತರ ಅವೆ. ಆ ಕೋಣೆಯ ಗೋಡೆಗಳ ಬಳವುಗ್ಗಲಿಗೆ ಸುಣ್ಣ ಹಚ್ಚಬೇಕಾವರೆ, ಖರ್ಚು ಎಷ್ಟು ಬೀಳುವದು? ಸುಣ್ಣ ಹಚ್ಚಲಿಕ್ಕೆ ೧೦೦ ಚೌರಸಫೂಟಿಗೆ ೬ಆಣೆ ಬೀಳುತ್ತದೆ.

೨ನೇ ವರ್ಷದ ವರ್ಗ.

೧. ೨ನೇ ಪುಸ್ತಕದ ೬ನೇ ಸಿದ್ಧಾಂತದ ಪ್ರತಿಜ್ಞೆ ಬರೆದು ಅವನ್ನು ಸಿದ್ಧ ಮಾಡಿರಿ.

೨. ೨ನೇ ಪುಸ್ತಕವ ೧೦ನೇ ಸಿದ್ಧಾಂತವ ರಚನೆ ಮಾಡಿ ಇದೆ ಎಂದು ತಿಳಿದು ಸಿದ್ಧತೆಯನ್ನಷ್ಟೇ ಬರಿಯಿರಿ.

೩. ಅ, ಬ ಗಳು ಎರಡು ರೇಷೆಗಳ ಉದ್ದಳತೆಗಳನ್ನು ತೋರಿಸುತ್ತವೆಂತಲೂ ಗುಣಾಕಾರವು ಕಾಟಕೋನ ಚೌಕೋನವನ್ನೂ ವರ್ಗವು ಚೌರಸವನ್ನೂ ತೋರಿಸುತ್ತವೆಂತಲೂ ತಿಳಿದು, ಮುಂದಿನ ಸಿದ್ಧಾಂತ ಸಿದ್ಧಮಾಡಿರಿ.

ಅ (ಅ+ಬ)=ಅ^2+ಅಬ.

೪. ೪ ಫೂಟು ವ್ಯಾಸವ ಬಂದು ವರ್ತುಳದೊಳಗೆ ಬಂದು ; ಮಕೇಂದ್ರ ವರ್ತುಳ ತೆಗೆದು ಆ ವರ್ತುಳದಲ್ಲಿ ಎರಡು ಸಮಾ ಭಾಗಗಳನ್ನು ಮಾಡಬೇಕಾಗಿದೆ. ಅದರೆ ಒಳಗಿನ ವರ್ತು ಳವ ತ್ರಿಜ್ಯೆ ಎಷ್ಟರಬೇಕು ?

೫. ಬಂದು ಶಂಕುವಿನ ತಳದ ವ್ಯಾಸವು ೪ ಫೂಟು ಮತ್ತು ಎತ್ತರ ೧೦ ಫೂಟು ಇದ್ದರೆ, ಅದರ ಮೇಲ್ಮೈ ಕ್ಷೇತ್ರವೆಷ್ಟಿ ರಬೇಕು ?

೬. ಅಕ ರೇಖೆಯು ೧೬ ಫೂಟು ಅದೆ. ಅದರಲ್ಲಿ ಕಖ



ಬಿಂದುಗಳಿಂದ ಮೂರು ಸ ಮಾನಭಾಗಗಳನ್ನು ಮಾ ಡಿ, ಕಖ ದ ಮೇಲೆ ಅವ ರ ಕೆಳಮಗ್ಗಲಿಗೆ ಕಖಭ ಸಮಭುಜ ತ್ರಿಕೋನ ತೆ ಗೆದು, ಕಖ ಬಿಂದುಗಳ ನ್ನು ಮಧ್ಯ ಕಲ್ಪಿಸಿ, ಅಖ ದಷ್ಟು ತ್ರಿಜ್ಯೆಯಿಂದ ಅಫ, ಬಫ ಸಂ ಕಗನ್ನು ತೆಗೆದಿರುತ್ತವೆ. ಭಫ, ಭಬ ರೇಖೆಗಳನ್ನು ಬೆಳಸಲಾಗಿ, ಅವು ಆ ಕಂಸಗಳನ್ನು ಖಬ ಬಿಂದುಗಳಲ್ಲಿ ಕೂಡುವವು. ಭ ಬಿಂದುವನ್ನು ಮಧ್ಯ ಕಲ್ಪಿಸಿ ಭಖ ತ್ರಿಜ್ಯೆಯಿಂದ ಖಗಬ ಕಂಸ ತೆಗೆದದೆ. ಅದರೆ ಅಬಗಖ ದ ಕ್ಷೇತ್ರವೆಷ್ಟು ?

೩ನೇ ವರ್ಷದ ವರ್ಗ.

೧. ಪೂರಕ ಸವೊಂತರಭುಜ ಚತುಷ್ಕೋನ, ವರ್ತುಲ ಖಂಡ, ವರ್ತುಲ ವಿಭಾಗ, ಇವುಗಳ ವ್ಯಾಖ್ಯೆಗಳನ್ನು ಬರೆಯಿರಿ. ಬುದನೇ ಪುಸ್ತಕದಲ್ಲಿ 'ಕಾಟಕೋನಚತುಷ್ಕೋನ' ಎಂಬ ಶಬ್ದವನ್ನು 'ಬಬ್ಲ್ಲಿಂಗ' ಎಂಬ ಶಬ್ದಕ್ಕೆ ಬದಲಾಗಿ ಉಪಯೋಗಿಸುವದು ಯೋಗ್ಯವದೆಯೋ? ಸರೂಪ ವರ್ತುಲಖಂಡಗಳ ವ್ಯಾಖ್ಯೆ ಕೊಡಲಿಕ್ಕೆ ಯೋಗ್ಯ ಸ್ಥಳ ಯಾವದು? ಉತ್ತರಗಳನ್ನು ಕಾರಣ ಸಹಿತ ಬರೆಯಿರಿ.

೨. ಬುದು ವರ್ತುಲದಲ್ಲಿ ತೆಗೆದ ಚತುಷ್ಕೋನದ ಎದುರಾಬದುರಿನ ಕೋನಗಳ ಬೇರೀಜು ಎರಡು ಕಾಟಕೋನಗಳಿಗೆ ಸರಿ ಇರುತ್ತದೆ, ಎಂಬವದನ್ನು ಸಿದ್ಧಮಾಡಿರಿ.

೩. ವರ್ತುಲದ ವ್ಯಾಸದ ತುದಿ ಬಿಂದುವಿನಲ್ಲಿ ಅದರ ಕೂಡ ಅತಿ ದೊಡ್ಡ ಲಘುಕೋನ ಮಾಡುವ ರೇಖೆಯನ್ನು ತೆಗೆಯುಲಾಗಿ, ಅದು ಆ ವರ್ತುಲವನ್ನು ಛೇದಿಸಲಿಕ್ಕೆ ಬೇಕು, ಎಂಬವದನ್ನು ಸಿದ್ಧಮಾಡಿರಿ.

೪. ಯಾವದೊಂದು ತ್ರಿಕೋನದಲ್ಲಿ ಶಿರಕೋನವನ್ನು ದುಭಾಗಿಸುವಂಥಾದೊಂದು ಮತ್ತು ತಳರೇಖೆಯನ್ನು ದುಭಾಗಿಸುವಂಥಾದೊಂದು ಹೀಗೆ ಎರಡು ರೇಖೆಗಳನ್ನು ಶಿರಕೋನದಿಂದ ತಳರೇಖೆಯ ವರೆಗೆ ತೆಗೆಯಲಾಗಿ, ತಳರೇಖೆಯನ್ನು ದ್ವಿಭಾಗಿಸುವ ರೇಖೆಯು ಎರಡನೇ ರೇಖೆಗಿಂತ ದೊಡ್ಡದಾಗುವದು, ಎಂಬವದನ್ನು ಸಿದ್ಧಮಾಡಿರಿ.



೫. ಈ ಕೆಳಗಿನ ಆಕೃತಿಯ ಕ್ಷೇತ್ರವು ೩೬ ಚೌರಸ ಫೂಟು ಅದೆ. ಇ ಈ ಲಂಬವೆಷ್ಟು?

೬. ಬಂದು ಚೌರಸವ ಕರ್ಣಕ್ಕೆ ಸಮಾಂತರವಾಗಿ ಎರಡು ಸರಳರೇಖೆಗಳನ್ನು ತೆಗೆದು, ಆ ಚೌರಸವಲ್ಲಿ ಮೂರು ಸಮಾನ ಭಾಗಗಳನ್ನು ಮಾಡಿರುತ್ತದೆ. ಆದರೆ ಆ ಸಮಾಂತರರೇಖೆಗಳ ನಡುವಿನ ಅಂತರವೆಷ್ಟು? ಆ ಚೌರಸದ ಭುಜ ೪ ಫೂಟು.

೭. ಮುಂದೆ ಹೇಳಿದ ರಚನೆಯಿಂದ ಬಂದು ಅಂಡಾಕೃತಿಯನ್ನು ಸಿದ್ಧಮಾಡಿರುತ್ತದೆ. ಅವರ ಕ್ಷೇತ್ರವನ್ನು ತೆಗಿ.



ಅ ಇ ಎಂಬ ೪ ಫೂಟು ರೇಖೆಯ ಮೇಲೆ ಅವರ ಕೆಳಭಾಗಕ್ಕೆ ಅ ಈ ಇ ಅರ್ಧವರ್ತುಲ ತೆಗೆದದೆ. ಅ, ಇ ಮಧ್ಯಬಿಂದುಗಳನ್ನು ಕಲ್ಪಿಸಿ ಅಇ ತ್ರಿಜ್ಯೆಯಿಂದ ಅವರ ಮೇಲ್ಭಾಗಕ್ಕೆ ೩೦ ಅಂಶವ ಎರಡು ಅ ಗ, ಈ ಇ ಕಂಸಗಳನ್ನು ತೆಗೆದದೆ. ಇ ಗ, ಅ ಈ ಗಳ ಛೇದನ ಬಿಂದುವನ್ನು ಮಧ್ಯ ಕಲ್ಪಿಸಿ, ಕ ಗ ತ್ರಿಜ್ಯೆಯಿಂದ ಗ ಉ ಇ ಕಂಸ ತೆಗೆದು ಆಕೃತಿಯನ್ನು ಪೂರ್ಣ ಮಾಡಿ ಇದೆ.

ಪಗ್ಗಣಿ ವಸೂಲು.*

ಧಾರವಾಡಜಿಲ್ಲೆ.

		ರೂ.	ಆ.	ಪೈ.
ಸಿರೆ(ಕೆರೂರ ತಾಲೂಕ ಮಾಸ್ತರರಿಂದ ಬಿಟ್ಟಿ, ಪೈಕೀ,				
ಜೂನ ತಿಂಗಳುಗಳ ವಗ್ಗಣಿ.	,, ...	೭	೯	೩
ಕಲಘಟಿಗ ,,	,, ...	೫	೪	೦
ಪೂರ್ಣ ,,	ಜನವರಿಯಿಂದ ಜೂನವರೆಗ	೧೦	೩	೦
ಅಳ್ನಾವರ ಪೈಕೀ ಪಟ್ಟಣ ಜಾಲ್ಯೆ ಗಳಿಂದ				
ಜುಲಾಯಿ ಗಳಿಗಿ ವಸೂಲಿಗೆ	... ...	೧	೫	೯

ವಿಜಾಪ್ರವಜಿಲ್ಲೆ.

ಬಾದಾಮಿ ತಾಲೂಕ ಮಾಸ್ತರರಿಂದ ಜೂಲೈ, ಆಗಷ್ಟ				
ಸಪ್ಟೆಂಬರ ತಿಂಗಳ ವಗ್ಗಣಿ	...	೬	೬	೦
ಬಾಗಲಕೋಟ ತಾಲೂಕ ಶಿರೂರ ಮಾಸ್ತರರಿಂದ				
ಜಾನೆವಾರಿಯಿಂದ ಜೂನ ವ್ಹರಾ	...	೮೨	೧೮	೦
ಸಿಂದಿಗಿ ತಾಲೂಕ ಮಾಸ್ತರರಿಂದ ಜೂಲೈ, ಆಗಷ್ಟ,				
ಸಪ್ಟೆಂಬರ ತಿಂಗಳುಗಳ ವಗ್ಗಣಿ	...	೪	೮	೨

ಧಾರವಾರಜಿಲ್ಲೆ.

ಕಾರವಾರ ಮ್ಯುನಿಸಿಪಾಲಿಟಿ ಮಾಸ್ತರರಿಂದ ಜುಲೈ,				
ಆಗಷ್ಟ, ಸಪ್ಟೆಂಬರ ತಿಂಗಳ ವಗ್ಗಣಿ	...	೬	೫೫	೦
ಸಂಕೋಲಾ ತಾಲೂಕ ಮಾಸ್ತರರಿಂದ ,,	...	೫	೮	೦

* ಪಟ್ಟಿಯಲ್ಲಿಗೊನ್ನಾವರವೂ ಕಿಲ್ಲೆ ಸಿದ್ದಾಪುರ ಮಾಸ್ತರ ಇನವು ಆಗೆಲ್ಲನವು ಬಂಗಾವೇರವು.

ಪ್ರಕಟನೆ.

ಪಾಕ್‌ಸಂಜೀವನೀ ಗುಳಿಗೆಗಳು.

ಅನೇಕ ಜನರು ಈ ಗುಳಿಗೆಗಳಿಂದ ಗುಣಹೊಂದಿದಾರೆ. "ಕ್ಷ ಕ್ಷಕಳ್ಳತನ ಮ ಮ ಮಾಡಬಾರದು" ಇಂಥಾ ವಾಂಬಾ ಗುಣವಿದ್ದರೆ ಅದು ನೆಟ್ಟಗಾಗಲಿಕ್ಕೆ ಈ ಗುಳಿಗೆ ನಾಲ್ವತ್ತು ದಿವಸ ಸೇವಿಸಬೇಕು. ಕ್ರಯ ೨ ರೂ. ೪ ಆ. ಬಾಂಗಿನಾಟಪೇಡು ವ್ಯಾಹ್ಯಲ್ಯೂಪೇಯಬಲ್ ಮೂಲಕ ಕ್ರಯಹಾಗು ಖರ್ಚು ಕೂಡಿ ೨ ರೂ. ೧೦ ಆ. ಗುಳಿಗೆ ಸೇವಿಸುವವರ ವಯಸ್ಸು ತಿಳಿಸಬೇಕು. ಬೆಳಗಿ, ಕೊಲ್ಲಾಪೂರ, ಬಿಜಾಪೂರ, ಸೊಲ್ಲಾಪೂರ, ಮುಂತಾವ ಕಡೆಯ ಪ್ರಾಯವರ್ಷ ೧೦ | ೨೯ | ೩೪ | ೪೦ | ಈ ಪ್ರಕಾರ ಬೇರೆ ಬೇರೆ ವಯಸ್ಸಿನವರು ಇದರಿಂದ ಗುಣಹೊಂದಿದಬಗ್ಗೆ ನಮಗೆ ಅನೇಕಪತ್ರಗಳು ಬಂದವೆ. ಅವುಗಳಲ್ಲಿ ಬಂದು ಮರಾಠೀ ಕಾರ್ಡಿನ ಅಭಿಪ್ರಾಯವೇನಂದರೆ:—

"ಸಾ. ನ. ವಿ. ವಿ. ಪತ್ರಬರೆಯಲಿಕ್ಕೆ ನಾನು ಆನಂದ ಪಡುವದೇನಂದರೆ, ಇಂದಿಗೆ ಬರುವರೆ ತಿಂಗಳ ಮೊದಲು ನೀವು ಕಳುಹಿಸಿದ ಪಾಕ್ಸಂಜೀವನೀ ಗುಳಿಗೆಯಿಂದ ಎಷ್ಟೋ ಗುಣವಾಗಿದೆ. ಆವಕಾರಣ, ಇನ್ನೊಂದು ಬಾಟ್ಲಿ ಗುಳಿಗೆ ದಯವಮಾಡಿ ಕಳುಹಿಸಬೇಕು. ಇಂಥ ಔಷಧಗಳನ್ನು ತಯಾರಿಸಿ ಜನರ ಮೇಲೆ ಉಪಕಾರ ಮಾಡುವ ನಿಮಗೆ ದೇವರು ಕಲ್ಯಾಣ ಮಾಡಲಿ ಇಂತಿ ವಿಜ್ಞಾಪನೆ.

ದಾದೋ ಸಾವಳರಾಮದೇವ, ಹೈಸ್ಕೂಲು ಅಹಮ್ಮದನಗರ."

ಈ ಗುಳಿಗೆಗಳನ್ನು ತಯಾರು ಮಾಡಿ ಕಳುಹಿಸಿಕೊಡುವವರ ವಿಳಾಸ:—

ತಾ. ೧೧—೪—೧೦. } ಬೆಳಗಿ ರಾಮಕೃಷ್ಣ ಪಾಂಡುರಂಗ ಮಾಜೀಸ್ಕೂಲ ಮಾಸ್ತರ ಬೆಳಗಿ, ತಾಲೂಕ ಸಿದ್ಧಾಪೂರ, ಜಿಲ್ಲೆ ಉತ್ತರ ಕಾನಡಾ.

ಶಾಲಾಪತ್ರಿಕೆ

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ ।
ಬಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯವಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ತಿಕ್ಕೈಕೊಂಬುದೈ ।
ದಯೆಯಿಂ ದೋಷವತಿದ್ದವೇಳ್ವುದುಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ॥೧॥

ಪುಸ್ತಕ ೨೫.] ಅಕ್ಟೋಬರ ೧೮೯೯ಂ. [ಸಂಚಿಕೆ ೧೦.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣೆಯ ಸಂಬಂಧವ ವೃತ್ತಾಂತಗಳು.

ಮೆಹರಬಾನ್ ಡಿರೆಕ್ಟರ ಆವ್ ಪಬ್ಲಿಕ್ ಇನ್ಸ್ಟ್ರಕ್ಶನ್ ಧೊರೆಗಳು ತಮ್ಮ ಸರ್ಕಾರ ಇಸ್ವಿಯ ಆಗಷ್ಟ್ ತಿಂಗಳ ೨೫ನೇ ತಾರೀಖಿನ ೩೦೬೦ ನಂಬರವ ಹುಕುಮಿನಲ್ಲಿ ಧಾರವಾಡ ಟ್ರೇನಿಂಗ್ ಕಾಲೇಜವ ಕಾಯದೆಯ ೧೪ನೇ ಕಲಮಿಗೆ ಕೆಳಗೆಬರೆವ ಹೊಸನಿಯಮವನ್ನು ಜೋಡಿಸಿದ್ದಾರೆ:—

"ಯುನಿವರ್ಸಿಟಿ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಆಗಲಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಆಗಲಿ ಇಳಿವ ಶಿಕ್ಷಕರನ್ನು ಮೆಹರಬಾನ್ ಎಜುಕೇಶನಲ್ ಇನ್ಸ್ಪೆಕ್ಟರ್ ಸಾಹೇಬರ ಅಪ್ಪಣೆಯಿಂದ ಎರಡನೇ ವರ್ಷದ ಸರ್ಟಿಫಿಕೇಟ ಪರೀಕ್ಷೆಗೆ ಕೂಡ್ಸಗೊಡಬಹುದು. ಮತ್ತು ಈ ಪರೀಕ್ಷೆ ಇಳಿವ ಬಳಿಕ, ಅವರನ್ನು ೩ನೇ ವರ್ಷದ ವಿದ್ಯಾರ್ಥಿಗಳೊಡನೆ ಅಭ್ಯಾಸ ಮಾಡಲಿಕ್ಕೆ ಕಾಲೇಜವಲ್ಲಿ ಕರಕೊಳ್ಳಬಹುದು.

ಎರಡನೇ ವರ್ಷದವರಿಗೆ ನೇಮಿಸಿದ ಯಾವತ್ತು ವಿಷಯಗಳ

ಳಲ್ಲಿ ಅವರ ಪರೀಕ್ಷೆಯಾಗುವದು, ಮತ್ತು ಅವರಿಗೆ ಬಂದು ಪಿಷ್ಟೆಯುವಲ್ಲಿ ಸಹ ಮಾಫೀ ದೊರೆಯದು."

ಈ ಮುಂಬಯಿಯಲ್ಲಿ ಒಬ್ಬ ಪಾದ್ರೀಸಾಹೇಬರ ದೀಕ್ಷೋತ್ಸವ ದ್ಯೋಗದಿಂದ ಕಿವುಡಮೂಕರ ಸಾಲೆಯು ಸ್ಥಾಪಿಸಲ್ಪಟ್ಟಿದೆ. ಇದನ್ನು ಸ್ಥಾಪಿಸಿ ಮೂರೇ ವರ್ಷಗಳಾದವು. ಆದಾಗ್ಯೂ, ಈ ಅವಧಿಯಲ್ಲಿ ಆ ಸಾಲೆಯು ಮುಖ್ಯಾಧ್ಯಾಪಕರಾದ ಮಿ. ಪಾಲ್ಕ ಎಂಬವರಿಂದ ಅದು ಉರ್ಜಿತ ಸ್ಥಿತಿಯನ್ನು ಹೊಂದಿರುತ್ತದೆ. ಈ ಸಾಲೆಯು ಮೂರನೇ ವಾರ್ಷಿಕ ರಿಪೋರ್ಟಿನ ಮೇಲಿಂದ ತಿಳಿಯುವದೇನಂದರೆ—ಇದರ "ಎಂಡೌಮೆಂಟ ಫಂಡ" ದ ರಕಮು ೧೪೫೦ ರೂಪಾಯಿ ಆಗಿರುತ್ತದೆ. ಇದಲ್ಲದೆ ಸರಕಾರದಿಂದಲೂ ಮುಂಬಯಿ ಮ್ಯುನಿಸಿಪಾಲಿಟಿಯಿಂದಲೂ 'ಗ್ರಾಂಟ' ದೊರೆಯುತ್ತದೆ. ಹೋದವರ್ಷ ಈ ಸಾಲೆಯಲ್ಲಿ ಕಿವುಡಮೂಕರ ಸಂಖ್ಯೆಯು ೬೪ ಇತ್ತು. ಅವರಲ್ಲಿ ೧೧ ಮಂದಿ ಕ್ರಿಸ್ತಿಯನ್ನರು, ೧೧ ಮಂದಿ ಪರ್ಸಾಯನ್ನರು, ೬ ಮಂದಿ ಹಿಂದೂ ಜನರು ಇದ್ದರು. ಈ ಮಾದರಿಯ ಸಾಲೆಯು ನಮ್ಮ ಪ್ರಾಂತದೊಳಗೆ ಇದೇ ಮೊದಲನೇದು. ಕಿವುಡಮೂಕರ ಸ್ಥಿತಿಯು ಬಹಳ ಕೆಟ್ಟದಿರುತ್ತದೆ. ಉತ್ತಮಕುಲದಲ್ಲಿ ಹುಟ್ಟಿದಾಗ್ಯೂ ಏಕಾಂತವಾಸವು ಅವರಿಗೆ ತಪ್ಪದು. ಅವರು ಯಾವತ್ತು ಕೆಲಸಗಳನ್ನು ಸನ್ನೆಗಳಿಂದಲೇ ಮಾಡಬೇಕಾಗುತ್ತದೆ. ಇಂಥ ಸ್ಥಿತಿಯಲ್ಲಿ ಜನ್ಮವನ್ನು ಕಳೆಯುವದು ಅವರಿಗೆ ಎಷ್ಟುಮಟ್ಟಿಗೆ ಪುಃಸಹವಾಗುತ್ತದ್ದೀತೆಂಬದನ್ನು ಊಹಿಸುವದು ಅಶಕ್ಯವು. ಆದರೆ ಅವರಿಗೆ ವಿದ್ಯೆ ಕಲಿಸುವದರಿಂದ ನಾನಾತರದ ತಿಳುವಳಿಕೆ ಹುಟ್ಟುತ್ತದೆ. ಪ್ರಸ್ತುತದಲ್ಲಿ ಹೂಳಿಟ್ಟ ಸಂಪತ್ತಿಯನ್ನು ದೊರಕಿಸುವದಕ್ಕೆ ಅವ

ರಿಗೆ ಶಕ್ತಿ ಬರುವವಲ್ಲದೆ, ಸ್ವಂತ ಸಾಮರ್ಥ್ಯದಿಂದ ತಮ್ಮ ಹೊಟ್ಟೆಯನ್ನು ತುಂಬಿಕೊಳ್ಳಲಿಕ್ಕೆ ಅವರು ಸಮರ್ಥರಾಗುತ್ತಾರೆ. ವಿಚಾರಮಾಡಿ ನೋಡಿದರೆ, ಅವರ ಬುದ್ಧಿಯು ಬೆಳೆಯುತ್ತದೆ. ಹಾಗು ಅವರ ಉಪಯೋಗವು ಹೆಚ್ಚಿಗಾಗುತ್ತ ಹೋಗಿ ಸಮಾಜದ ಹಿತವಾದರೂ ಆಗುತ್ತದೆ. ಈ ಸಾಲೆಯಲ್ಲಿ ಈಗ ಚಿತ್ರಕಲೆಯನ್ನು ಕಲಿಸಲಾರಂಭಿಸಿದ್ದಾರೆ. ದೈವಹೀನರಿವ್ವರಿಂದ ಜನರವಯಿಗೆ ಪಾತ್ರರಾದಂಥ ಈ ಹುಡುಗರು ಈ ಕಲೆಯೊಳಗೆ ಬಳ್ಳೀ ಪ್ರವೀಣರಾಗಿದ್ದಾರಂತೆ. ಈ ಸಾಲೆಯ ಹುಡುಗರ ಪರೀಕ್ಷೆಯು ತಾರೀಖು ೧೦ ಸಪ್ಟಂಬರ ದಿವಸ ಜೆನುಖಾನೆಯ ದಿವಾಣಖಾನೆಯಲ್ಲಿ (ಲಷ್ಕರದಲ್ಲಿ) ಆಗತಕ್ಕದ್ದಿತ್ತು. ಆಗ ನಮ್ಮ ಗವರನರರಾದ ಲಾರ್ಡ ಹ್ಯಾರಿಸ ಧೊರೆಗಳು ಅಧ್ಯಕ್ಷಸ್ಥಾನವಲ್ಲಿ ವಿರಾಜಮಾನರಾಗತಕ್ಕವರಿದ್ದರೆಂದು ನಾವು ಕೇಳುತ್ತೇವೆ.

ಉತ್ತರಧ್ರುವದ ಕಡೆಗೆ ಬರ್ಫವು ಅತಿಶಯವಾಗಿ, ಇದ್ದದರಿಂದ, ಪ್ರವಾಸ ಮಾಡುವವರಿಗೆ ನೆಲದಮೇಲಿಂದ ಅತ್ತ ಕಡೆಗೆ ಹೋಗಲಿಕ್ಕೆ ಮಾರ್ಗವೇ ಇಲ್ಲ. ಆದ ಕಾರಣ, ಇಬ್ಬರು ಫ್ರೆಂಚ ಗೃಹಸ್ಥರು ವಿಮಾನದೊಳಗೆ ಕೂತುಕೊಂಡು ಹೋಗುವಲೆಲೋ ಚನೆ ಮಾಡಿದ್ದಾರೆ. ವಿಮಾನವ ಬಳವ್ಸಿಗೆಲ್ಲ ರೇಡಿಮೇವಸ್ತ್ರವ ಅಸ್ತರವನ್ನು ಹಾಕಿ, ಅವರೊಳಗೆ ಶುದ್ಧ ಹೈಡ್ರೊಜನ್ ವಾಯುವನ್ನು ತುಂಬುವವರಿದ್ದಾರೆ. ಮೊದಲು ಸ್ವಿಡ್ಜರ್ಲನ್ ಎಂಬ ಸ್ಥಳದಿಂದ ಹೊರಟು, ನಾಲ್ಕೈದು ದಿವಸಗಳಲ್ಲಿ ಉತ್ತರ ಅಮೇರಿಕ ಖಂಡಕ್ಕೆ ಹೋಗಿ, ಅಲ್ಲಿ ಇಳಿಯತಕ್ಕವರಿದ್ದಾರೆಂದು ಕೇಳುತ್ತೇವೆ.

ಧಾರವಾಡ ಟ್ರೇನಿಂಗ ಕಾಲೇಜದ ವಾರ್ಷಿಕ ಪರೀಕ್ಷೆಯು ಈ ತಿಂಗಳ ೧೫ನೇ ತಾರೀಖಿಗೆ ಆರಂಭವಾಗುವದು.

ಪರಿಕ್ಷರೂ ವಿಷಯಗಳೂ.

ಮೆ. ಎಜುಕೇಶನಲ್ ಇನ್‌ಸ್ಪೆಕ್ಟರ ಸಾಹೇಬರು-ಶಿಕ್ಷಣಪದ್ಧತಿ, ಬಾಯಿಲೆಖ್ಖ, ತಾಲೀಮು.
ರಾವ ಸಾ. ರಾ. ಬ. ಕರಂದೀಕರ...ಶಾಸ್ತ್ರೀಯವಿಷಯ, ಅರ್ಥಶಾಸ್ತ್ರ.
,, ,, ಶ್ರೀ. ಕೊ. ಕೊದ್ದ ...ಕನ್ನಡ.
,, ,, ರಾ. ಅ. ಸವಣೂರ ...ಗಣಿತ.
ಮಿ. ಇ. ಪಠಾಣ. ... ...ಇತಿಹಾಸಬೂಗೋಲ, ಉರ್ದು, ಫಾರ್ಸಿ.
ಮಿ. ಶ. ಜ. ಆನಖಿಂಡಿ. ...ಸಂಸ್ಕೃತ.

ಭೂಮಿಯ ಮೇಲೆ ಚೀನದೇಶದಲ್ಲಿ ಕಟ್ಟಿದ ಗೋಡೆಯು ಅತಿ ದೊಡ್ಡದು. ಇದನ್ನು ಸಿನ್ ವಂಶದ ಮೊದಲನೇ ಚಕ್ರವರ್ತಿಯು ತಾರ್ತರ ಜನರಿಂದ ಉಪದ್ರವವಾಗ ಬಾರದೆಂದು ಕ್ರಿಸ್ತ ಶಕಕ್ಕೆ ಮುಂಚೆ ೨೦೦ನೇ ವರ್ಷದ ಸುಮಾರಕ್ಕೆ ಕಟ್ಟಿಸಿದನು. ಈ ಗೋಡೆಯು ೧೫೫೦ಮೈಲು ಉದ್ದ, ೨೦ಘೂಟು ಎತ್ತರವದೆ. ಬುಡದಲ್ಲಿ ೨೫ಘೂಟು ಅಗಲವಿದ್ದು ಬರುಬರುತ್ತಾ ಪಿಂಡವು ಕಡಿಮೆಯಾಗಿ ತುದಿಯಲ್ಲಿ ೧೫ಘೂಟು ಅಗಲವಾಗಿರುತ್ತದೆ.

A SHOOTING STAR' S ACCOUNT OF ITSELF.

ಒಂದು ಉಲ್ಕೆಯು (ಜೀಳುವ ನಕ್ಷತ್ರವು) ತನ್ನ ವಿಷಯಕ್ಕೆ ಹೇಳಿದ ವೃತ್ತಾಂತ.

ಒಂದು ಸಾಧಾರಣವಾದ ಉಲ್ಕೆಯು ತನ್ನ ನಿಜವಾದ ಚರಿತ್ರೆ

ಪೆನ್ಸ್ನ್ ಹೇಳುವಮು ಶಕ್ಯವಾವಧಿ, ಅವರ ವೃತ್ತಾಂತವು ಮುಂದಿ ಬರೆವಂತೆ ಆಗುವದು:—

"ನಾನು ಬಂದು ಸಣ್ಣ ದ್ರವ್ಯವಯ ಪದಾರ್ಥವಿದ್ದೆನು. ಭೂಮಿಯ ಮೇಲೆ ದೊರಕುವಂಥ ರಸಾಯನ ಮೂಲತತ್ವಗಳಿಂದ ಆದ ಪದಾರ್ಥಗಳೇ ನನ್ನ ಮುಖ್ಯವಾದ ಘಟಕಾವಯವಗಳು. ದಿನಾಲು ನಿಮ್ಮ ದೃಷ್ಟಿಗೆ ಬೀಳುವ ಮೂಲತತ್ವಗಳನ್ನಷ್ಟೇ ಹೇಳಬೇಕಾದರೆ, ನನ್ನಲ್ಲಿ ಸ್ವಲ್ಪ ಕಬ್ಬಿಣ, ಸೋಡಿಯಮ್, ಕಾರ್ಬನ್ ಇರುವವು. ನನ್ನ ತೂಕವು ಹೆಚ್ಚು ಕಡಿಮೆ ಬಾವೆರಡು ಔನ್ಸು ಮಾತ್ರ ಇತ್ತು. ಬಹುಶಃ ನನ್ನನ್ನು ನೀವು ನಿಮ್ಮ ಮುಷ್ಟಿಯೊಳಗೆ ಹಿಡಿಯಬಹುದು; ಅಥವಾ ಪಾಸ್ಕೋಟಿನ ಜೇಬಿನೊಳಗೆ ಹಾಕಬಹುದು. ನನ್ನನ್ನು ವಿವರಿಸುವವರೆ— "ಇದು ಬಂದು ತರದ ಸಣ್ಣ ಕಲ್ಲು. ಅದರೂ ದಿನಾಲು ನೋಡುವಂಥ ಉಳಿದ ಕಲ್ಲುಗಳ ಹಾಗೆ ಅಲ್ಲ" ಎಂದು ಅನ್ನುವಿರಿ. ನಾನು ಅತ್ಯಂತ ವಿಲಕ್ಷಣವಾದ ಚಪಲತನದಿಂದ ನನ್ನ ಅಯುಷ್ಯವನ್ನು ಕಳೆದಿದ್ದೇನೆ. ಬತ್ತಿಟ್ಟಿಗೆ ಸುಮ್ಮನೇ ಕೂತುಕೊಳ್ಳುವವನ್ನು ನಾನು ಎಂದೂ ಅರಿಯೆನು. ನಾನು ಯಾವಾಗಲೂ ಚಲನೆಯಲ್ಲಿಯೇ ಇರುತ್ತಿದ್ದೆನು. ಆಕಾಶದೊಳಗಿಂದ ನಾನು ಊಹಿಸಲಶಕ್ಯವಾದ ತ್ವರೆಯಿಂದ ಓಡಿದ್ದೇನೆ. ನನ್ನ ಸಾದಾ ನಡಿಗೆಗೂ ಅತಿ ತ್ವರೆಯಿಂದ ಹೋಗುವ ನಿಮ್ಮ ಹೊಗೆ ಬಂಡಿಗಳಿಗೂ ಸರಿಮಾಡಿ ನೋಡಿದರೆ, ಅಂದರೆ, ಲಂಡನ್ನಿಂದ ಸ್ಕಾಟ್ಲಂಡದ ರಾಜಧಾನಿಯಾದ ಎಡಿಂಬರೋಕ್ಕೆ ಹೋಗುವದೊಂದು ಹೊಗೆ ಬಂಡಿಯಗೂಡ ನನ್ನನ್ನು ಓಡಬಿಟ್ಟರೆ, ಆ ಹೊಗೆ ಬಂಡಿಯು ಸ್ಟೇಶನದೊಳಗಿಂದ ಹೊರಬೀಳುವದರೊಳಗಾಗಿ, ನಾನು ನನ್ನ ಪ್ರದಕ್ಷಿಣೆಯನ್ನು ಮುಗಿಸಿ ಬಿಡುವೆನು.

ನಿಮ್ಮ ತುಬಾಕಿಗಳೊಳಗೂ ೧೦೦ ಟನ್ನಿನ ತೋಪುಗಳೊಳಗೂ ಹಾಕುವ ಸಣ್ಣ ದೊಡ್ಡ ಗುಂಡುಗಳ ವೇಗವಗೂಡ ನನ್ನ ವೇಗವನ್ನು ಸರಿಮಾಡಿ ನೋಡಿದರೆ, ಅವು ೩೦ ಮೊಳ ಹೋಗುವಷ್ಟರೊಳಗೆ, ನಾನು ೨೦೦೦ ಮೊಳ ಹೋಗುವೆನು. ನನ್ನ ಗತಿಯು ಯಾವಾಗಲೂ ಬಹಳ ಸವನಾಗಿತ್ತೆಂತಲ್ಲ. ಬಹಳೊಮ್ಮೊಮ್ಮೆ ನನ್ನ ವೇಗವು ತೀವ್ರವಾಗಿತ್ತು, ಬಹಳೊಮ್ಮೊಮ್ಮೆ ಮಂದವಾಗಿತ್ತು. ಅವರೆ ಸಾಧಾರಣವಾಗಿ ದಿನಾಲು ಕನಿಷ್ಠ ಪಕ್ಷಕ್ಕೆ ಹತ್ತು ಲಕ್ಷ ಮೈಲು ನಡೆದಿದ್ದೇನೆ. ಈ ಪ್ರಕಾರವಾಗಿ ನಾನು ಕಾಲಹರಣ ಮಾಡಿದೆನು. ಹೀಗೆ ಕೆಲವು ತಾಸು ಇಲ್ಲವೆ ದಿವಸಗಳನ್ನಷ್ಟೇ ಕಳೆದಿದ್ದೇನೆಂತಲ್ಲ. ಎಷ್ಟೋ ವರ್ಷ, ಎಷ್ಟೋ ಶತಮಾನಗಳು, ಬಹುಶಃ ಅಸಂಖ್ಯ ಯುಗಗಳು ಹೀಗೇ ಹೋಗಿ ಅವೆ. ಇಂಥ ಮಿತಿಮೀರಿದ ಆಯಾಸದಿಂದಲೂ, ಅಂಗ ಚಾಪಲ್ಯದಿಂದಲೂ, ಕಳೆದ ಆಯುಷ್ಯಕ್ಕೆ ತಕ್ಕದ್ದಾದ ಭಯಂಕರ ದುಷ್ಪರಿಣಾಮವು ಬಂದು, ನಾನು ಅವೃದ್ಧನಾದೆನು. ನಾನು ಬಳ್ಳೀ ವೈಭವದಲ್ಲಿರುವಾಗ ಕ್ಷಣಮಾತ್ರದೊಳಗೆ ಇಲ್ಲದವಾಗಿ ಆದೆನು. ನಿರಂತರವಲ್ಲಿ ಸಂಚಾರ ಮಾಡುತ್ತಿರಲಾಗಿ, ಆಗಾಗ್ಗೆ ಆಕಾಶದೊಳಗಿರುವ ಹಲವು ದೊಡ್ಡ ದೊಡ್ಡ ಗೋಲಗಳ ಬದಿಯಿಂದ ಹಾಯ್ದು ಹೋಗಿದ್ದೇನೆ. ನೀವು ವಾಸವಾಗಿರುವ ಭೂಗೋಲದ ಬದಿಯಿಂದ, ಬಹಳ ವರುಷಗಳ ಪೂರ್ವದಲ್ಲಿ ಬಹುಶಃ ಹಾಯ್ದು ಹೋಗಿದ್ದೇನೆ. ಆ ಪ್ರಸಂಗದಲ್ಲಿ ನೀವು ನನ್ನನ್ನು ಎಂದಿಗೂ ನೋಡಿರಲಿಕ್ಕಿಲ್ಲ. ಅತ್ಯುತ್ಕಲಪಟ್ಟ ದುರ್ಬಿಣಿಯನ್ನು ಪಚ್ಚಿದ್ದರೂ ನನ್ನನ್ನು ನಿಮ್ಮಿಂದ ನೋಡೋಣವಾಗುತ್ತಿದ್ದಿಲ್ಲ. ಅವರೆ ನಿಮ್ಮ ಭೂಗೋಲದ ತೀರ ಸಮೀಪಕ್ಕೆ ಬಂದಪಕೂಡಲೆ ನನ್ನ ಸ್ವರೂಪವೇ ಬದಲಾಯಿತು. ವಾತಾವರಣ

ದ ದೊಡ್ಡ ಮಹಾಸಾಗರದೊಳಗೆ ಮುಳುಗಿರುವಂಥ ಭೂಮಿಯ ಮೇಲೆ ವಾಸಮಾಡುತ್ತೀರೆಂಬದನ್ನು ನೀವು ನೆನಪಿನಲ್ಲಿಡಬೇಕು. ಈ ವಾತಾವರಣವು ನಿಮ್ಮ ತಲೆಯ ಮೇಲೆ ಸುಮಾರು ಇನ್ನೂರು ಅಥವಾ ಇನ್ನೂರಕ್ಕಿಂತ ಹೆಚ್ಚು ಮೈಲುಗಳವರೆಗೆ ಹಬ್ಬಿರುತ್ತದೆ. ಮತ್ತು ಮೇಲಕ್ಕೆ ಹೋದ ಹೋದ ಹಾಗೆ ವಿರಲವಾಗುತ್ತ ಹೋಗಿರುತ್ತದೆ. ಮೇಲೆ ಆಕಾಶದೊಳಗೆ ನಿಂತು ನೋಡಿದರೆ, ನಿಮ್ಮ ಪೃಥ್ವಿಯು ಎಲ್ಲಕಡೆಗೆ ಈ ದಪ್ಪವಾದ ವಾತಾವರಣದ ಕವಚದಿಂದ ಆಚ್ಛಾದಿತವಾಗಿರುವಂಥ ದೊಡ್ಡ ಗೋಲದಂತೆ ಕಾಣುವದು; ಈ ವಾತಾವರಣದ ಅಜ್ಞೆಗೆ ವಿಸ್ತೀರ್ಣವಾದ ಬೈಲು ಉಂಟು. ಆ ಬೈಲೊಳಗೆ ನಾನು ನನ್ನ ಅದ್ಭುತವಾದ ಪ್ರದಕ್ಷಿಣೆಗಳನ್ನು ಮಾಡಿದ್ದೇನೆ. ಆ ಪ್ರದೇಶದಲ್ಲಿ ನನಗೆ ಬೇಕಾದತ್ತ ಹೋಗಲಿಕ್ಕೆ ಸ್ವಾತಂತ್ರ್ಯ ಉಂಟು. ನನಗೆ ಇರುವ ಸ್ವಾತಂತ್ರ್ಯವನ್ನು ದಟ್ಟವಾದ ಹವೆಯೊಳಗೆ ವಾಸವಾಗಿರುವ ನಿಮ್ಮಂಥವರು ಊಹಿಸುವದು ಸಹ ಅಶಕ್ಯವು. ನೀವು ಭೂಮಿಯ ಮೇಲೆ ತೀವ್ರವಾಗಿ ನಡೆಯ ಬೇಕೆಂದು ಯತ್ನ ಮಾಡಿದರೆ, ಹವೆಯಿಂದ ನಿಮಗೆ ಬಹಳ ಪ್ರತಿಬಂಧವಾಗುತ್ತದೆ. ಆ ಕಾರಣ, ಹವೆ ಇರದಿದ್ದರೆ ನಿಮ್ಮಿಂದ ಎಷ್ಟು ವೇಗದಿಂದ ಹೋಗೋಣವಾಗುತ್ತಿತ್ತೋ, ಅವಕ್ಕಿಂತ ನಿಮ್ಮ ವೇಗವು ಬಹಳ ಕಡಿಮೆಯಾಗಿದೆ. ತ್ವರೆಯಿಂದ ಹೋಗುವ ನಿಮ್ಮ ಹೊಗೆ ಬಂಡಿಗಳಿಗೆ ಹವೆಯಿಂದ ಪ್ರತಿಬಂಧವಾಗುತ್ತದೆ. ನಿಮ್ಮ ತೋಫಿನ ಗುಂಡುಗಳು ಹೋಗುವ ಟಪ್ಪೆಯು ಕಡಿಮೆಯಾಗುತ್ತದೆ. ನಿಮ್ಮಲ್ಲಿರುವ ಹವೆಯೊಳಗೆ ನನ್ನಂತೆ ಚಲಿಸುವದು ಅಸಾಧ್ಯವೇ ಸರಿ.

ಈ ಹವೆಯೇ ಕಣ್ಣಿಗೆ ನನ್ನ ನಾಶಕ್ಕೆ ಕಾರಣವಾಯಿತು.

ನಾನು ನಿಮ್ಮ ಭೂಮಿಯು ಪತ್ತ್ರರದಿಂದ ಚಲಿಸುತ್ತಿರುವವರೆಗೆ, ಅಂದರೆ ಉದುರುವ ನಕ್ಷತ್ರಗಳನ್ನು ಬಲಿಯೊಳಗೆ ಹಿಡಿಯು ಬೇಕೆಂದು ವಾತಾವರಣದ ರೂಪದಿಂದ ನೀವು ಬಡ್ಡಿರುವ ಮರಣ ಪ್ರಾಯವಾದ ಜಾಳಿಗೆಯಿಂದ ದೂರ ಇರುವವರೆಗೆ, ನನ್ನ ಕೆಲಸವೆಲ್ಲ ಸುಸೂತ್ರವಾಗಿ, ನಾನು ಸುಖದಿಂದ ಇದ್ದೆನು. ನಿಮ್ಮ ಭೂಗೋಲದ ಭಾರವು ನನಗೆ ಪತ್ತಿದಕೂಡಲೆ, ಅದರ ಆಕರ್ಷಣೆಯ ಮೂಲಕವಾಗಿ ನಾನು ಸ್ವಲ್ಪ ಅದರ ಕಡೆಗೆ ಬಲಿದನು. ಆದರೆ ನನ್ನ ಪರಮಾವಧಿಯ ವೇಗವು ನನ್ನನ್ನು ಉಳಿಸಿದ್ದರಿಂದ, ಅಪಾಯವೆನ್ನೀನೂ ಹೊಂದದೆ ನಾನು ಪಾರಾಗಿ ಹೋದೆನು. ಅಸಂಖ್ಯ ಯುಗಗಳಿಂದ ನಾನು ಆಕಾಶದೊಳಗೆ ತಿರುಗುತ್ತಿರುವಾಗ, ಪರರ ಹಿಡತಕ್ಕೆ ಬಳಗಾಗಿ ಎಷ್ಟೋ ನಿಕರದ ಹುಟ್ಟಿಕಗಳಿಂದ ನನ್ನ ಪ್ರಾಣವನ್ನು ಉಳಿಸಿಕೊಂಡೆನು. ಆದರೆ ಕಟ್ಟಕಡೆಗೆ ಬಾದಾನೊಂದು ಕಾಲದಲ್ಲಿ ಭೂಮಿಯ ಸಮೀಪಕ್ಕೆ ಮೇಲಿಂದ ಮೇಲೆ ಹೋಗುತ್ತಿದ್ದೆನು. ಈ ಭಯಂಕರ ಪ್ರಸಂಗದಲ್ಲಿ, ನಾನು ಚಲಿಸುತ್ತಾ ನಿಮ್ಮ ಭೂಗೋಲಕ್ಕೆ ಬಹಳ ಸಮೀಪವಾಗಿ ಬಂದು ಉಚ್ಚವಾದ ವಾತಾವರಣದ ಭಾಗದೊಳಗಿಂದ ಹಾಯ್ದು ಹೋಗಬೇಕಾದದ್ದರಿಂದ ಬಹು ಘೋರವಾದ ಪ್ರಳಯವು ಬಸಗಿತು. ಈ ಪ್ರಳಯ ಕಾಲವು ನಿಮಗೆ ಬಹಳಲಿಲ್ಲ. ಇದರಿಂದ ನಿಮಗೇನೂ ಅಪಾಯವಾಗಲಿಲ್ಲ. ಅದು ನನಗೆ ಮಾತ್ರ ಮುಳವಾಯಿತು. ನಾನು ನಾಶಹೊಂದಿದ್ದರಿಂದ ನಿಮಗೆ ಸಂತೋಷವಾದದ್ದಲ್ಲದೆ, ನನ್ನ ವಿಷಯದ ಜ್ಞಾನವನ್ನು ಮಾಡಿಕೊಳ್ಳುವದಕ್ಕೂ ಅವಕಾಶವಾಯಿತು. ನಾನು ನಿಮ್ಮ ಕಣ್ಣಿಗೆ ಬಿದ್ದದ್ದು ಇದೇ ಮೊದಲನೇ ಅವರ್ತಿ. ನೀವು ನನ್ನನ್ನು ನೋಡಿದ ಮೇಲೆ ನನಗೆ ಉಲ್ಕೆ ಅಥವಾ ಬೀಳುವ ನಕ್ಷತ್ರವೆಂಬ ಹೆಸರು ಇಟ್ಟಿರಿ.

ಬೂಮು ಪದಾರ್ಥದಿಂದ ಮತ್ತೊಂದಕ್ಕೆ ಢಕ್ಕೆ ಹತ್ತಿ ಆಗುವ ಅನರ್ಥಗಳು ನಿಮಗೆ ಚನ್ನಾಗಿ ಗೊತ್ತಿರುವವು. ನೆಲದಮೇಲೆ ಬಂದು ಹೊಗೆಬಂಡಿಯು ಮತ್ತೊಂದು ಹೊಗೆಬಂಡಿಗೆ ಆಗಲಿ, ಸಮುದ್ರದಮೇಲೆ ಬಂದು ಹಡಗವು ಮತ್ತೊಂದು ಹಡಗಕ್ಕೆ ಆಗಲಿ ಹಾಯುವವರಿಂದ ಎಷ್ಟೋ ಭಯಂಕರವಾದ ಅಪಘಾತಗಳು ಉಂಟಾದದ್ದನ್ನು ನೀವು ಕೇಳಿರಬಹುದು. ಈ ಮೇರೆಗೆ ಎರಡು ಜಡವಾದ ಪದಾರ್ಥಗಳ ಪರಸ್ಪರ ಆಘಾತದಿಂದ ಆಗುವ ಗಂಡಾಂತರಗಳನ್ನು ಮನಸಿನಲ್ಲಿ ತರಬಹುದು. ಆದರೆ ನಾನು ಯಾವ ಜಡಪದಾರ್ಥಕ್ಕೂ ಆಘಾತವಾಗಿ ನಾಶಹೊಂದಲಿಲ್ಲ. ನಿಮ್ಮ ವಾತಾವರಣದ ಅತ್ಯಂತ ವಿರಲವಾದ ಮೇಲಿನ ಥರಗಳಿಗೆ ಮಾತ್ರ ತಡೆಹಾಯ್ದೆನು. ಆದಾಗ್ಯೂ, ನಾನು ಅತ್ಯಂತ ವೇಗದಿಂದ ಹೋಗುತ್ತಿರುವಕಾರಣ, ನಿರ್ವಾತ ಪ್ರದೇಶದೊಳಗಿಂದ ತೀರ ವಿರಲವಾದ ಹವೆಯೊಳಗೆ ಹೋಗುವಾಗ, ಆದ ಆಘಾತವು ನನ್ನ ಪೂರಾ ನಾಶಕ್ಕೆ ಕಾರಣವಾಯಿತು.

ನಾನು ನಿಮ್ಮ ವಾತಾವರಣವನ್ನು ಸ್ವಲ್ಪಕಡಿಮೆ ವೇಗದಿಂದ ಶೇರಿದ್ದರೆ, ಅಂದರೆ ನನ್ನ ವೇಗವು ತುಬಾಕಿಯ ಗುಂಡಿನ ವೇಗಕ್ಕಿಂತ ಹೆಚ್ಚಿರದಿದ್ದರೆ, ಅಥವಾ ಅದರ ವೇಗದ ನಾಲ್ಕೈದೇ ಪಾಲು ನನ್ನ ವೇಗವಿದ್ದರೆ, ಈ ಮೇರೆಗೆ ತಡೆಹಾಯುವದರಿಂದ ನಾನು ಕೇಡಿಗೆಬಳಗಾಗುತ್ತಿದ್ದಿಲ್ಲ. ತಕ್ಕಮಟ್ಟಿಗೆ ಸುರಕ್ಷಿತವಾಗಿ ಪಾರಾಗಿ ಹೋಗಿ, ನಾನು ಇವ್ದಕ್ಕಿದ್ದ ಹಾಗೆಯೇ ಭೂಮಿಯಮೇಲೆ ಬೀಳುತ್ತಿದ್ದೆನು. ಬಹ್ಮೊಮ್ಮೆ ನಿಜವಾಗಿ ಹೀಗೆ ಆಗುವದುಂಟು. ಉಮರಿ ಬೀಳುವ ನಕ್ಷತ್ರಗಳಾವ ನಾವು ಸಾಧಾರಣವಾಗಿ ಮೇಲಿನ ವಾತಾವರಣವಲ್ಲಿಯೇ ಕರಗಿ ಹೋಗುವವು, ಭೂಮಿಯ ಮೇಲೆ ವಾಸಮಾಡುವಂಥ ನಿಮ್ಮಂಥ ಜನರ ಸುದೈವವೆನ್ನ

ಬಹುದು. ನಾವು ಮೇಲಿಂದಮೇಲೇ ಕರಗಿ ಹೋಗದೆ ಇದ್ದರೆ, ನಿಮ್ಮ ಭೂಮಿಯಮೇಲೆ ಪ್ರತಿನಿತ್ಯ ಲಕ್ಷಗಟ್ಲೆಯಿಂದ ಉದುರಿ ಬೀಳುವ ನಮ್ಮಿಂದ ನಿಮ್ಮ ಜೀವಕ್ಕೆ ಹೊಸದೊಂದು ಮುಳು ಮೇ ಆಗುತ್ತಿತ್ತು. ನಿಮ್ಮ ಸುದ್ದಿಯದಿಂದ ಬಂದು ಸೇಕಂದಿಗೆ ೨೦ ಅಥವಾ ೨೦ಕ್ಕಿಂತ ಹೆಚ್ಚು ಮೈಲು ವೇಗದಿಂದ ನಾವು ಬಿ ಡುತ್ತೇವೆ. ಇಷ್ಟು ವೇಗದಿಂದ ನಡೆದು ನಾಶ ಹೊಂದುವದು ನ ಮ್ಮ ದುರ್ದೈವವೇ ಸರಿ.

ಸ್ವತಂತ್ರದಿಂದ ತಿರುಗುವ ವಿಸ್ತೀರ್ಣವಾದ ಆಕಾಶವನ್ನು ಬಿಟ್ಟು, ವಾತಾವರಣದೊಳಗೆ ಶೇರಲು, ನನ್ನ ಅತಿವೇಗದ ಓಟ ದಿಂದ ನನಗೂ ಹವೆಗೂ ಘರ್ಷಣವಾಗಿ, ನನ್ನ ಮೈಯಲ್ಲಿ ಕಾ ವು ಹುಟ್ಟಿತು. ಬಂದು ಕಲ್ಲಿನಮೇಲೆ ಹಾಲಿವಾಳದ ಬೀಜವನ್ನು ತಿಕ್ಕಿದರೆ ಅದು ಬೆಚ್ಚಗಾಗುವದು. ಎರಡುಕಟ್ಟಿಗೆಯ ತುಂಡುಗ ಳನ್ನು ಬಂದಕ್ಕೊಂದು ತಿಕ್ಕಿದರೆ ಅವುಗಳಲ್ಲಿ ಕಾವು ಹುಟ್ಟುತ್ತ ದೆ. ನಿಮ್ಮೊಳಗೆ ಕಾಡಜನರೆನಿಸಿಕೊಳ್ಳುವವರಲ್ಲಿ ಇರುವ ಬಾ ತುರ್ಯವು ನಿಮ್ಮಲ್ಲಿದ್ದರೆ, ಆ ಕಟ್ಟಿಗೆಗಳಿಂದ ಬೆಂಕಿಯನ್ನು ಸ ಹ ಮಾಡಬಹುದು. ಕೇವಲ ಹವೆಯ ಘರ್ಷಣದಿಂದ ನಾನು ಬೆ ಚ್ಚಗಾದದ್ದು ಕೇಳಿ, ನೀವು ಆಶ್ಚರ್ಯಪಡಲಾಗದು. ತುಬಾಕಿ ಯನ್ನು ಹಾರಿಸಿಜಕೂಡಲೆ ಗುಂಡಿನ ಟಪ್ಪೆಗೆ ಹೋಗಿ, ಆ ಗುಂ ಡಿನ ಬಂದು ತುಂಡನ್ನು ಹಿಡಿದು ನೋಡಿದರೆ, ಅದು ಬೆಚ್ಚಗಾ ದದ್ದು ನಿಮಗೆ ತಿಳಿಯುವದು. ಅದು ಬಹಳ ಕಾಯಿರುವದರಿಂದ ಕೈಯಲ್ಲಿ ಹಿಡಿಯದೆ ಕೂಡಲೆ ಚಲ್ಲಿ ಬಿಡುವಿರಿ. ಇನ್ನು, ಈ ಶಕ್ತಿ ಯು ಎಲ್ಲಿಂದ ಬಂತು? ತುಬಾಕಿಯ ಕುದುರೆಯನ್ನು ಬತ್ತುವ ಪೂರ್ವದಲ್ಲಿ ಗುಂಡು ನಿಶ್ಚಯವಾಗಿ ತಣ್ಣಗಿತ್ತು. ಮದ್ದಿಗೆ ಬೆಂಕಿ ಹತ್ತಿದ್ದರಿಂದ ಅಲ್ಲಿ ಅಲ್ಪಸ್ವಲ್ಪ ಶಕ್ತಿ ಉಂಟಾವದು ನಿಜವು. ಆ

ಹೊರಕ್ಕೆ ಅದರಿಂದ ಗುಂಡು ಬಹಳ ಕಾಯಲಾರದು. ನಡುವೆ ಕಾಗದದ ದಬ್ಬರಿ ಇರುವದರಿಂದ, ಸುಡುವ ಮದ್ದಿನ ಪ್ರತ್ಯಕ್ಷ ಸಂಬಂಧವು ಗುಂಡಿಗೆ ಇರುವದಿಲ್ಲ. ತುಪಾಕಿಯು ಉಳಿಗೆಯು ಒಳಮೈಗೆ ಗುಂಡಿನ ಘರ್ಷಣೆಯಾಗುವದರಿಂದ, ಆ ಗುಂಡು ಅಂಶತಃ ಕಾಯುತ್ತದೆ. ಅವತೆ ಹವೆಯು ಘರ್ಷಣೆಯಾಗುವದರಿಂದಲೂ, ಗುಂಡಿಗೆ ತಗಲುವದರಿಂದಲೂ ಸ್ವಲ್ಪ ಶಕೆ ಉಂಟಾಗುತ್ತದೆಂಬದಕ್ಕೆ ಸಂಶಯವಿಲ್ಲ. ಅವದರಿಂದ, ನಿಮ್ಮ ವಾತಾವರಣಕ್ಕೆ ಹೋಗಿ ತಡಹಾಯಿ ಕೂಡಲೆ, ನಾನಾವರೂ ಕಾಯುವದೇನೂ ಆಶ್ಚರ್ಯವಲ್ಲ. ನಿಮ್ಮ ತುಪಾಕಿಯ ಗುಂಡಿನ ನೂರುಪಾಲು ವೇಗದಿಂದ ನಾನು ಓಡುತ್ತೇನೆಂಬ ಮಾತು ಜನ್ಮಾಗಿ ನಿನ್ನನಲ್ಲಿಡಿರಿ. ಮತ್ತು ಯಾವದೊಂದು ಪದಾರ್ಥದ ಗತಿಯನ್ನು ನಿಲ್ಲಿಸುವದರಿಂದ ಹುಟ್ಟುವ ಶಕೆಯು, ಆ ಪದಾರ್ಥದ ವೇಗವು ಹೆಚ್ಚಾದಂತೆ ಅತಿಶಯವಾಗಿ ಬೆಳೆಯುತ್ತದೆ. ಈ ಶಕೆಯು ಎಷ್ಟು ಬೆಳೆಯುತ್ತದೆಂಬದನ್ನು ನಿಮ್ಮ ಗಣಿತ ಶಾಸ್ತ್ರಜ್ಞರು ಲೆಕ್ಕಿಸಿ ಹೇಳಬಹುದು. ಶಕೆಯು ವೇಗದ ವರ್ಗದಿಂದ ಬೆಳೆಯುತ್ತದೆಂದು ಅವರು ನಿಮಗೆ ಹೇಳುವರು. ಹೀಗೆಂದರೇನೆಂಬದನ್ನು ಉದಾಹರಣದಿಂದ ಸ್ಪಷ್ಟ ಮಾಡುವೆನು. ಬಾದೇ ಗುರಿನೋಡಿ ಎರಡು ತುಪಾಕಿಗಳನ್ನು ಹಾರಿಸಿದೆವೆಂದು ತಿಳಿಯುವ. ಎರಡೂ ಗುಂಡು ಬಂದೇ ಅಳತೆಯವಿದ್ದು ಅವು ಹೋಗುವ ಅಂತರಗಳಾದರೂ ಅಷ್ಟೇ ಇರುತ್ತವೆಂತಲೂ, ಬಂದು ತುಪಾಕಿಯ ಗುಂಡು ಎರಡನೇ ತುಪಾಕಿಯೊಳಗಿನ ಗುಂಡಿನ ಎರಡಷ್ಟು ವೇಗದಿಂದ ಹೋಗುವಷ್ಟು ಮದ್ದು ಬಂದೆಯೊಳಗೆ ಜಡಿದೆವೆಂತಲೂ ತಿಳಿಯೋಣ. ಹೀಗಾದರೆ, ಸಾವಕಾಶ ಹೋಗುವ ಗುಂಡಿನ ನಾಲ್ಕಷ್ಟು ಶಕೆಯು ತೀವ್ರ ಹೋಗುವ ಗುಂಡಿನೊಳಗೆ ಹುಟ್ಟುವದೆಂದು ಗಣಿತದಿಂದ ಹೊರಡುವದು.

ಬಂದು ಗುಂಡಿನ ವೇಗದ ಮೂರಷ್ಟು ಮತ್ತೊಂದರ ವೇಗ ವಿರುವ ಎರಡು ಗುಂಡುಗಳನ್ನು ಹಾರಿಸಿದರೆ, ಅವೆರಡು ಗುಂ ಡುಗಳ ಗತಿಯು ನಿಲ್ಲುವ ಪೂರ್ವದಲ್ಲಿ ಹೆಚ್ಚು ವೇಗದಿಂದ ಹೋಗುವ ಗುಂಡಿನೊಳಗೆ, ಕಡಿಮೆ ವೇಗದಿಂದ ಹೋಗುವ ಗುಂಡಿನ ಬಂಬತ್ತು ಪಾಲು ಹೆಚ್ಚು ಶಕ್ತಿ ಹುಟ್ಟುವದು. ಅಂದ ಮೇಲೆ, ಬಂದು ಸೇಕಂದಿಗೆ ಎಂಬೈಲಿನ ನನ್ನ ವೇಗವು ಘ ರ್ಷಣದ ಮೂಲಕವಾಗಿ ಕಡಿಮೆ ಯಾಗುವದಕ್ಕೆ ಮುಂಚೆ, ಎಷ್ಟು ಅದ್ಭುತವಾದ ಉಷ್ಣತೆ ಹುಟ್ಟಿರಬಹುದೆಂಬದು ನಿಮಗೆ ಸಹಜವಾಗಿ ತಿಳಿಯುವದು. ಆ ಉಷ್ಣತೆಯಿಂದ ನಾನು ಬೆಚ್ಚಗಾದೆನಿಷ್ಟೇಅಲ್ಲ, ಆದರೆ ಕೂಡಲೆ ಕಾಯ್ದು ಕೆಂಪಗಾಗಿ, ಆ ಮೇಲೆ ಬೆಳ್ಳಗಾಗಿ, ನನ್ನಲ್ಲಿ ತೀವ್ರಕರಗದೆ ಇದ್ದ ಕಠಿಣ ಪದಾ ರ್ಥಗಳಿದ್ದರೂ, ನಾನು ಕರಗಿ ರಸವಾದೆನು. ಆದರೂ ಘರ್ಷಣ ದಿಂದ ಇನ್ನೂ ಹೆಚ್ಚಿನ ಕಾರ್ಯವಾಯಿತು. ಅದು ನನ್ನನ್ನು ಬಾಷ್ಪವಾಡಿ ಬಿಟ್ಟದ್ದರಿಂದ ನಾನು ಅದೃಶ್ಯನಾದೆನು. ಭೂಮಿ ಯಮೇಲೆ ನನ್ನಿಂದ ಅನೇಕ ಮೈಲು ಕೆಳಗೆ ವಾಸಿಸುವ ನೀ ವು ನನ್ನನ್ನು ಎಂದೂ ನೋಡಿದ್ದಿಲ್ಲ. ಇವೆಗೆ ಸ್ಪರ್ಶವಾದ ಕೂಡ ಲೆ, ಝಗ್ಗನೆ ಹೊಳೆದು ನಾನು ಬಂದು ಕ್ಷಣಹೊತ್ತು ಕಾಣಿಸಿದೆ ನು. ಇಲ್ಲದೆ ಇದ್ದರೆ, ನೀವು ನನ್ನನ್ನು ಎಂದಿಗೂ ನೋಡುತ್ತಿ ದ್ದಿಲ್ಲ. ನನ್ನನ್ನು ಕಂಡಕೂಡಲೆ, ನೀವು 'ಅಗೋ, ನೋಡು ಬೀ ಳುವ ನಕ್ಷತ್ರ' ಎಂದು ಕೂಗಿದಿರಿ. ಸೃಷ್ಟಿಯಲ್ಲಿ ಯಾವ ಪದಾ ರ್ಥವಾದರೂ ನಾಶಹೊಂದುವದಿಲ್ಲ. ಮತ್ತು ಬೆಂಕಿಯು ನನ್ನ ನ್ನು ಕರಗಿಸಿ ಬಾಷ್ಪವಾಡಿ ಬಿಟ್ಟಾಗ್ಯೂ, ವಾತಾವರಣದ ಅ ತ್ಯಂತ ಉನ್ನತವಾದ ಪ್ರದೇಶದಲ್ಲಿ ಆ ಉಗಿಯು ತಣ್ಣಗಾಗಿ, ಘನರೂಪವನ್ನು ಹೊಂದಿತು. ಆದರೂ ನನ್ನ ಮೊದಲಿನ ಸ್ವರೂ

ಜೀವೂ ರಚನೆಯೂ ತಿರುಗಿ ಉಂಟಾಗಲಿಲ್ಲ. ಆ ವಿಸ್ತೀರ್ಣವಾ
ದ ಪ್ರದೇಶದಲ್ಲಿ ವಾಯುರೂಪದಿಂದ ನಾನು ಘನರೂಪವನ್ನು
ಹೊಂದಿದೆನು. ಮತ್ತು ಈ ಸ್ಥಿತಿಯಲ್ಲಿರಲಾಗಿ, ನಾನು ಹೋದ
ಮಾರ್ಗದಲ್ಲೆಲ್ಲ ಪಸರಿಸಿದ ಸೂಕ್ಷ್ಮ ಕಣಗಳಪಟ್ಟಿಯಂತೆ ಕಾ
ಣಿಸುತ್ತಿದ್ದೆನು. ಈ ಕಣಗಳು ಕ್ರಮವಾಗಿ ಜವಯೊಳಗಿಂದ
ಭೂಮಿಯವರೆಗೆ ಇಳಿದವು. ಮನುಷ್ಯರು ಪಾಸಿಸುವ ಸ್ಥಳದಿಂ
ದಲೂ ಹೊಗೆಬಂಡಿಗಳಿಂದಲೂ ದೂರವಾಗಿ ಆಲ್ಪ್ಸ ಪರ್ವತದ
ಬರ್ಫದ ಮೇಲೆ ಸೂಕ್ಷ್ಮ ಕಣಗಳು ಬಿಟ್ಟುಗೂಡಿಸಲ್ಪಟ್ಟವೆ, ಅ
ವುಗಳಲ್ಲಿ ಎಷ್ಟೋ ನಿಃಸಂಶಯವಾಗಿ ಬೀಳುವ ನಕ್ಷತ್ರಗಳ ಚದ
ರಿಸಲ್ಪಟ್ಟ ಶೇಷಗಳೇ ಇರುತ್ತವೆ. ಇಂಥ ಕಣಗಳು ಸಮುದ್ರದೊ
ಳಗೆ ಯಾವಾಗಲೂ ಬೀಳುತ್ತವೆ. ಅವು ವಾತಾವರಣವೆಂಬ ಸಮು
ದ್ರದೊಳಗೆ ಮುಳುಗಿ, ಆ ಮೇಲೆ ಮಹಾಸಾಗರದೊಳಗೆ ಮುಳು
ಗಿದಂತೆ ಈ ಕಣಗಳನ್ನು ಅತ್ಯಂತ ಎಳವಾದ ಸ್ಥಳದಿಂದ ಆಕ
ರ್ಷಣ ಯಂತ್ರವೆಂಬ ಪಾತಾಳಗರಡಿಯಂಥ ಯಂತ್ರದ ಸಹಾಯ
ದಿಂದ ಮೇಲಕ್ಕೆ ತೆಗೆದಿದ್ದಾರೆ.

ಇಕ್ಕಿರದಂಥ ಕಿಡಿಕಿಯ ಸಣ್ಣ ಸಂದಿನೊಳಗಿಂದ ಪಾರಾಗಿ ಬಂ
ದ ಕಿರಣವು, ಅದರೊಳಗೆ ಓಡ್ಯಾಡುವ ಸೂಕ್ಷ್ಮ ಕಣಗಳ ಮೂ
ಲಕವಾಗಿ ಕಾಣುತ್ತದೆ. ಈ ಕಣಗಳು ಮುಖ್ಯವಾಗಿ ಸೇಂದ್ರಿ
ಯ ಪದಾರ್ಥಗಳಿಂದಲೇ ಹುಟ್ಟಿರುತ್ತವೆ. ಆದರೆ ಅವುಗಳೊಳ
ಗೆ ಬಮ್ಮೊಮ್ಮೆ ಉಲ್ಕೆಗಳಿಂದ ಹೊರಟ ಕಣಗಳಾದರೂ ಇರು
ತ್ತವೆ. ಈ ರಜಃಕಣಗಳು ಕ್ರಮ ಕ್ರಮವಾಗಿ ನಿಮ್ಮ ಪ್ರಸ್ತ
ಕಗಳ ಕಪಾಟುಗಳ ಮೇಲೆ ಅಗಲಿ ತಮಗೆ ಬೇಕಾದ ಬೇರೆ
ಸ್ಥಳಗಳಲ್ಲಿ ಅಗಲಿ ಕೂತುಕೊಂಡು, ಹುಡಿಯೆಂಬ ಹೆಸರು ಧರಿ
ಸುತ್ತವೆ. ಈ ಹುಡಿಯ ಅಂಜಿಕೆಯು ತಮ್ಮ ಮನೆಗಳನ್ನು ಸ್ವ

ಷ್ಟವಾಗಿ ಇಡುವಂಥ ಜನರಿಗೆ ಬಹಳೇ ಇರುತ್ತದೆ. ಸೌಧಾರ
ಣವಾದ ಹುಡಿಯೊಳಗೆ ಇರುವ ಯಾವತ್ತು ರಜಃಕಣಗಳು
ಭೂಮಿಯಿಂದಲೇ ಹೊರಟಿರುವದು ನಿಜವು. ಈ ಹುಡಿಯೊಳ
ಗಿನ ಬಹಳ ಕಣಗಳು ಕೇವಲ ಭೂಮಿಯ ಮೇಲಿನ ಪದಾ
ರ್ಥಗಳಿಂದಲೇ ಹುಟ್ಟಿರುವದರಿಂದ, ಅವುಗಳಲ್ಲಿ ವಿಲಕ್ಷಣವಾ
ದ ಗೌರವವನ್ನು ಉಂಟು ಮಾಡುವದು ಅಸಾಧ್ಯವೆಂಬದು
ನಿಜವು. ಅಪಹೆ ಅದೇ ಅಸಹ್ಯಕರವಾದ ಹುಡಿಯು ರಟ್ಟಿಯೊ
ಳಗೆ ಎಷ್ಟೋ ಖಿಸ್ಥ ಪದಾರ್ಥಗಳಿಂದ ಉದ್ಭವಿಸಿದ ರಜಃ
ಕಣಗಳು ಇರುವವರಿಂದಲೂ ಲೋಕೋತ್ತರವಾದ ಪರ್ಯ
ಟನಗಳನ್ನು ಮಾಡಿರುವವರಿಂದಲೂ ಅವು ವಿಶೇಷ ಬಹು ವಾ
ನವ ವಿಶ್ರಾಂತಿಯ ಸ್ಥಳಕ್ಕೆ ಪಾತ್ರವಿದ್ದವೆನ್ನಬಹುದು."

CORRESPONDENCE.

ಪತ್ರವ್ಯವಹಾರ.

ಮಹಾರಾಜ ರಾಜಪೂಜಿತ ರಾ. ರಾ. ಎಡಿಟರ ಕ. ಪಾ.
ಪತ್ರಿಕ ಇವರ ದಿವ್ಯ ಚರಣ ಸನ್ನಿಧಿಗೆ—

ವಿ. ವಿ. ಅಯ್ಯಾ, ಎಡಿಟರ ಮಹಾ ಪ್ರಭುಗಳೇ, ತಮ್ಮ ಕ
ರಕಮಲದೊಳುದ್ಭವಿಸುವ ಸುಂದರವಾದ ಬಾಲಾಪತ್ರಿಕದ ಜೂ
ಲೈ ತಿಂಗಳ ಸಂಚಿಕೆಯ ೧೬೬ನೇ ಪುಟವಲ್ಲಿರುವ ೯ನೇ ಪ್ರಶ್ನ
ವನ್ನು ಬಿಡಿಸಿ ಕಳುಹಿಸಿರುತ್ತೇನೆ. ದಯವಾಡಿ ಬರುವ ತಿಂಗ
ಳ ಸಂಚಿಕೆಯಲ್ಲಿ ಪ್ರಸಿದ್ಧಿಪಡಿಸಿರೆಂಬದಾಗಿ ಕೋರುತ್ತೇನೆ.

ಅ ಆ ೪ ದಿ. ಮಾಡಿದ ಮೇಲೆ ಉಳಿದ ಕೆಲಸ ಹ ೧೬ ದಿ. ಮು
ಗಿಸಿರುತ್ತಾನೆ. ಅಂದರೆ ಅ ಆ ಇವರ ಕೂಡ ಹ ನೂ ೪ ದಿ. ಇದ್ದ
ರೆ ಉಳಿದ ಕೆಲಸ ೧೨ ದಿ. ಮಾಡುತ್ತಿದ್ದನೆಂಬುವದು ಸ್ಪಷ್ಟವದೆ.
ಇವರಂತೆ ಅ ಹ ಇವರ ಕೂಡ ಆ ನೂ ೪ ದಿ. ಇದ್ದರೆ ಉಳಿದ

ಕೆಲಸ ಇ ೯ ದಿ. ಮುಗಿಸುತ್ತಿದ್ದನು. ಈ ಎರಡೂ ಪ್ರಮಾಣಗಳ ಮೇಲಿಂದ,

ಅ ಇ ಕ ಈ ಮೂರೂ ಜನರು ೪ ದಿ. ಮಾ. ಉ. ಕೆ. ಕ ನಿಗೆ ೧೦ ದಿ ಅ ಇ ಕ ಈ ಮೂ. ಜ. ೪. ದಿ. ಮಾ. ಉ. ಕೆ. ಇ ನಿಗೆ ೯ ದಿ. ಇದರಿಂದ ತಿಳಿಯುವದೇನಂದರೆ—ಯಾವದೊಂದು ಕೆಲಸವನ್ನು ಮಾಡಲಿಕ್ಕೆ ಇ ನಿಗೆ ಬೇಕಾಗುವ ದಿವಸಗಳ ೧/೨ ಪಟ್ಟು ದಿ. ಕ ನಿಗೆ.

ಅ ಇ ಇವರು ೪ ದಿ. ಮಾಡಿದ್ದರಲ್ಲಿ ಇ ನ ಬವಲು ಕ ನು ಇದ್ದರೆ ಇ ನ ೪ ದಿ. ಕೆ. ಕ ನಿಗೆ ೬ ಆರು ದಿವಸಗಳು.

ಅ ಬಬ್ಬನೇ ೪ ದಿ. ಮಾಡಿ. ಉಳಿವ. ಕೆಲಸ ಕ ಬಬ್ಬನೇ ಮಾಡಿದ್ದರೆ ೧೦ ದಿವಸಗಳು ಬೇಕಾಗುತ್ತಿದ್ದವು,

ಮೂರನೇ ಪ್ರಮಾಣವಲ್ಲಿ ಇ+ಕ ಇವರು ೩ ದಿವಸ ಮಾಡಿನ ಕೆಲಸದಲ್ಲಿ ಕ ಬಬ್ಬನೇ ಇದ್ದರೆ ೭/೨ ದಿವಸಗಳು,

ಅ ಬಬ್ಬನೇ ೪ ದಿ, ಮಾ, ಉ, ಕೆ. ಕ ೧೦ ದಿವಸವಲ್ಲಿ ಮಾ,

ಅ ಬಬ್ಬನೇ ೧೧/೨ ದಿ. ಮಾ, ಉ. ಕೆ. ಕ ೭/೨ ದಿ. ಮಾ.

ಅಂದರೆ ಅ ನ ೭/೨ ದಿ. ಕೆಲಸಕ್ಕೆ ಕ ನಿಗೆ ೧೪/೨ ದಿವಸಗಳು,

ಅ ನ ೭/೨ ದಿ. : ಕ ೧೪/೨ ದಿ. :: ಅ ೪ ದಿ.=೯ ದಿ,

೯ ದಿ. + ೧೦ ದಿ. ಹಿಂದಿನಿಂದೆ ಮಾ. = ೩೦ ದಿ. ಕ

ಕ ನ ೧/೨ ದಿ. : ಇ ೧ ದಿ. :: ಕ ನ ೩೦ ದಿ. = ೧೦ ದಿ. ಇ

ಕ ನ ೧೦ ದಿ. : ಅ ೧ ದಿ. :: ಕ ನ ೩೦ ದಿ. = ೧೫ ದಿ. ಅ

ಉತ್ತರ ಅ ೧೫ ದಿವಸ, ಇ ೧೦ ದಿವಸ, ಕ ೩೦ ದಿವಸ.

ಕಾ॥ ಚಿಕ್ಕೋಡಿ
ಜಿ॥ ಬೆಳಗಾಂವಿ
ಕ॥ ಕಬ್ಬೂರು.

ವ್ಯಂಕಾಜೀ ಭಗವಂತ ಕುಲಕರ್ಣಿ,
ವಿದ್ಯಾರ್ಥಿ ಬಾಲೆ ಕಬ್ಬೂರು,

ಕೆಳಗೆ ಬರೆದಿರುವ ಲೆಕ್ಕವನ್ನು ಬಿಡಿಸುವದಕ್ಕೆ ಪ್ರಸಿದ್ಧಿಸಬೇಕೆಂಬದಾಗಿ ಅತಿ ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇನೆ.

(೧) ಕೆಲವು ಜನರು ೭೦ ರೂಪಾಯಿ ಕೊಡುವ ಕರಾರಿನಿಂದ ಬುಬ್ಬನ ಅಂಗಡಿಯೊಳಗೆ ಫಲಹಾರ ಮಾಡುತ್ತಿರುವಾಗ ಇಬ್ಬರು ಓಡಿ ಹೋದವರಿಂದ ಉಳಿದವರಿಗೆ ಬಂದೊಂದು ರೂಪಾಯಿ ಹೆಚ್ಚಿಗೆ ಕೊಡಬೇಕಾಯಿತು. ಆದರೆ ಅವರು ಎಷ್ಟು ಜನರಿದ್ದರು?

ಮಹಾ ಪ್ರಭುಗಳೇ, ಈ ಉದಾಹರಣಕ್ಕೆ ಸ್ಥಳವನ್ನೀಯಬೇಕೆಂದು ಬೇಡಿಕೊಳ್ಳುತ್ತೇನೆ. ಇಂತಿ ವಿನ್ನಹ.

ತಾ. ೧೪—೪—೯೦ ಇಸವಿ.

ರಾವಸಾ. ಕನ್ನಡ ಪಾಲಾಪತ್ರಿಕವ ಎಡಿಟರ ಪ್ರಾಂತ ಪಕ್ಷಿಣಭಾಗ ಇವರ ಚರಣ ಸನ್ನಿಧಿಗೆ.—

ವಿ. ವಿ. ಅಯ್ಯಾ, ಎಡಿಟರ ರಾವಸಾಹೇಬರವರೇ, ತಮ್ಮ ಹಸ್ತಕಮಲದಲ್ಲಿ ಉದ್ಭವಿಸುವಂಥಾ ಅತಿಮನೋಹರವಾದ ಪಾಲಾಪತ್ರಿಕದಲ್ಲಿ, ನಾನು ಕೆಳಗೆ ಬರದಂಥಾ ಬಗಟವನ್ನು ಮುಂದಿನ ತಿಂಗಳ ಪಾಲಾಪತ್ರಿಕದಲ್ಲಿ ಛಾಪಿಸಿ ಪ್ರಸಿದ್ಧ ಪಡಿಸುವಿರೆಂದು ಅತಿ ಆಶೆಯುಳ್ಳವನಾಗಿದ್ದೇನೆ. ದಯಮಾಡಿ ಸ್ವಲ್ಪ ಸ್ಥಳ ಕೊಡಬೇಕು.

೧೫ ಜನರು ಒಳ್ಳೇ ಗೃಹಸ್ಥರು ದೇಶಾಂತರಕ್ಕೆ ಹೋಗುತ್ತಿರಲು, ದಾರಿಯಲ್ಲಿ ಸಾಯಂಕಾಲವಾಗಿ ಬಹಳ ಮಳೆಸುರಿಯಿತು. ಆಗಲವರು ಸುತ್ತು ಮುತ್ತು ನೋಡುವಷ್ಟರಲ್ಲಿ ಬಂದು ಧರ್ಮಶಾಲೆಯನ್ನು ಕಂಡು, ಅಲ್ಲಿಹೋಗಿ ಬೆಚ್ಚಗೆ ಕೂತು ಕೊಂಡರು. ಸ್ವಲ್ಪರಾತ್ರಿಯಾದ ಬಳಿಕ ಮತ್ತೊಂದು ದಾರಿಯಿಂದ ಹದಿನೈದು ಜನರು ಕಳ್ಳರು ಅದೇ ಧರ್ಮಶಾಲೆಗೆ ಬಂದರು.

ಈ ಮೇರೆಗೆ ಕಳ್ಳರೂ ಬಳ್ಳೇಗೃಹಸ್ಥರೂ ಕೂಡಿ ಮೂವತ್ತು ಜನರು ಬೆರತುಕೊಂಡು, ಅಲ್ಲಿಕಿಬಿಟ್ಟು ಮಾಡಿ, ಅವರಸುತ್ತು ಮುತ್ತಲು ವರ್ತುಳಾಕಾರವಾಗಿ ಕೂತಿರಲು, ಅಲ್ಲಿ ಒಬ್ಬ ಹಣಗಾರನು ಬೇರೆ ಐದು ಮಂದಿಯನ್ನು ತನ್ನ ಸಂಗಡಕರಕೊಂಡು ಆಕಸ್ಮಾತ್ತಾಗಿ ಬಂದನು. ಅವನೂ ಅವನ ಸಂಗಡಿಗರೂ ಬಹಳಹಸಿವಕಾರಣ, ಅವನು ಆ ಮೂವತ್ತು ಜನರಿಗೆ—ವಯಮೂಡಿ ನಿಮ್ಮಹತ್ತರ ಏನಾದರೂ ಆಹಾರ ವಿದ್ದರೆ ಕೊಡಿರೆಂದು ಬೇಡಲಾಗಿ, ಬಳ್ಳೇ ಗೃಹಸ್ಥರಲ್ಲಿ ಕೆಲವರು ತಾವು ಪ್ರಯಾಸಕ್ಕೆ ಹೊರಡುವಾಗ ಮನೆಯಿಂದ ಕಟ್ಟಿತ್ತಂದ ಬುತ್ತಿಯನ್ನು ಅವರಿಗೆ ಕೊಟ್ಟರು. ಆಗಲಾಧನಿಕನು ಭೋಜನಮಾಡಿ ಸಂತುಷ್ಟನಾಗಿ ನಾನು ನಿಮ್ಮ ಹದಿನೈದು ಜನರಿಗೆ ಐದೈದು ರೂಪಾಯಿ ಬಕ್ಷೀಸು ಕೊಡುವೆನು; ಆದರೆ ನೀವು ಹೀಗೆ ಕೂತಿರಲಾಗಿ ನಾನು ಎಂಟುಮಂದಿಯನ್ನು ಎಣಿಸಿಬಿಟ್ಟು ಬೀಬತ್ತನೆಯವನಿಗೆ ರೂಪಾಯಿ ಕೊಟ್ಟ ಕೂಡಲೆ ಅವನು ಎದ್ದು ಹೋಗಬೇಕು ಅಂದನು. ಅವಕ್ಕವರು ಬಡಂಬಟ್ಟವ್ದರಿಂದ ಹಣಗಾರನು ಆ ಪ್ರಕಾರ ಮಾಡಲಾಗಿ ಉಳಿ ಮಂದಿ ಬಳ್ಳೇಗೃಹಸ್ಥರಿಗೆ ಬಕ್ಷೀಸುದೊರಕಿತು. ಆ ಮೂವತ್ತು ಮಂದಿ ಯಾವ ಪ್ರಕಾರವಾಗಿ ಕೂತಿದ್ದರು?

ನನ್ನ ಬಾಂಧವರೂವ ಮಾಸ್ತರ ಜನರು ಮೇಲೆಬರೆವ ಬಗಟನನ್ನು ಬಿಡಿಸುವರೆಂಬ ತುಂಬಾ ನಂಬಿದ್ದೇನೆ. ಎಡಿಟರರಾಯರೇ, ಪತ್ರ ವಿಸ್ತಾರವಾಯಿತು. ಅದಕ್ಕೆ ಉಪಾಯವಿಲ್ಲ. ಯಾಕಂವರೆ, ವಿಸ್ತಾರ ಬರಿಯದೆ ಸಂದೇಹ ನೀಗುವದಿಲ್ಲ. ತಮ್ಮ ಭೆಟ್ಟಯ ಲಾಭ ಬಹುದಿವಸಕ್ಕೆ ಅದನ್ನು ನೋಡಿ ಅತ್ಯಾ

ನೆಂದವಾಯಿತು. ಲೋಭವಿರಲಿ, ಸ್ವಾಮಿ. ನಾನು ನನ್ನ ನಿತ್ಯ ದ ಕೆಲಸಕ್ಕೆ ತೊಡಗುತ್ತೇನೆ. ತಾರೀಖು ೦೮—೩—೯೦ ಇಸವಿ

ಮುಕ್ಕಾಮು ಕಲ್ಲೂರ ತಾ. ಧಾರವಾಡ ಜಿ. ಧಾರವಾಡ } ಸಹಿ ಕೃಷ್ಣಾಜಿ ವಾಸುದೇವ ಪಂಥರಿ ಹೆಡಿನೂಸ್ತರ, ಕಲ್ಲೂರ.

DHARWAR TRAINING COLLEGE, TERMINAL EXAMINATION QUESTIONS IN NATURAL PHILOSOPHY HISTORY & GEOGRAPHY.

ಧಾರವಾಡ ಟ್ರೇನಿಂಗ ಕಾಲೇಜದ ಷಾಣ್ಮಾಸಿಕ ಪರೀಕ್ಷೆಯ ಪ್ರಶ್ನೆಗಳು. ಪದಾರ್ಥ ವಿಜ್ಞಾನಶಾಸ್ತ್ರ.

೧ನೇ ವರ್ಷದ ವರ್ಗ.

೧. ಪದಾರ್ಥ ವಿಜ್ಞಾನ ಶಾಸ್ತ್ರವೆಂದರೇನು? ಅದನ್ನು ಕಲಿಯುವದರಿಂದ ಲಾಭವೇನು? ಸಾಂಸಿದ್ಧಿಕ ಧರ್ಮ, ಪ್ರತಿಧ್ವನಿ, ಘರ್ಷಣ, ಪ್ರಕೃತಿ, ದೃಢತ್ವ, ಗುರುತ್ವಮಧ್ಯ, ಗುರುತ್ವಾಕರ್ಷಣ, ವಿಶಿಷ್ಟಗುರುತ್ವ, ಸಪ್ಪಳ, ಸ್ವರ ಇವುಗಳ ವಾಖ್ಯೆಗಳನ್ನು ಬರೀರಿ.

೨. (ಅ). ಪ್ರತಿ ಒಂದು ಚೌರಸ ಇಂಚಿನ ಮೇಲೆ ವಾತಾವರಣದ ಭಾರವು ಎಷ್ಟು ಬೀಳುತ್ತದೆ? ಸಾಧಾರಣವಾಗಿ ಮನುಷ್ಯನ ಮೈಮೇಲೆ ವಾತಾವರಣದ ಭಾರವು ಎಷ್ಟು ಬೀಳುತ್ತದೆ? ಅದನ್ನು ಅವನು ಹ್ಯಾಗೆ ಸಹಿಸುತ್ತಾನೆ?

(ಬ). ವಾಸ್ತವಿಕ ತರಾಸಿನ ಲಕ್ಷಣಗಳು ಯಾವವು?

೩. ಭಾರ ಮಾಪಕ ಯಂತ್ರದ ರಚನೆಯನ್ನೂ ಉಪಯೋಗನನ್ನೂ ಅಕೃತಿ ಸಹಿತ ವಿವರಿಸಿರಿ.

೪. (ಅ). ಪದಾರ್ಥಗಳ ಕರ್ತೃತ್ವ ಶಕ್ತಿಯು ಯಾವ ಪ್ರಮಾಣದಿಂದ ಬೆಳೆಯುತ್ತದೆ? ಅದು ಯಾವ ಯಾವ ರೂಪಗಳಿಂದ ನಮ್ಮ ದೃಷ್ಟಿಗೆ ಬೀಳುತ್ತದೆ?

(ಬ). ನಿರ್ವಾತ ಪ್ರದೇಶದೊಳಗೆ ಮಾಡಿದ ಧ್ವನಿಯು ನನಗೆ

ಕೇಳಿಸುವದೋ? ಯಾಕೆ? ಧ್ವನಿಯು ಹವೆಯು ಹೊರ್ತು ಬೇರೆ ಯಾವ ಯಾವ ಪದಾರ್ಥಗಳ್ಗೊಳಗಿಂದ ಎಷ್ಟೆಷ್ಟು ವೇಗದಿಂದ ಹೋಗುತ್ತದೆಂಬ ಬಗ್ಗೆ ನಿಮಗೆ ಗೊತ್ತಿದ್ದ ಮಟ್ಟಿಗೆ ಬರೀರಿ.

೫. ಉಷ್ಣತಾಮಾಪಕ ಯಂತ್ರದ ರಚನೆಯನ್ನೂ ಉಪಯೋಗವನ್ನೂ ಆಕೃತಿ ಸಹಿತ ವಿವರಿಸಿರಿ.

೬. ವಿದ್ಯುಲ್ಲತೆಯಲ್ಲಿ ಎರಡು ಪ್ರಕಾರಗಳು ಯಾವವು? ಪ್ರಯೋಗ ಬರೆದು ಸ್ಪಷ್ಟ ಮಾಡಿರಿ. ವಿದ್ಯುದ್ವಾಹಕ, ವಿದ್ಯು ದ್ರೋಧಕ ಗಳಂದರೇನು? ಅವು ಯಾವವು?

೭. ಆರೋಗ್ಯಪುಷ್ಟಿ ಮನುಷ್ಯನಿಗೆ ಸಾಧಾರಣವಾಗಿ ಪ್ರತಿ ಒಂದು ತಾಸಿಗೆ ಎಷ್ಟು ಶುದ್ಧ ಹವೆ ಬೇಕಾಗುತ್ತದೆ?

೮. ನಾವು ನಿದ್ರೆಯ ವಿಷಯದಲ್ಲಿ ಯಾವ ಯಾವ ನಿಯಮಗಳನ್ನು ಅನುಸರಿಸಬೇಕು? ಒಮ್ಮೊಮ್ಮೆ ನಿದ್ರೆ ಬರುವದಿಲ್ಲ, ಅದಕ್ಕೆ ಕಾರಣವೇನು? ನಿದ್ರೆಬರಲಿಕ್ಕೆ ಉಪಾಯವೇನು?

೯. ವ್ಯಾಯಾಮ ಮಾಡುವದರಿಂದ ಆಗುವ ಲಾಭಗಳು ಯಾವವು?

ಎನೇ ವರ್ಷದ ಪರೀಕ್ಷೆ.

೧. ಕೆಳಗಿನ ಶಬ್ದಗಳ ವ್ಯಾಖ್ಯೆಗಳನ್ನು ಬರೀರಿ.

ಅಣು, ಪರಮಾಣು, ಸ್ಫಟಿಕ, ಸಲ್ಲಗ್ನತಾಕರ್ಷಣಶಕ್ತಿ, ಜಡತ್ವ, ಅಧಾತುರೂಪತತ್ವ, ಕಠಿಣತ್ವದಶ್ರೇಢಿ, ತಂತುಭವನಶೀಲತೆ, ಪ್ರೇರಣೆಯುಚಾಲಕತ್ವಪರಿಮಿತಿ, ದಿಗ್ರೇಷೆ.

೨. (ಅ). ಉಲ್ಕಾಸ್ಟನನು ಅತ್ಯಂತ ಸೂಕ್ಷ್ಮನಾದ ತಂತಿಯನ್ನು ಹಾಗ್ಯೆ ಮಾಡಿದನು?

(ಆ). ಒಂದು ಖನಿಜವು ಪುಷ್ಯರಾಗದಿಂದ ಕಚ್ಚು ಹೊಂದುತ್ತದೆ; ಬೆಣಚಿಗಲ್ಲಿನ ಮೇಲೆ ಕಚ್ಚು ಕೆಡವುತ್ತದೆ. ಅದರ ಕಠಿಣತ್ವ ವೆಷ್ಟು?

(ಕ). ಒಂದು ಬೀಗದ ಕೈಯ ಲಳಿಗೆಯ ತುದಿಯನ್ನು ತುಟಿಗೆ ಹಚ್ಚಿ ಹವೆ ಎಳಕೊಂಡರೆ ಅದು ತುಟಿಗೆ ಯಾಕೆ ಅಂಟಿಕೊಳ್ಳುತ್ತದೆ?

(ಡ). ನಿತ್ಯವಾಯುರೂಪದಲ್ಲಿಯೇ ಇರುತ್ತವೆಂದು ಒಳಗಡೆಯಲ್ಲಿ ತಿಳಿಯಲ್ಪಟ್ಟ ಪದಾರ್ಥಗಳು ಯಾವವು? ಅವುಗಳನ್ನು

ಈಗ ಘನ, ಪ್ರವಾಹಿ ಗೂಪಗಳಲ್ಲಿ ತರಬಹುದೋ? ಹ್ಯಾಗೆ?

೩. (ಅ). ನಮಗೆ ಗೊತ್ತಾಗಿರುವ ಮೂಲ ತತ್ವಗಳು ಎಷ್ಟು? ಅವುಗಳ ವರ್ಗಗಳು ಯಾವವು? ಐದೈದು ಉದಾಹರಣಗಳನ್ನು ಕೊಡಿರಿ.

(ಬ). ಕಾರ್ಬೊನ್ನು ಕಾಲಾಂತರದಿಂದ ಯಾವ ಯಾವ ರೂಪಗಳನ್ನು ಹೊಂದುತ್ತದೆ?

(ಕ). ಜಲಜಿ ಗುಣಗಳನ್ನು ವಿವರಿಸಿರಿ, ಅಜನ್ನು ಕೃತಿಯಿಂದ ಹ್ಯಾಗೆ ತೆಗೆಯು ಬಹುದುಹೇಳಿರಿ.

೪. ೩೫ ಘನಘೂಟು ಆಕಾರವಾನದ ಒಂದು ಕಲ್ಲು ಹವೆಯಲ್ಲಿ ತೂಗಿದೆ. ಅದರ ತೂಕವು ನಿರ್ವಾತ ಪ್ರದೇಶದಲ್ಲಿ ಎಷ್ಟು ಹೆಚ್ಚು ಆಗುವದು?

೫. ಒಂದು ಅಗ್ನಿವಿಮಾನದೊಳಗೆ ೪೦೦೦ ಘನಘೂಟು ಹವೆ ಹಿಡಿಸುತ್ತದೆ. ಇದರ ಕ್ಷಿನೇ ಪಾಲು ಹೊರಗೆ ಹೋಗುವವರೆಗೆ ಅದನ್ನು ಕಾಸಲಾಗಿ, ಅದು ಎಷ್ಟು ಶಕ್ತಿಯಿಂದ ಮೇಲಕ್ಕೆ ಏರುವದು? ವಿಮಾನವಾಹನಗಳ ತೂಕ ೧೪೦೦ ಪೌಂಡುಅದೆ.

೬. ಪ್ರೇರಣಾ ಸಮಾಂತರ ಭುಜಚೌಕೋನದ ವ್ಯಾಖ್ಯೆಯನ್ನು ಬರೆದು ಸಿದ್ಧಾಂತವನ್ನು ಆಕೃತಿ ಸಹಿತ ಸಿದ್ಧ ಮಾಡಿರಿ.

೭. ೨೪ ಪೌಂಡಿನವೆರಡು ಸಮಾನ ಪ್ರೇರಣೆಗಳು ೬೦ ಅಂಶದ ಕೋನಮಾಡಿ ಒಂದು ಜಡ ಕಣದ ಮೇಲೆ ಕಾರ್ಯ ನಡಿಸುತ್ತವೆ. ಅವುಗಳ ಫಲಿತ ಪ್ರೇರಣೆ ಎಷ್ಟು?

೮. ಒಂದು ವಾಯು ಭಾರ ಮಾಪಕ ಯಂತ್ರದೊಳಗಿನ ಪಾರಜಪೃಧಾರವಾಡದಲ್ಲಿ ೨೪.೫ ಇಂಚಿನ ಮೇಲೆ ನಿಲ್ಲುತ್ತದೆ. ಉಟ್ಟಕೊಮುಂಡಿನಲ್ಲಿ ೨೬.೦ ಇಂಚಿನ ಮೇಲೆ ನಿಲ್ಲುತ್ತದೆಂದು ತಿಳಿದರೆ, ಉಟ್ಟಕೊಮುಂಡಪ ಧಾರವಾಡಕ್ಕಿಂತ ಎಷ್ಟು ಎತ್ತರ ಇರುವದು?

ಕಿನೇ ವರ್ಷದ ವರ್ಗ.

೧. ಸೃಷ್ಟಿಯ ಶಕ್ತಿಗಳು ಯಾವವು? ಅವುಗಳ ವ್ಯಾಖ್ಯೆಗಳನ್ನು ಬರೀರಿ.

೨. (ಅ). ಪ್ರೇರಣಾ ತ್ರಿಕೋಣ ಸಿದ್ಧಾಂತದ ಪ್ರತಿಜ್ಞೆ ಬರೆದು ಅದನ್ನು ಆಕೃತಿ ಸಹಿತ ಸಿದ್ಧ ಮಾಡಿರಿ.

(ಬ). ಇಂದ್ರ ಧನುಷ್ಯನನ್ನು ಸ್ಪಷ್ಟವಾಗಿ ವಿವರಿಸಿರಿ.

(ಕ). ರಸಾಯನ ಪ್ರಯೋಗಗಳಿಗೆ ಅವಶ್ಯವಾದ ಮೂರು ವರ್ಗಗಳ ಮಿಶ್ರ ಪದಾರ್ಥಗಳ ಲಕ್ಷಣಗಳನ್ನು ವಿವರಿಸಿರಿ.

೯. (ಅ). ಉಗಿಕುದುರೆ, 'ಶಕ್ತಿಯ ಸಂಬಂಧದಿಂದ ಆಗುವ ಲಾಭವು ವೇಳೆಯ ಸಂಬಂಧದಿಂದ ಹಾನಿಯೆನಿಸುತ್ತದೆ,' ಸೊನ್ನೆ, ಯಾಂತ್ರಿಕ ಲಾಭ, ಅಂದರೇನು?

(ಬ). ಸಂಯುಕ್ತ ಮುಲಸೂತ್ರವನ್ನಾಗಲಿ ಸಂಯುಕ್ತ ಗಡಗಡಿಯನ್ನಾಗಲಿ ಆಕೃತಿ ಸಹಿತ ವಿವರಿಸಿ, ಅದರಲ್ಲಿ ಯಾಂತ್ರಿಕ ಲಾಭವನ್ನು ಹ್ಯಾಗೆ ಹೆಚ್ಚು ಮಾಡಿಕೊಳ್ಳಬಹುದು ಹೇಳಿರಿ.

೮. ಕಾಲೇಜದಿಂದ ಮಾರ್ಕೆಟ್ಟಿನವರೆಗೆ ಎಂಕ್ಕಿಗರಂತೆ ಇಳಕಲದೆ. ಇದರ ಮೇಲೆ ೫೦ ಮಣ ಅಕ್ಕಿ ಹೇರಿದ ಎರಡೆತ್ತಿನ ಬಂಡಿ ಮೇಲ್ಗಡೆಗೆ ನಡೆದದೆ. ಒಜ್ಜೆಯ ೫೦ ಶಕ್ತಿಯು ಘರ್ಷಣಕ್ಕೆ ಬೇಕಾದರೆ, ಪ್ರತಿ ಒಂದು ಎತ್ತು ಎಷ್ಟು ಶಕ್ತಿಯಿಂದ ಎಳೆಯ ಬೇಕು?

೫. ಒಬ್ಬ ಅಂಗಡಿಕಾರನು ಒಬ್ಬ ಗೃಹಸ್ಥನಿಗೆ ೧೦:೧೧ ಇಂಚು ಭುಜಗಳುಳ್ಳ ಒಂದು ಖೊಟ್ಟ ತಕ್ಕಡಿಯಿಂದ ಹತ್ತು ಸೇರು ಸಕ್ಕರಿಯನ್ನು ತೂಗಿ ಕೊಟ್ಟನು. ಆ ಗೃಹಸ್ಥನು ಅರ್ಧ ಒಂದು ಪರಡಿಯೊಳಗೆ, ಅರ್ಧ ಎರಡನೇ ಪರಡಿಯೊಳಗೆ ಹಾಕಿಸಿ ತೂಗಿಸಿಕೊಂಡನು. ಇದರಿಂದ ಅವನಿಗೆ ಸರಿಯಾದ ತೂಕದ ಸಕ್ಕರೆ ಬಂತೊ? ಬರದಿದ್ದರೆ ಯಾರಿಗೆ ಲುಕಸಾನು ಆಯಿತು? ಎಷ್ಟು?

ಇತಿಹಾಸ ಭೂಗೋಲ.

೧೯೧೦ ವರ್ಷದ ವರ್ಗ.

೧. ಬೇರೆ ಬೇರೆ ದೇಶಗಳ ಭೂಮಿಯ ಸ್ವರೂಪದಿಂದ ಅಲ್ಲಿರುವ ಜನರ ನಡತೆಗಳು ಬೇರೆ ಬೇರೆ ಯಾಗುತ್ತವೆ, ಎಂಬ ಸೂತ್ರದ ನಿಜತ್ವದ ಬಗ್ಗೆ ಉದಾಹರಣಗಳನ್ನು ಕೊಟ್ಟು ಬರೀರಿ.

೨. ವೇದಗಳ ಮೇಲಿಂದ ಆರ್ಯರು ಆ ಕಾಲಕ್ಕೆ ಎಷ್ಟು ನುಟ್ಟಿಗೆ ತಿದ್ದುಪಾಟ ಹೊಂದಿದ್ದರೆಂದು ತಿಳಿಯುತ್ತದೆ? ಸ್ಪಷ್ಟವಾಗಿ ವಿವರಿಸಿರಿ.

೫. ಶೆಂಕರಾಚಾರ್ಯ, ಚೈತನ್ಯ, ಕಬೀರ, ಅಕಬರ, ಇವರ ಚರಿತ್ರಗಳನ್ನು ಬರೀರಿ.

೮. ವಿಜಯನಗರದ ರಾಜ್ಯದ ಇತಿಹಾಸವನ್ನು ನಿಮಗೆ ಗೊತ್ತಿದ್ದ ಮಟ್ಟಿಗೆ ಬರೀರಿ.

೫. ಹಿಂದುಸ್ಥಾನದೊಳಗಿನ ಸಮುದ್ರ ತೀರಕ್ಕೆ ಹೊಂದಿರುವ ಏತದ್ದೇಶೀಯ ಸಂಸ್ಥಾನಗಳನ್ನೂ, ಇಂಗ್ಲಿಷರ ಹೊರ್ತು ಇತರ ಪರದೇಶಸ್ಥರ ಸ್ಥಳಗಳನ್ನೂ ಬರೆದು, ಅಲ್ಲಿ ಯಾವ ಯಾವ ಜಾತಿಯ ಜನರು ಅಥವಾ ಯಾವ ಯಾವ ಜನಾಂಗದವರು ಆಳುತ್ತಾರೆ ಹೇಳಿರಿ.

೬. ಪಾಸಿಫಿಕ್ ಮಹಾಸಾಗರದ ನಕಾಶೆ ನಿಮ್ಮ ಮುಂದೆ ಇದೆ ಎಂದು ತಿಳಿದು ಅದರ ಪಶ್ಚಿಮುಕ್ಕಿರುವ ಶಾಖೆಗಳನ್ನೂ ದೇಶಗಳನ್ನೂ ಬರೀರಿ. . . . . .

೭. ಮುಂಬಯಿ ಇಲಾಖೆಯ ನಕಾಶೆಯನ್ನು ಅಕ್ಷಾಂಶ ರೇಖಾಂಶ ಸಹಿತ ತೆಗೆದು, ಅದರೊಳಗೆ ಕೆಳಗಿನ ಸ್ಥಳಗಳನ್ನು ಬರೀರಿ. ಸೊಲ್ಲಾಪೂರ, ಅಹಮ್ಮದನಗರ, ಸುರತ, ಅಹಮ್ಮದಾಬಾದ, ಭೂಜ, ಬಡೋದೆ, ಜಾಕೋಬಾಬಾದ, ಭಟಕಳ, ಯಾವದಾದರೊಂದು ಪರ್ವತ, ಬೇರೆ ಬೇರೆ ದಿಕ್ಕಿಗೆ ಹರಿಯುವ ಎರಡು ನದಿಗಳು, ಒಂದು ಲೋಹ ಮಾರ್ಗ (ಇಲಾಖೆಯ ಒಂದು ತುದಿಯಿಂದ ಮತ್ತೊಂದು ತುದಿಗೆ ಹೋಗುವಂಥಾದು).

ಅಸಾಮು ಪ್ರಾಂತವನ್ನಾಗಲಿ ಅಯೋಧ್ಯಾ ಪ್ರಾಂತವನ್ನಾಗಲಿ ನಿಮ್ಮ ಕೈಲಾದ ಮಟ್ಟಿಗೆ ಪೂರಾ ವಿವರಿಸಿರಿ.

ಒಂಟೆಗಳು, ಒಣಗಿದ ಫಲಗಳು, ಕುದುರೆ, ಸ್ಪಂಜು, ಅಫು, ಮುತ್ತು, ಮೆಣಸು, ಯಾಲಕ್ಕಿ ಇವುಗಳ ಬಗ್ಗೆ ಹೆಸರಾದ ದೇಶಗಳು ಇಲ್ಲವೆ ಪ್ರಾಂತಗಳು ಯಾವವು?

(ಬ). ಕೆಳಗೆ ಬರೆದ ಸ್ಥಳಗಳು ಏನು ಅವೆ? ಎಲ್ಲ ಅವೆ? ಯಾತಕ್ಕೋಸ್ಕರ ಪ್ರಸಿದ್ಧ ಅವೆ?

ಬಟೆನಾ, ಜನು, ಇಲಿಯಾ, ಗೋಬೀ, ಶಾಂಘಾಯ, ಬೈಕಲ್, ರಾಸ್‌ಅಲ್‌ಹದ್,

೭ನೇ ವರ್ಷದ ವರ್ಗ.

೧. ದೊಡ್ಡ ಅಲ್ಫ್ರೆಡ್, ಊಲ್ಸ್ಲಿ, ಕ್ರೌಮುವೆಲ್ ಇವರ ಚರಿತ್ರೆಗಳನ್ನು ಬರೀರಿ.

೨. ೪ನೇ ಹೆನ್ರಿ ಅಥವಾ ಎಲಿಜಾಬೆತ್ ಇವರ ಆಳಿಕೆಯಲ್ಲಿ ನಡೆದ ಮುಖ್ಯ ಸಂಗತಿಗಳನ್ನು ಬರೀರಿ.

೩. ಧರ್ಮಕ್ರಾಂತಿಯ ಬಗ್ಗೆ ನಿಮಗೆ ಗೊತ್ತಿದ್ದದ್ದನ್ನು ಬರೀರಿ.

೪. ದೊಡ್ಡ ಸನದು, ಹಕ್ಕಿನ ಅರ್ಜಿ, ಎಂದು ಅದವು? ಯಾಕೆ ಆದವು? ಇವುಗಳಲ್ಲಿ ಇರುವ ಕಲಮುಗಳು ಯಾವವು?

೫. ಇಂಗ್ಲಂಡ ದೇಶದ ನಕಾಶೆಯನ್ನು ತೆಗೆದು ಅದರಲ್ಲಿ ದೊಡ್ಡ ದೊಡ್ಡ ಪಟ್ಟಣಗಳನ್ನೂ ಹೊಳೆಗಳನ್ನೂ ಬರೀರಿ.

೬. ಬ್ಲಾಯ್, ಟೈಬರ್ನ್, ಪಾಂಫ್ರೆಟ್, ಅಜಿನ್‌ಕೋರ್ಟ್, ಬಾರ್ನೆಟ್, ಪಿಂಕೀ, ನೇಸಬಿ, ಡನ್‌ಬಾರ, ಪೋರ್ಟ್‌ಲಂಡ, ಟ್ವೀಡ, ಡಂಡೀ, ಗ್ಲಾಸಗೋ, ಯಾರಮೌಥ, ಲ್ಯಾನಾರ್ಕ್, ಓಖ್ಯಾನು ಇವು ಏನು? ಎಲ್ಲಿ ಅವೆ? ಯಾತಕ್ಕೋಸ್ಕರ ಹೆಸರಾಗಿವೆ?

೭. ಇಂಗ್ಲಂಡದಲ್ಲಿ ಉಣ್ಣೀ ಅರಿವೆ, ಕಬ್ಬಿಣದ ಸಾಮಾನು ನಿದ್ಯಾಲಯ, ಇವುಗಳ ಸಂಬಂಧದಿಂದ ಹೆಸರಾದ ಊರುಗಳನ್ನು ಬರೆಯಿರಿ.

೮. ಇಂಗ್ಲಂಡ ಸ್ಕಾಟಲಂಡ ದೇಶಗಳಲ್ಲಿರುವ ಸರೋವರಗಳನ್ನೂ ಹೊಳೆಗಳನ್ನೂ ಬರೆಯಿರಿ.

೮ನೇ ವರ್ಷದ ವರ್ಗ.

೧. ದೊಡ್ಡ ಅಲೆಕ್ಸಾಂಡರನು ತೀರಿದ ಮೇಲೆ ಅವನ ರಾಜ್ಯದ ಹಾಡು ಏನಾಯಿತು?

೨. "ಗ್ರೀಸ ಮತ್ತು ರೋಮ ಇವುಗಳ ನಡುವೆ ನಿಕಟ ಸಂಬಂಧವಿತ್ತು" ಈ ವಾಕ್ಯದ ಅರ್ಥವನ್ನು ವಿವರಿಸು.

೩. ಅಸ್ಟ್ರಿಯೇಜೀಸ್, ನೆಬುಕಡನೇಜ್ಜರ, ಆಟ್ಟೊ, ಇವರ ಬಗ್ಗೆ ನಿನಗೆ ಗೊತ್ತಿದ್ದದ್ದನ್ನು ಬರೆಯಿರಿ.

೪. ಗ್ರೀಕರಿಗೂ ಪರ್ಸಿಯನ್ನರಿಗೂ ಆದ ಜಗಳವನ್ನು ವಿವರಿಸಿರಿ.

೫. ರಶಿಯೆ, ಫ್ರಾನ್ಸ್ ಮತ್ತು ಚೀನ, ಈ ದೇಶಗಳೊಳಗಿನ ಪರ್ವತಗಳನ್ನೂ ಅಲ್ಲಿಯ ಹವೆ, ವ್ಯಾಪಾರದ ಸರಕುಗಳು, ರಾಜ್ಯಪದ್ಧತಿ, ಧರ್ಮಗಳನ್ನೂ ವಿವರಿಸಿರಿ.

೬. ಭೂಮಧ್ಯ ಸಮುದ್ರ, ಕೆಪ್ಪು ಸಮುದ್ರ, ಬಾಲ್ಟೆಕ್ ಸಮುದ್ರ, ಇವುಗಳ ನೀರು ಸಾಧಾರಣ ಸಮುದ್ರ ನೀರಿನಷ್ಟು ಉಪ್ಪು ಇರುವದೋ? ಕಾರಣ ಸಹಿತ ಉತ್ತರ ಬರೆಯಿರಿ. ಈ ಸಮುದ್ರಗಳ ಶಾಖೆಗಳು ಯಾವವು? ಇವಕ್ಕೆ ಪೂರ್ವ ದಿಕ್ಕಿನಿಂದ ಯಾವ ನದಿಗಳು ಕೂಡುತ್ತವೆ?

೭. (ಅ) ನಮಗೆ ಮಳೆ ಯಾವ ದಿಕ್ಕಿನಿಂದ, ಯಾವ ತಿಂಗಳಲ್ಲಿ ಬರುತ್ತದೆ? ಮದ್ರಾಸದವರಿಗೆ?

(ಬ) ಬ್ರಹ್ಮಪುತ್ರಾ, ಹೈಲನ, ಡಾನ್ಯೂಬ, ಯಾಂಗ್‌ಟೀಜಕಿಆಂಗ, ಮಿಸ್ಸಿಸಿಪಿ, ನೈಲ, ಅಮೇಜನ್ ನದಿಗಳು ಎಲ್ಲೆಲ್ಲಿ ಉಗಮವಾಗುತ್ತವೆ? ಯಾವ ಯಾವ ದೇಶಗಳೊಳಗಿಂದ ಹರಿಯುತ್ತವೆ? ಒಂದೊಂದರ ಧಡದ ಮೇಲಿನ ಒಂದೆರಡು ಪಟ್ಟಣವನ್ನು ಬರೆಯಿರಿ.

೮. ಹಿಂದುಸ್ಥಾನದ ನಕಾಶೆಯನ್ನು ಮೇರೆ ಅಕ್ಷಾಂಶ ರೇಖಾಂಶ ಸಹಿತ ತೆಗೆದು ಕೆಳಗಿನ ಸ್ಥಳಗಳನ್ನು ಬರಿಯಿರಿ:—
ಅಲಹಾಬಾದ, ಕಟಕ, ಡಾಕಾ, ಭರತಪುರ, ಕಾನಪುರ, ಲಾಹೋರ, ಪೇಶಾವರ, ವಿಜಾಪುರ, ಮುಥಲಿ ಪಟ್ಟಣ, ಕೋಯಿಮುತ್ತೂರ, ನೀಲಗಿರಿ, ಅಬ್ಬು, ಕಾವೇರಿ, ಕಾಲಿಕತ, ಸಿಂಧೂ, ಭಾವಲಪುರ, ಧಾರವಾಡದಿಂದ ಬೆಂಗಳೂರಿಗೆ ಹೋದ ಲೋಹಮಾರ್ಗ ಮತ್ತು ದಾರಿಯೊಳಗಿನ ಎರಡು ದೊಡ್ಡ ಪಟ್ಟಣಗಳು.

೯. ಕೆಳಗೆ ಬರೆದ ಸ್ಥಳಗಳು ಏನು ಅವೆ? ಎಲ್ಲಿ ಅವೆ? ಯಾತಕ್ಕೋಸ್ಕರ ಪ್ರಸಿದ್ಧ ಅವೆ?
ಸುಲೇಮಾನ, ಲಾಬುಆನ್, ಮಾನಿಲ್ಲಾ, ಮಾರಾಕೇಬೋ, ಬೂರಬೋನ, ಕಪಡನಂಜ, ಶರಾನತಿ, ಮೂರ್ಶಿದಾಬಾದ, ಕಾಂಗರಾ, ಜಸಲಮೀರ.

ವರ್ಗಣಿ ವಸೂಲು.

				ರೂ.	ಆ.	ಪೈ.
ಧಾರವಾಡ	ತಾಲೂಕ	ಮಾಸ್ತರರಿಂದ	...	೬	೦	೬
ಕರ್ಜಗಿ	,,	,,	...	೫	೪	೦
ಭಂಡಿವಾಡ	,,	,,	...	೪	೯	೦
ರಾಣೆಬಿನ್ನೂರ	,,	,,	...	೧೫	೨	೦
ಹುಬ್ಬಳ್ಳಿ	,,	,,	...	೧೯	೮	೦
ಗುಡಗೇರಿ	,,	,,	...	೩	೧೦	೦
ಮಾಡಪುರ	,,	,,	...	೦	೧೩	೦
ಸದಾಸಿವಗಡ	,,	,,	...	೪	೧೧	೦
ಹುನಗುಂದ	,,	,,	...	೫	೪	೦
ರಾ. ರಾ. ರಾಮಕೃಷ್ಣ ಪಾಂಡುರಂಗ ಬೀಳಗಿ			...	೬	೦	೦

---

* ಇದರೊಳಗೇನಾದರೂ ತಪ್ಪು ಇದ್ದರೆ ಮಾಸ್ತರ ಜನರು ಅಗತ್ಯವಾಗಿ ತಿಳಿಸಬೇಕು.

ಕನ್ನಡ ಚಾಲಾಪತ್ರಿಕೆಯ ವರ್ಗಣಿ ವರ್ಷಕ್ಕೆ ಮುಂಗಡ.....೧೫ ಆಣೆ.
ಒಂದು ಸಂಚಿಕೆಗೆ..... ೨ ಆಣೆ.

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ.	೪	ಪಂಕ್ತಿಗಳವರೆಗೆ	೧ ರೂ
ಮೂರುಸಾರೆ ಇಟ್ಟರೆ.	೧೦	,,	,,
ಆರುಸಾರೆ ಇಟ್ಟರೆ.	೧೬	,,	,,

ಸೂಚನೆಗಳು.

೧. ಚಾಲಾಪತ್ರಿಕೆಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.

೨. ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ ಹಾಸಲು ಬೀಳುವದು.

೩. ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ಇ ನ್ನೂಡಿ ಸೇ ಬೀಳುವದು.

೪. ಪ್ರಕಟನೆಯು ಕೂಡ ಹೂಗ ಕಳುಹಿಸಲಿಕ್ಕೆ ಬೇಕು.

೫. ಟಿಕೇಟು ಇಟ್ಟ ಹೊರ್ತು ಉತ್ತರ ಶಿಗಲಾರದು.

ವ್ಯವಸ್ಥಾಪಕ,
ಕನ್ನಡ ಚಾಲಾಪತ್ರಿಕ.

ಸೂಚನೆ.

ಈ ವರ್ಷದ ಚಾಲಾಪತ್ರಿಕೆಯ ವರ್ಗಣಿ ಯಾರ ಕಡೆಗೆ ಉಳಿ ದಿರುವದೋ ಅವರು ಅಕ್ಟೋಬರ ತಿಂಗಳ ಒಳಗಾಗಿ ಅಲಸ್ಯ ಮಾಡದೆ ಚುಕ್ತಾ ಮಾಡಿಕೊಡಬೇಕು.

ವ್ಯವಸ್ಥಾಪಕ,
ಕನ್ನಡ ಚಾಲಾಪತ್ರಿಕ.

ಕನ್ನಡ ಶಾಲಾಪತ್ರಿಕೆ.

KANARESE
SCHOOL PAPER.

ಪುಸ್ತಕ ೨೫.] ನವಂಬರ ೧೮೯೦. [ಸಂಚಿಕೆ ೧೧.

ಅನುಕ್ರಮಣಿಕೆ.

		ಪುಟ.
೧.	ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು... ...	೨೪೧
೨.	ಇತಿಹಾಸ	೨೪೪
೩.	ಫ್ರೀಬೆಲನ ಶಿಶು-ಶಿಕ್ಷಣಪದ್ಧತಿ	೨೫೦
೪.	ಧಾರವಾಡ ಟ್ರೇನಿಂಗ ಕಾಲೇಜಿನ ಅಭ್ಯಾಸನ ಕ್ರಮಗಳು	೨೫೫
೫.	ನೋಟೀಸು	೨೬೦
೬.	ಧಾರವಾಡ ಟ್ರೇನಿಂಗ ಕಾಲೇಜಿನ ಸರ್ಟಿಫಿಕೆಟ ಪರೀಕ್ಷೆಯ ಕನ್ನಡ ವಿಷಯದ ಪ್ರಶ್ನೆಗಳು	೨೬೧

CONTENTS.

1	Educational Intelligence and Useful Notes...	241
2.	Hitory	244
3.	Froebel's Kinder-garten system	250
4.	Courses of study of the Dharwar Training College.	255
5.	Notification	260
6.	Dharwar Training College Certificate Examina-tion, Kanarese, 1890.	261

DHARWAR:
PRINTED AT THE KARANTIC BOOK DEPOT PRESS,
1890.

ಜಾಹೀರಾತು.

ಮಾಕ್ಸಂಜೀವನೀ ಗುಳಿಗೆಗಳು.

ನಿತ್ಯ ಅನೇಕ ಜನರು ಈ ಗುಳಿಗೆಗಳಿಂದ ಗುಣಹೊಂದಿದಾ ರೆ. ಈ ಔಷಧವನ್ನು ಮೂರ್ಮೂರು ಮೊಹರಾದಮೇಲೆ ಇಂಥಾ ಮಾದಿರಿ ಯೋಷಧವಿದ ರೆ ಅದು ನಷ್ಟಕ್ಕಾಗಲಿಕ್ಕೆ ಈ ಗುಳಿಗೆ ನಾಲ್ವತ್ತೂ ದಿವಸ ಸೇವಿಸಬೇಕು. ಕ್ರಯ ೧ ರೂ. ೪ ಆ. ಬಾಂಗಿನಾಟಿಕೊಡು ವಾಹಿಲ್ಯಾಪೇಯುಬಲ್ ಮೂಲಕ ಕ್ರಯದಾಗನು ಬಿಡಿಸಿ ಕೊಡಿ ೧ ರೂ. ೧೦ ಆ. ಗುಳಿಗೆ ಸೇವಿಸುವವರ ವಯಸ್ಸನ್ನು ತಿಳಿಸಬೇಕು. ಶಿರ್ಸಿ, ಕೊಲ್ಲಾಪೂರ, ಬಜೋಬಿ, ಸೊಲ್ಲಾಪೂರ, ಮುಂತಾವ ಕಡೆಯ ಪ್ರಾಯುವರ್ಷ ೧೦ । ೨೯ । ೩೬ । ೪೦ । ಈ ಪ್ರಕಾರ ಬೇರೆ ಬೇರೆ ವಯಸ್ಸಿನವರು ಇವರಿಂದ ಗುಣಹೊಂದಿದಬಗ್ಗೆ ನಮಗ ಅನೇಕಪತ್ರಗಳು ಬಂದವೆ. ಆಪ್ರಗಾರ್ಲಿ ಒಂದು ಮುರಾಠೀ ಕಾರ್ಡಿನ ಅಭಿಪ್ರಾಯುವೀನಂದರೆ:—

"ಸಾ. ನ. ವಿ. ವಿ. ಪತ್ರಬರೆಯುಲಿಕ್ಕೆ ನಾನು ಅನೆಂದ ಪಡು ವದೇನೆಂದರೆ, ಇಂದಿಗೆ ಬಾಮವರೆ ತಿಂಗಳ ಮೊದಲು ನೀವು ಕಳುಹಿಸಿದ ಮಾಕ್ಸಂಜೀವನೀ ಗುಳಿಗೆಯಿಂದ ಎಫ್ಫೈಟೀಗುಣವಾ ಗಿದೆ. ಆವಕಾರಣ, ಇನ್ನೊಂದು ಬಾಟ್ಲಿ ಗುಳಿಗೆ ವಿಯಮೂಡಿ ಕಳುಹಿಸಬೇಕು. ಇಂಥ ಔಷಧಗಳನ್ನು ತಯಾರಿಸಿ ಜನರ ಪೀಡೆ ಉಪಕಾರ ಮಾಡುವ ನಿಮಗೆ ದೇವರು ಕಲ್ಯಾಣ ಮಾಡಲಿ ಎಂತಿ ವಿಜ್ಞಾಪನೆ.

ಬಾಡೋ ಸಂಬಳಾರಾಜುವೇವ, ಜೈಸ್ಕೂಲು ಅಡಮ್ಮದನಗರ."

ಈ ಗುಳಿಗೆಗಳನ್ನು ತಯಾರು ಮಾಡಿ ಕಳುಹಿಸಿಕೊಡುವವನ ವಿಳಾಸ:—

ಬೀಳಗಿ ಪೋ. ಆಫೀಸಾದಾರ. } ರಾಮಕೃಷ್ಣ ಸಾಂಬುರಂಗ ಮಾಜೀಸ್ಕೂಲ ಮಾಸ್ತರ ಬೀಳಗಿ, ವಿಜಾಪುರ ಸಬ್ಜಿಸ್ಟ್ರಿಕ್ಟ, ಜಿಲ್ಲಾ ಉತ್ತರ ಕಾನರಾ.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷವಂ ।
ಬಯಸುತ್ತಂ ಪ್ರತಿಮಾಸದಾಮಗೊಲವಿಂದೀಪತ್ರಮಂ ಮುನ್ನಿಸಿ ॥
ನಯದಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂ ದೋಷವತಿದ್ದನೇಳ್ವುದುಬುಧರ್ ಜ್ಞಾನಾಭಿವೃದ್ಧಿಪ್ರಿಯರ್ ॥೧॥

ಪುಸ್ತಕ ೨೫ನೇ.] ನವಂಬರ ೧೮೮೯ನೇ. [ಸಂಚಿಕೆ ೧೧

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಹೋದ ಸಪ್ಟಂಬರ ತಿಂಗಳಲ್ಲಿ ಮೆಡರಬಾನ್ ವಾಲ್ಯಸಾಹೇಬರ ಕಿವುಡಮೂಕರ ಸಾಲಿಯ ಪರೀಕ್ಷೆಯು ಪ್ರಸಿದ್ಧ ರೀತಿಯಿಂದ ಪುಣೆಯ ಲಷ್ಕರದಲ್ಲಿ ಜೆಮಖಾನೆಯ ಮಂದಿರದೊಳಗೆ ತಕ್ಕೊಳ್ಳಲ್ಪಟ್ಟಿತು. ಈ ಸಮಾರಂಭವನ್ನು ನೋಡುವದಕ್ಕಾಗಿ ನಮ್ಮ ಎತದ್ದೇಶೀಯ ಸಭ್ಯ ಗೃಹಸ್ಥರು ಬಹಳ ಜನರು ಕೂಡಿದ್ದರು; ಮತ್ತು ಕೆಲ ಸಭ್ಯ ಸ್ತ್ರೀಯರಾದರೂ ಹೋಗಿದ್ದರು. ಅಧ್ಯಕ್ಷಸ್ಥಾನದಲ್ಲಿ ನಾಮದಾರ ಗವರ್ನರರ ಧೊರೆಗಳಿದ್ದರು. ಮೊದಲು ಈ ಸಾಲಿಯ ಮುಖ್ಯಾಧ್ಯಾಪಕರಾದ ಮಿ. ವಾಲ್ಯ ಸಾಹೇಬರು ಕಿವುಡ ಮೂಕರಿಗೆ ವ್ಯಾಗೆ ಕಲಿಸುವೇ ಕಾಗುತ್ತದೆಂಬದನ್ನು ತಿಳಿಸಿ ಹೇಳಿದರು. ಕಲಿಸುವ ಪದ್ಧತಿಗಳು ಎರಡು:—೧. ಸನ್ನೆಗಳಿಂದ. ೨. ಉಚ್ಚಾರಗಳಿಂದ. ಸನ್ನೆಯ ಪದ್ಧತಿಯಿಂದ ಈ ಬಡಪ್ರಾಣಿಗಳಿಗೆ ಬರೆಯುವ ಜ್ಞಾನ ಪೂರ್ತಿಕೊಡಲಿಕ್ಕೆ ಬರೆಯುತ್ತದೆ; ಆದರೆ ಅವರಿಗೆ ಮಾತಾಡುವದಕ್ಕೆ

ಕಲಿಸಲಿಕ್ಕೆ ಬರುವದಿಲ್ಲ. ಎರಡನೇ ಪದ್ಧತಿಯಿಂದ ಅವರಿಗೆ ಉಚ್ಚಾರಗಳನ್ನು ಕಲಿಸಿ ಸಾಧಾರಣವಾಗಿ ತಿಳಿಯುವಷ್ಟು ಸ್ಪಷ್ಟವಾಗಿ ಮಾತಾಡಲಿಕ್ಕೆ ಕಲಿಸಬಹುದು. ಇದನ್ನು ಕೇಳಿ ಎಷ್ಟೋ ಜನರು ಬೆರಗಾಗಬಹುದು. ಕಿವುಡಮೂಕರ ವಾಙ್ಮಶಕ್ತಿಯು ಹೋಗಿರುವದಿಲ್ಲ. ಕಿವಿ ಕೇಳಿಸದೆ ಇರುವದರಿಂದ, ಅನುಕರಣ ಮೂಡಿ ಧ್ವನಿ ಹ್ಯಾಗೆ ಹುಟ್ಟಿಸಬೇಕೆಂಬವನ್ನು ತಿಳುಕೊಳ್ಳುವ ಸಾಧನವು ಅವರಿಗೆ ಇರುವದಿಲ್ಲ. ಆದಕಾರಣ, ಶಿಕ್ಷಕನು ವಿದ್ಯಾರ್ಥಿಯ ಕೈಯನ್ನು ತನ್ನ ಕಂಠದ ಮೇಲೆ ಇರಿಸಿ, ಅವನಿಗೆ ತನ್ನ ಬಾಯಿಕಡೆಗೆ ಚನ್ನಾಗಿ ದೃಷ್ಟಿಸಿ ನೋಡಹೇಳಿ, ಧ್ವನಿಯನ್ನು ಹೊರಡಿಸಬೇಕು. ಹೀಗೆ ಮಾಡುವದನ್ನು ನೋಡಲಾಗಿ, ಗಂಟಲನೊಳಗಿಂದ ಹವೆಯನ್ನು ಜೋರಿನಿಂದ ಬಾಯಿಯಮೂಗವಾಗಿ ಬಿಟ್ಟುಬಿಟ್ಟರೆ, ಧ್ವನಿಯಾಗುತ್ತದೆಂದು ವಿದ್ಯಾರ್ಥಿಯು ಲಕ್ಷಕ್ಕೆ ಬರುತ್ತದೆ. ಕುತ್ತಿಗೆಯ ಮೇಲೆ ಕೈ ಇಡುವದರಿಂದ, ಅಲ್ಲಿಯ ಶಿರಗಳನ್ನು ಹ್ಯಾಗೆ ಅಲ್ಲಾಡಿಸಬೇಕಾಗುತ್ತದೆಂಬವು ಅವನಿಗೆ ತಿಳಿಯುತ್ತದೆ. ವಿದ್ಯಾರ್ಥಿಯು ಅದರಂತೆ ಮಾಡಲಾಗಿ ಅವನಿಗಾದರೂ ಧ್ವನಿ ಹುಟ್ಟಿಸಲಿಕ್ಕೆ ಬರಹತ್ತುತ್ತದೆ. ಆ ಮೇಲೆ, ಬೇರೆ ಬೇರೆ ಸ್ವರಗಳು ಹುಟ್ಟುವ ಸ್ಥಾನಗಳನ್ನು ಅವನಿಗೆ ತೋರಿಸಿ ಕೊಡುವದೇ ಮುಂದಿನ ಮೆಟ್ಟು. ಈ ತೆರದಿಂದ ವಿದ್ಯಾರ್ಥಿಗಳಿಗೆ ಅಕ್ಷರಗಳ ಉಚ್ಚಾರಗಳನ್ನು ಕಲಿಸಿವ ಬಳಿಕ, ಶಬ್ದಜ್ಞಾನ, ವಸ್ತುಜ್ಞಾನ ಮುಂತಾದ್ದನ್ನು ಕಲಿಸತಕ್ಕದ್ದು. ಇದು ಬಹಳ ಪ್ರಯಾಸದ ಕೆಲಸವು. ಶಿಕ್ಷಕನ ಅಂತಃಕರಣದಲ್ಲಿ ನಿಜವಾದ ಪ್ರೀತಿ ಔದಾರ್ಯಗಳಿಲ್ಲದೆ ಅವನಿಂದ ಈ ಕೆಲಸವು ಎಂದಿಗೂ ಆಗದು. ಮೇಲೆ ಹೇಳಿದ ಸಮಾರಂಭದ ಕಾಲಕ್ಕೆ ಮೆ. ವಾಲ್ಶ ಸಾಹೇಬರು ಐದು ಹುಡುಗರಿಂದ

ಭೂಗೋಲ, ಲೆಕ್ಕ ಮುಂತಾದ ವಿಷಯಗಳಲ್ಲಿ ಎಷ್ಟೋ ಪ್ರಶ್ನೆಗಳನ್ನು ಮಾಡಿ, ಉತ್ತರಗಳನ್ನು ಹೊರಡಿಸಿದರು. ಅವುಗಳನ್ನು ಮೂಕ ವಿದ್ಯಾರ್ಥಿಗಳು ತಪ್ಪದೆ ಕೊಟ್ಟರು. ಇದೇ ಮೇರೆಗೆ ಶಿಕ್ಷಕನು ಹೇಳಿದ ಅಭಿಪ್ರಾಯವುಳ್ಳ ಸುಲಭ ವಾಕ್ಯಗಳನ್ನು ಅವರು ಕರೇ ಹಲಗೆಯ ಮೇಲೆ ಬರೆದು ತೋರಿಸಿದರು. ವಾಕ್ಯಗಳನ್ನು ಹೇಳುವಾಗ ವಿದ್ಯಾರ್ಥಿಗಳು ಬಂದೇ ಸವನಾಗಿ ಶಿಕ್ಷಕನ ಬಾಯಕಡೆಗೆ ನೋಡುತ್ತಿದ್ದರು. ಅವನ ತುಟಿಗಳು ಅಲ್ಲಾಡಿದ ಕೂಡಲೆ, ಅವರಿಗೆ ಅವನ ಅಭಿಪ್ರಾಯವು ತಿಳಿಯುತ್ತಿತ್ತು. ಅವರು ಕಿವುಡರಿರುವದರಿಂದ, ಶಿಕ್ಷಕನು ಘಟ್ಟಿಯಾಗಿ ಮಾತಾಡಬೇಕೆಂಬದೇನೂ ಅವಶ್ಯವಿಲ್ಲ. ಹುಟ್ಟಸಬೇಕಾದಂಥ ಧ್ವನಿಗೆ ಅವಶ್ಯಕವಾದ ತುಟಿನಾಲಿಗೆಗಳ ಹಲನ ಚಲನಾದಿಗಳು ಚನ್ನಾಗಿ ಆದರೆ ತೀರಿತು. ಆ ಹುಡುಗರ ಸಿದ್ಧತೆ, ವ್ಯವಸ್ಥೆ, ಅಚ್ಚುಕಟ್ಟುತನ, ದಾಕ್ಷಿಣ್ಯ, ಉಲ್ಲಾಸ, ವಿನಯಗಳನ್ನು ನೋಡಿ ಕೂಡಿದ ಜನರು ಬೆರಗಾಗಿ ಹೋದರು. ಅವರಲ್ಲಿ ಬಬ್ಬ ಹುಡುಗನು ಹತ್ತು ಇಪ್ಪತ್ತು ಪಂಕ್ತಿ ಇಂಗ್ಲಿಷ ಕವಿತೆಯನ್ನು ಸ್ಪಷ್ಟವಾಗಿ ಅಂದಕೂಡಲೆ ಜನರಿಗೆ ಬಹಳ ಆಶ್ಚರ್ಯವಾಯಿತು. ಮತ್ತು ಮೆ. ವಾಲ್ಕ ಸಾಹೇಬರು ಬಹು ಶ್ರಮ ಬಟ್ಟರುವ ಬಗ್ಗೆ ಯಾವತ್ತು ಜನರು ಪೂರಾ ಮನಗಂಡರು. ಗವರ್ನರ ಸಾಹೇಬರು ತಮ್ಮ ಭಾಷಣದಲ್ಲಿ ಹೇಳಿದಂತೆ ಇಂಥ ದುರ್ದೈವಿಗಳ ಮೇಲೆ ನಮ್ಮ ಜನರು ಕನಿಕರ ಪಡುವದು ನಿಜವು. ಆದರೂ ಈ ಬಡ ಪ್ರಾಣಿಗಳಿಗೆ ಶಿಕ್ಷಣ ಕೊಟ್ಟು ತಮ್ಮ ಚರಿತಾರ್ಥಸಾಗಿಸಿಕೊಳ್ಳುವ ಹಾಗೆ ಮಾಡಲಿಕ್ಕೂ ಮಾತಾಡಲಿಕ್ಕೆ ಕಲಿಸಿ ಸಂಭಾಷಣಸುಖವನ್ನು ಅನುಭವಿಸಲಿಕ್ಕೂ ಅವರನ್ನು ಯೋಗ್ಯರಾಗಿ ಮಾಡುವದು ನಮ್ಮ ಜನರ ಮನಸಿ

ನೊಳಗೆ ಬರುವದಿಲ್ಲ. ಆದ್ದರಿಂದ, ನಾವೆಲ್ಲರು ಮಿ. ವಾಲ್ಶಸಾಹೇ ಬರ ಉದ್ಯೋಗದಿಂದ ಕಲಿಯತಕ್ಕದ್ದೇನಂದರೆ—ಕಿವುಡಮೂಕರು ತೀರ ಧಿಕ್ಕರಿಸಿ ಬಿಡತಕ್ಕ ಪ್ರಾಣಿಗಳಲ್ಲ. ದೀರ್ಘೋದ್ಯೋಗದಿಂದ ಅವರಲ್ಲಿರುವ ನ್ಯೂನತೆಗಳನ್ನು ಕೆಲಮಟ್ಟಿಗೆ ತೆಗೆದು ಹಾಕಬಹುದು.

ಮಣ್ಣಿನೊಳಗಿಂದ ಬಂಗಾರವನ್ನು ತೆಗೆಯುವ ಕೆಲಸದಲ್ಲಿ ಮಿಂಚಿನ ಉಪಯೋಗ ಮಾಡುವದೊಂದು ಹೊಸ ಯಂತ್ರವು ಹೊರಟಿರುತ್ತದೆ.

ಬೌದ್ಧ ಧರ್ಮದ್ದೊಂದು ಬಹಳ ದೊಡ್ಡ ಗ್ರಂಥವನ್ನು ಹಿಂದುಸ್ಥಾನ ಸರಕಾರದವರು ತಿಬೇಟದಿಂದ ಸಂಪಾದಿಸಿದ್ದಾರೆ; ಅವರಲ್ಲಿ ೬೦೪ ಬೇರೆ ಬೇರೆ ಪುಸ್ತಕಗಳು ಅವೆ. ಒಂದೊಂದು ಪುಸ್ತಕವು ಎರಡು ಫೂಟು ಉದ್ದ ಆರು ಇಂಚು ದಪ್ಪ ಅದೆ. ಈ ಗ್ರಂಥದಿಂದ ಪ್ರಾಚೀನ ಕಾಲದ ಇತಿಹಾಸವು ಬಹಳ ತಿಳಿಯಬಹುದೆಂದು ತೋರುತ್ತದೆ.

HISTORY.

ಇತಿಹಾಸ.

(೧೪೩ನೇ ಪುಟದಿಂದ ಮುಂದೆಸಾಗಿದ್ದು.)

ಹಿಂದಿನ ಸಂಚಿಕೆಯಲ್ಲಿ ಪ್ರಾಚೀನಕಾಲದ ಹಿಂದೂ ಜನರೊಳಗೆ ಇತಿಹಾಸವನ್ನು ಬರೆದಿಡುವ ಸಂಪ್ರದಾಯವು ಇದ್ದಿಲ್ಲವೆಂದು ಹೇಳಿದೆವು. ಅದರಿಂದ ಆ ವಿಷಯದ ಜ್ಞಾನ ಮಾಡಿಕೊಳ್ಳಲಿಕ್ಕೆ ಮಾರ್ಗವೇ ಉಳಿಯಲಿಲ್ಲವೆಂದು ತಿಳಿಯಲಾಗದು. ಮತ್ತು ಬುನಾದಿಯಲ್ಲಿ ನಮ್ಮ ಜನರಿಗೆ ಇತಿಹಾಸದ ಯೋಗ್ಯತೆಯು

ಗೊತ್ತಿದ್ದಿಲ್ಲವೆಂದು ಹೇಳಕೂಡದು. ಸಂಸ್ಕೃತ ಭಾಷೆಯಲ್ಲಿ ಸಮಗ್ರ ವೇಕಾದಂಥ ಚರಿತ್ರೆ ಇತಿಹಾಸಗಳಿಲ್ಲೆಂಬುವದು ನಿಜವು. ಅದನ್ನೂ ಪೂರ್ವಕಾಲದಲ್ಲಿ ಬರಗಿದ ಸಂಗತಿಗಳನ್ನು ಬರೆದಿಡುವ ಪರಿಪಾಠವು ನಮ್ಮಲ್ಲಿ ಇದ್ದಿದ್ದೇ ಇಲ್ಲವೆಂದು ಹೇಳಕೂಡದು. ಇದಕ್ಕೆ ರಾಜತರಂಗಿಣಿ ಎಂಬ ಗ್ರಂಥವೇ ಸಾಕ್ಷಿಯು. ಇದರೊಳಗೆ ಕಾಶ್ಮೀರದೇಶದ ಅರಸನ ವೃತ್ತಾಂತವು ಮೂಲಾರಂಭದಿಂದ ಅಕಬರ ಬಾದಶಹನು ಆ ದೇಶವನ್ನು ಸ್ವಾಧೀನಮಾಡಿಕೊಳ್ಳುವ ವರೆಗೆ ಇರುತ್ತದೆ. ಈ ಇತಿಹಾಸವನ್ನು ಬೇರೆ ಬೇರೆ ಪಂಡಿತರು ತಮ್ಮ ತಮ್ಮ ಕಾಲದವರೆಗೆ ತಂದು ಮುಟ್ಟಿಸಿದ್ದಾರೆ. ಸಂಸ್ಕೃತ ಗ್ರಂಥಕರ್ತರ ಶಕಗಳನ್ನು ನಿರ್ಣಯಿಸುವದಕ್ಕೆ ಈ ಗ್ರಂಥದಿಂದ ಬಹಳ ಉಪಯೋಗವಾಗುತ್ತದೆ. ಇದೇ ಪ್ರಕಾರ, ಮತ್ತೊಂದು ಇತಿಹಾಸರೂಪ ಸಂಸ್ಕೃತಗ್ರಂಥ ಉಂಟು. ಅದರೊಳಗೆ ಬಂಗಾಲದಕಡೆಯ ಮೊಗಲ ಅರಸರ ವೃತ್ತಾಂತವು ಬರೆಯಲ್ಪಟ್ಟಿರುತ್ತದೆ. ಕಾಶೀರಾಜನೆಂಬ ಪಂಡಿತನು ಪಾನಪತ್ರದ ಕಾಳಗವನ್ನು ವಿವರಿಸಿದ್ದಾನೆ. ಅವನು ಅದನ್ನು ನವಾಬನ ಹೇಳಿಕೆಯ ಮೇಲಿಂದ ಫಾರ್ಸೀ ಭಾಷೆಯಲ್ಲಿ ಬರೆದಿಟ್ಟಿರುವನು. ಇವೆರಡೂ ಸಂಗತಿಗಳಿಂದ ನಾವು ಮೇಲೆ ವ್ಯಕ್ತಪಡಿಸಿದ ಅಭಿಪ್ರಾಯಕ್ಕೆ ವ್ಯತ್ಯಾಸ ಬರುವದಿಲ್ಲ ಇಷ್ಟೇ ಅಲ್ಲ, ಆದರೆ ಅವುಗಳಿಂದ ನಮ್ಮ ಹಿಂದೂ ಜನರಿಗೆ, ವಿಶೇಷವಾಗಿ ಬ್ರಾಹ್ಮಣರಿಗೆ, ಭೂಷಣವೇ ಬರುತ್ತದೆ. ಹ್ಯಾಗಂದರೆ, ತಮ್ಮ ಪೆದರಿನಲ್ಲಿದ್ದ ಸ್ವಜಾತೀಯ ಮುನಶಿಗಳನ್ನು ಬಿಟ್ಟು ಈ ಪಂಡಿತನನ್ನೇ ಆರಿಸಿ ಇವನಿಗೆ ಆ ವೃತ್ತಾಂತವನ್ನು ಬರೆದಿಡಲಿಕ್ಕೆ ಹೇಳಿದ್ದರಿಂದ, ಈತನು ಆ ಭಾಷೆಯಲ್ಲಿ ಬಹಳ ನಿಪುಣನಾಗಿದ್ದನೆಂದು ತೋರುತ್ತದೆ. ಮತ್ತು ಅವನಲ್ಲಿ ಉತ್ತಮವಾ

ದ ಇತಿಹಾಸವನ್ನು ಬರೆದಿಡುವಷ್ಟು ಸಾಮರ್ಥ್ಯವೂ ಉತ್ಸಾಹವೂ ಇದ್ದವೆಂದು ಹೇಳಬಹುದು. ಉತ್ಸಾಹವಿರದಿದ್ದರೆ, ಯಾವ ಭಯಂಕರ ಕಾಳಗದಲ್ಲಿ ಸ್ವದೇಶದ ಜನರು ಪೂರಾ ಅಪಜಯಪಟ್ಟರೋ ಅಂಥ ಕಾಳಗವನ್ನು ಇತಿಹಾಸ ರೂಪದಿಂದ ಬರೆದಿಡುವ ಸಾಹಸದ ಕೆಲಸವನ್ನು ಧರ್ಮಾಭಿಮಾನಿಯಾದ ಯಾವ ಹಿಂದೂ ಮನುಷ್ಯನೂ ಕೈಕೊಳ್ಳುತ್ತಿದ್ದಿಲ್ಲ; ಆ ಅಪಜಯವು ಇನ್ನೂ ನಮ್ಮ ಬೆನ್ನು ಬಿಟ್ಟಿಲ್ಲ; ಮುಂದೆ ಅದರಿಂದ ನಮ್ಮ ಗತಿ ಏನಾಗುವದೋ ನಿನೋ, ದೇವರೇಬಲ್ಲ! ಈ ದೃಷ್ಟ್ಯಾಂತದಮೇಲಿಂದ ನಮ್ಮ ಜನರೊಳಗೆ ಇತಿಹಾಸವನ್ನು ಬರೆದಿಡುವ ಪುರಾತನವೇ ಇದ್ದಿಲ್ಲವೆಂದು ಅನ್ನಕೂಡದು. ನಮ್ಮಲ್ಲಿ ಇತಿಹಾಸ ಬರೆದಿಡುವ ಸಂಪ್ರದಾಯವು ವಿಶೇಷವಿದ್ದಿಲ್ಲವೆಂಬುವದು ನಿಜವು. ಆವರೂ ಮೇಲೆ ಹೇಳಿದಂಥ ಎಷ್ಟೋ ಬಂಟ ಗ್ರಂಥಗಳನ್ನು ಪ್ರಾಚೀನ ಕಾಲದಲ್ಲಿ ಬರೆದಿಟ್ಟಿರಬಹುದು; ಅವು ಕಾಲಗತಿಯಿಂದ ಲೋಪವಾಗಿ, ಅವುಗಳಲ್ಲಿ ಕೆಲವು ಇನ್ನೂ ಎಲ್ಲ್ಯಾದರೂ ಬೊರೆವರೂ ದೊರೆಯಬಹುದು. ಈ ತರ್ಕವು ನಿಜವಾಗಿದ್ದರೂ ಇದರಿಂದ ನಮ್ಮ ಜನರಿಗೆ ವಿಶೇಷ ಉಪಯೋಗವಾಗದೆಂಬದು ಸ್ಪಷ್ಟವದೆ. ನಾನಾಪ್ರಕಾರದ ಶೋಧಗಳನ್ನು ಸಾಹಸಕೃತ್ಯಗಳನ್ನೂ ಮಾಡುವದನ್ನೆಲ್ಲ ನಾವು ನಮ್ಮ ಮೇಲೆ ರಾಜ್ಯವಾಳುವ ಜನಾಂಗದವರಿಗೆ ಒಪ್ಪಿಸಿ ಬಿಟ್ಟಿದ್ದೇವೆ. ಅವರು ಆ ಶೋಧಗಳನ್ನು ಮಾಡಿ ವಿಲಾಯತಿಗೆ ಬಯ್ಯಲಾಗಿ, ಅಲ್ಲಿಂದ ಅವು ಮೋಕ್ಷಮೂಲರ, ಡಾಕ್ಟರ್ ಹಾಗ್ ಮುಂತಾದ ಪಂಡಿತರ ಮುದ್ರೆಗಳೊಡನೆ ನಮ್ಮ ದೇಶಕ್ಕೆ ತಿರುಗಿ ಬಂದವೆಂದರೆ, ಅವುಗಳನ್ನಷ್ಟು ಕಲಿತು ಅಜ್ಞಾನಿಗಳಾಗಿಯೂ ಸಾಧುವೃತ್ತಿಯುಳ್ಳವರಾಗಿಯೂ ಇರುವ ನಮ್ಮ ದೇಶಬಾಂಧವರಮುಂದೆ ಬಳ್ಳೇ ಜಾಣತನದ ಹೆಮ್ಮೆ

ಯನ್ನು ತೋರಿಸಿ ಮೆರೆಯುವದಷ್ಟೇ ನಮ್ಮ ಕೆಲಸವಾಗಿದೆ!

ನಮ್ಮ ದೇಶದ ಪ್ರಾಚೀನ ಇತಿಹಾಸವು ಮೇಲಿನಂಥ ಗ್ರಂಥಗಳಿಂದಂತೂ ತಿಳಿದೇತಿಳಿಯುತ್ತದೆ. ಇವೆಲ್ಲದೆ ಅದನ್ನು ತಿಳುಕೊಳ್ಳುವ ಇನ್ನೂ ಕೆಲವು ಬೇರೆ ಸಾಧನಗಳುಂಟು. ಬುನಾದಿಯ ಗ್ರೀಕ ಮತ್ತು ರೋಮನ್ ಜನರು ಬಳ್ಳೇ ಶೋಧ ದೃಷ್ಟಿಯುಳ್ಳವರಾಗಿದ್ದರು. ಅವರಿಗೆ ನಮ್ಮ ದೇಶದ ವೃತ್ತಾಂತವು ಚನ್ನಾಗಿ ಗೊತ್ತಿರದಿದ್ದರೂ, ಉತ್ತರ ದಿಕ್ಕಿನಲ್ಲಿರುವ ಕೆಲವು ಭಾಗಗಳ ವಿಷಯಕ್ಕೆ ಅವರು ಬರೆದಿಟ್ಟ ಎಷ್ಟೋ ಗ್ರಂಥಗಳಲ್ಲಿ ಹಲವು ಲೇಖಗಳುಂಟು, ಅವು ಕೆಲಮಟ್ಟಿಗೆ ಈ ದೇಶದ ಪ್ರಾಚೀನ ಇತಿಹಾಸವನ್ನು ತಿಳಿಸುವ ಸಾಧನಗಳಾಗಿವೆ. ಈಜಿಪ್ತ ದೇಶದಲ್ಲಿ ಬಹಳ ಹೆಸರಾದ ಟೊಲಮಿ ಎಂಬವನೊಬ್ಬ ಭೂಗೋಲ ಶಾಸ್ತ್ರಜ್ಞನು ಆಗಿ ಹೋದನು. ಅವನು ಬರೆದಿಟ್ಟ ಗ್ರಂಥಗಳಿಂದಲೂ ಚೀನದವರು ಬರೆದಿಟ್ಟ ಗ್ರಂಥಗಳಿಂದಲೂ ಪ್ರಾಚೀನ ಹಿಂದುಸ್ಥಾನದ ವಿಷಯಕ್ಕೆ ತಕ್ಕಮಟ್ಟಿಗೆ ಇತಿಹಾಸವು ದೊರಕುತ್ತದೆ. ಇದೇ ಮೇರೆಗೆ, ಬುನಾದಿಯ ಜಯಸ್ತಂಭ ಮುಂತಾದವುಗಳಾದರೂ ಪೂರ್ವಕಾಲದ ಜ್ಞಾನ ಮಾಡಿ ಕೊಡಲಿಕ್ಕೆ ಕೆಲಮಟ್ಟಿಗೆ ಸಾಧನಗಳೇ ಇರುತ್ತವೆ. ಇವುಗಳ ಹೊರ್ತು ಮುದ್ರಾರಾಕ್ಷಸ, ಮೃಚ್ಛಕಟಿಕ, ಮುಂತಾದ ಐತಿಹಾಸಿಕ ನಾಟಕಗಳಿಂದ ಸಹ ಪ್ರಸಂಗಾನುಸಾರವಾಗಿ ಪ್ರಾಚೀನ ಇತಿಹಾಸದ ಕೆಲವು ಸಂಗತಿಗಳು ತಿಳಿಯುತ್ತವೆ. ಸಾರಾಂಶವೇನೆಂದರೆ, ನಮ್ಮ ದೇಶದ ಪ್ರಾಚೀನ ಇತಿಹಾಸದ ಜ್ಞಾನವು ಈ ಮೇರೆಗೆ ಅಲ್ಪಸ್ವಲ್ಪವಾದರೂ ಆಗುವಷ್ಟು ಸಾಧನಗಳಿವೆ. ಮೊದಲಿನಿಂದ ಅನುಕ್ರಮವಾಗಿ ಬರೆದ ಇತಿಹಾಸಗಳಿದ್ದರೆ, ಅವುಗಳಿಂದ ಎಷ್ಟು ಪೂರ್ಣಜ್ಞಾನವಾಗುತ್ತಿತ್ತೋ ಅಷ್ಟು ಜ್ಞಾನವಾಗುವ ಆಶೆಯು ಉಳಿಯಲೇ ಇಲ್ಲ!

ಈ ಮೇರೆಗೆ ನಮ್ಮೊಳಗಿನ ಇತಿಹಾಸ ಗ್ರಂಥಗಳ ಅಭಾವವು ನಮ್ಮ ಪ್ರಾಚೀನ ವಿದ್ಯೆಯ ದೊಡ್ಡ ದೊಂದು ಕೊರತೆಯನ್ನು ಬೈಲಿಗೆ ಎಳೆಯುತ್ತದೆ. ಇನ್ನು, ಈ ಶಾಸ್ತ್ರವು ಮೊದಲು ಎಂದು ಹುಟ್ಟಿತು? ಎಲ್ಲಿ ಉದ್ಭವಿಸಿತು? ಅದರ ವಿಸ್ತಾರವು ಹ್ಯಾಗೆ ಬೆಳೆಯುತ್ತ ಹೋಯಿತು? ಎಂಬದನ್ನು ಕುರಿತು ಆಲೋಚಿಸುವ.

ಯಾವತ್ತು ಭೂಮಿಯ ಮೇಲೆ ಹಬ್ಬಿದಂಥ ಜ್ಞಾನದ ಉಗಮಸ್ಥಳಗಳು ಮುಖ್ಯವಾಗಿ ಹಿಂದುಸ್ಥಾನ ಮತ್ತು ಗ್ರೀಸ ದೇಶ ಇವೆರಡೇ. ಮೊದಲನೇ ದೇಶವು ಏಶಿಯ ಖಂಡದೊಳಗೆ ಮುಖ್ಯ ಸ್ಥಳವಿದ್ದಂತೆ ಯೂರೋಪದಲ್ಲಿ ಎರಡನೇದು ಇತ್ತು. ಅರ್ವಾಚೀನಕಾಲದಲ್ಲಿ ಯೂರೋಪ ಖಂಡದೊಳಗಿನ ಯಾವತ್ತು ದೇಶಗಳಲ್ಲಿ ಆವ ಸುಧಾರಣೆಗೆ ಮೂಲಕಾರಣವು ಗ್ರೀಸ ದೇಶವೇ. ವಿದ್ಯಾ ಕಲಾಕೌಶಲ್ಯಗಳ ಬೆಳವಣಿಗೆಯು ಇಂಗ್ಲಂಡ ಫ್ರಾನ್ಸ ಮುಂತಾದ ದೇಶಗಳಲ್ಲಿ ಇತ್ತಲಾಗಿ ಬಹಳವಾಗಿದೆ; ಮತ್ತು ದಿನೇ ದಿನೇ ಹೆಚ್ಚಿ ಬಾ ಗುತ್ತಾ ನಡೆದದೆ. ಆದರೆ ಯಾವತ್ತು ದೇಶಗಳ ಆದಿ ಪೀಠವು ಮೇಲೆ ಹೇಳಿದ ದೇಶವೇ. ಆದದರಿಂದ, ಯೂರೋಪದಲ್ಲಿ ಇತಿಹಾಸ ಬರೆದಿಡುವ ಪರಿಪಾಠ ಬಿದ್ದದ್ದಕ್ಕೆ ಕಾರಣವಾವರೂ ಗ್ರೀಸ ದೇಶವೇ. ಈ ದೇಶದಲ್ಲಿ ಹಿರೊಡೊಟಸನೆಂಬವನು ಮೊದಲನೇ ಇತಿಹಾಸ ಕರ್ತನು ಆಗಿಹೋದನು. ಆದಕಾರಣ, ಹೋಮರನಿಗೆ ಆದ್ಯಕವಿಎಂಬ ಹೆಸರು ಬಿದ್ದಂತೆ ಈತನಿಗೆ ಆದ್ಯ ಇತಿಹಾಸಕಾರ ಎನ್ನುವರು. ಪಾರಸಿಕರೊಡನೆ ಗ್ರೀಕ ಜನರ

* ಪಾರಸೀಕರು ಅಂದರೆ ಪ್ರಾಚೀನ ಪಾರಸೀಜನರು. 'ಪಾರಸೀಜನರು,' 'ಇರಾಣೀ ಜನರು' ಇವು ತೀರ ಅರ್ವಾಚೀನ ಶಬ್ದಗಳಿದ್ದವರಿಂದ ಕಾಲಿದಾಸ, ಬಾಣ, ಮುಂತಾದ ನಮ್ಮ ಹಳೇ ಕವಿಗಳಿಗೆ ಆ ಜನರು ಯಾವ ಹೆಸರಿನಿಂದ ಗೊತ್ತಿದ್ದರೋ ಅದೇ ಹೆಸರನ್ನು ಇಲ್ಲಿ ಯೋಜಿಸುವದು ಸಯುಕ್ತಿಕವಾಗಿ ತೋರುತ್ತದೆ.

ಭಯಂಕರವಾದ ಯುದ್ಧವು ಎಸಗಿದ ಸಮಯದಲ್ಲಿ ಈತನು ಹುಟ್ಟಿದನು. ಈತನು ದೂರದೂರ ದೇಶಗಳಿಗೆ ಹೋಗಿ ತನ್ನ ಇತಿಹಾಸಕ್ಕೆ ಉಪಯೋಗವಾಗುವಂಥ ಬಹಳ ವಿಷಯವನ್ನು ಕೂಡಿಹಾಕಿ, ಗ್ರೀಕ ಭಾಷೆಯಲ್ಲಿ ಬಂದು ಇತಿಹಾಸ ಗ್ರಂಥವನ್ನು ರಚಿಸಿದನು.

ಬಳಿಕ ಅವನ್ನು ಅವನು "ಒಲಿಂಪಿಕ್ ಗೇಮ್ಸು" ಎಂಬ ಐದೈದು ವರ್ಷಕ್ಕೆ ಒಮ್ಮೆ ಆಗುವಂಥ ಸಾರ್ವಜನಿಕ ಉತ್ಸವದಲ್ಲಿ ತನ್ನ ದೇಶಬಾಂಧವರಿಗೆ ಓದಿ ತೋರಿಸಿದನು. ಅವರೊಳಗಿನ ವಿಷಯವು ಮೊದಲೇ ದೇಶಾಭಿಮಾನವುದ್ದು, ಅಂದರೆ ಅವರಲ್ಲಿ ಗ್ರೀಕಜನರ ಪರಾಕ್ರಮವು ವೃತ್ತಾಂತವಿದ್ದ ದರಿಂದಲೂ ಬೇರೆ ಕೆಲವು ಚಮತ್ಕಾರದ ಸಂಗತಿಗಳನ್ನು ಒಳ್ಳೇ ಚಾತುರ್ಯದಿಂದ ಅವರೊಳಗೆ ಶೇರಿಸಿದ್ದರಿಂದಲೂ ಆ ಗ್ರಂಥವು ಯಾವತ್ತು ಜನರಿಗೆ ಬಹಳೇ ಪ್ರೀತ್ಯಾಸ್ಪದವಾಯಿತು. ಅವರಿಂದ ಆ ಜನರೊಳಗಿರುವ ಒಂಬತ್ತು ವಿದ್ಯಾದಿ ದೇವತೆಗಳ ಹೆಸರುಗಳನ್ನು ಆ ಗ್ರಂಥದ ಒಂಬತ್ತು ಸರ್ಗಗಳಿಗೆ ಅಲ್ಲಿ ನೆರೆದಿರುವ ಜನರು ಕೂಡಲೆ ಇಟ್ಟರು. ಅದೇ ಸಮಯದಲ್ಲಿ ಮತ್ತೊಂದು ಚಮತ್ಕಾರದ ಸಂಗತಿಯು ವರ್ತಿಸಿತೆಂದು ಹೇಳುತ್ತಾರೆ. ಅದೇನೆಂದರೆ, ಮೇಲೆ ಹೇಳಿದ ಇತಿಹಾಸವನ್ನು ಹಿರೊಡೊಟಸನು ಓದುತ್ತಿರುವಾಗ, ಆ ಸಮಾಜದೊಳಗೆ ಒಬ್ಬ ಒಂಬತ್ತು ವರ್ಷದ ಹುಡುಗನ ಕುತ್ತಿಗೆ ಶಿರಉಬ್ಬಿದ್ದರಿಂದ ಅವನು ಬಿಕ್ಕಿ ಬಿಕ್ಕಿ ಅಳಹತ್ತಿದನು. ಅವನ್ನು ಆ ಇತಿಹಾಸಕಾರನು ನೋಡಿ, ಆ ಹುಡುಗನ ತಂದೆಗೆ ಭವಿಷ್ಯ ಹೇಳಿದ್ದೇನೆಂದರೆ, ನಿಮ್ಮ ಮಗನು ಮುಂದೆ ಒಳ್ಳೇ ಹೆಸರಾದ ಇತಿಹಾಸಕಾರನಾಗುವನು! ಮುಂದೆ ನಿಜವಾಗಿ ಹಾಗೇ ಸಂಭವಿಸಿತು. ಆ ಹುಡುಗನು ಬಂದೇ ಗ್ರೀಸ ದೇಶದಲ್ಲಿ ಒಳ್ಳೇ ಪ್ರ

ಖ್ಯಾತ ಇತಿಹಾಸಕರ್ತನೆನಿಸಲಿಲ್ಲ; ಅವರೆ ಯಾವತ್ತು ಭೂಮಂಡಲದಲ್ಲಿ ಅತ್ಯುತ್ಕೃಷ್ಟ ಇತಿಹಾಸ ಕರ್ತನೆನಿಸಿಕೊಂಡನು. ಅತನ ಹೆಸರು ಥುಸಿಡ್ಯೈಡೀಜ ಎಂಬದಿತ್ತು. ಇದೇ ಮೇರೆಗೆ, ಗ್ರೀಸ ದೇಶದೊಳಗೆ ಇನ್ನೂ ಎಷ್ಟೋ ಜನರು ಇತಿಹಾಸಕಾರರು ಆಗಿ ಹೋದರು. ಆ ಯಾವತ್ತು ಜನರೊಳಗೆ ಮೇಲಿನ ಇಬ್ಬರಷ್ಟು ಪ್ರಖ್ಯಾತಿ ಪಟ್ಟವನೆಂದರೆ ಸೊಕ್ರೆತೀಸನ ಶಿಷ್ಯನಾದ ಝಿನೊಫೊನ್ ಎಂಬವನು. ಈ ಮೇರೆಗೆ ಮೂರುಜನ ಇತಿಹಾಸಕರ್ತರು ಬಹಳ ಹೆಸರಾದವರು.

FROEBEL'S KINDER-GARTEN SYSTEM;

ಫ್ರೋಬೆಲನ ಶಿಶು-ಶಿಕ್ಷಣಪದ್ಧತಿ.

(೧೪೧ನೇ ಪುಟದಿಂದ ಮುಂದೆ ಸಾಗಿದ್ದು.)

ಇವನ್ನು ನೋಡಿ, ಶೆರೆ ಮನೆಯ ಅಧಿಕಾರಿಗಳೂ ಕಾವಲುಗಾರರೂ ಬೆರಗಾಗಿ ಹೋದರು. ಅವರೆ ಮೊದಲಿನಿಂದ ಆ ಶೆರೆಯಲ್ಲಿದ್ದ ಹೆಂಗಸಿಗೆ 'ಅವಳು ಕೆಟ್ಟವಳು, ಕ್ರೂರಳು, ಭಯಂಕರಳು,' ಇವೇ ಮುಂತಾದ ಮನಸು ನೋಯಿಸುವ ಮಾತುಗಳನ್ನಾಡಿ, ನಾವೇ ಅಕೆಯನ್ನು ಕೆಟ್ಟವಳನ್ನು ಮಾಡಿದೆವು, ಎಂದು ಅವರಿಗೆಲ್ಲ ತಿಳಿಯುವಂತೆ ಮಾತಾಡಿದ್ದರಿಂದ, ಆ ಅಧಿಕಾರಿಗಳು ತಮ್ಮ ಮೊದಲಿನ ಕಠೋರವಾದ ನಡತೆಯನ್ನು ಬಿಟ್ಟು, ಆ ಹೆಳನ್ನು ಒಳ್ಳೇ ರೀತಿಯಿಂದ ನಡಿಸಿಕೊಳ್ಳತ್ತಿದ್ದರು. ಅವಳಾದರೂ ಬಲು ಸಾತ್ವೀಕತನದಿಂದ ನಡೆಯುತ್ತಿದಳು. ನಂಬಿಗೆಯು ಮತ್ತು ಒಳ್ಳೇ ಸವಿ ಮಾತುಗಳ ಮಹಿಮೆಯು ಎಷ್ಟಿರುತ್ತದೆ ನೋಡಿರಿ!

ಶಿಕ್ಷೆಯ ವಿಷಯವಲ್ಲಿ ಯಾವಾಗಲೂ ನೆನಪಿನಲ್ಲಿಡತಕ್ಕ ಅಂಶವು ಇನ್ನೊಂದು ಸಂಗತಿಯುದೆ. ಅದೇನಂದರೆ—ಹುಡುಗರು ಏನಾದರೊಂದು ಅಪರಾಧವನ್ನು ಮಾಡಿದರೆ, ಅವರಿಗೆ ಸಿಟ್ಟು ಮಾಡಿ ಅಥವಾ ಹೊಡೆದು ದಂಡಿಸುವದಕ್ಕಿಂತ ಕೈಲಾದಮಟ್ಟಿಗೆ ಪ್ರೀತಿಯ ಸವಿ ಮಾತುಗಳಿಂದಲೇ ದಂಡಿಸುವದು ಬಳ್ಳಿದು. ಪ್ರೀತಿಯ ಸವಿ ಮಾತುಗಳಿಂದಾವಷ್ಟು ಕಾರ್ಯವು ಸೌವಿರಾರು ಬೆತ್ತಗಳಿಂದಲೂ ಆಗುವದಿಲ್ಲ. ಶಿಕ್ಷಕನ ನಡಾವಳಿಯಲ್ಲಿ ಪ್ರೇಮ ಭಾವವು ತುಂಬಿ ತುಳಕುತ್ತಿರಬೇಕು. ಅಂದರೆ ಹುಡುಗರು ಅವನ ಅಪ್ಪಣೆಯನ್ನು ಎಂದಿಗೂ ಉಲ್ಲಂಘಿಸಿ ನಡೆಯಲಾರರು. ಹುಡುಗರಲ್ಲಿ ವಿಧೇಯತ್ವವನ್ನು ಹುಟ್ಟಿಸುವ ಕರ್ತವ್ಯವು ಎಲ್ಲ ಪರಿಯಿಂದಲೂ ಶಿಕ್ಷಕನ ಪ್ರೇಮ ವರ್ತನದಲ್ಲಿರುತ್ತದೆ. ಸಿಟ್ಟು ಮಾಡುವವರಿಂದಲೂ ಹೊಡೆಯುವವರಿಂದಲೂ ಹುಡುಗರು ಕೆಟ್ಟು ಹೋಗುವ ಸಂಭವವು ಬಹಳ ಉಂಟು. ಫ್ರೇಬೆಲನ ಈ ಶಿಶು ಶಿಕ್ಷಣಪದ್ಧತಿಯು ಅಮೇರಿಕದೊಳಗೆ ಎಲ್ಲ ಕಡೆಯಲ್ಲಿಯೂ ಹಬ್ಬಬೇಕೆಂದು ಮನೋವಾಕ್ಯಯಗಳಿಂದ ಉದ್ಯೋಗ ಮಾಡುತ್ತಿರುವ ಮಿಸೆಸ್ ಫಿಬಿಡಿ ಎಂಬವಳು ಜರ್ಮನಿದೇಶದ ವಿಷಯಕ್ಕೆ ಬರೆದದ್ದೇನಂದರೆ— ಆ ದೇಶದಲ್ಲಿ ಹುಡುಗರಿಗೆ ಯಾವ ಬಗೆಯಿಂದಲೂ ದೇಹದಂಡನೆಯ ಶಿಕ್ಷೆಯು ಆಗುವದಿಲ್ಲ. ಸಾಲಿಯಲ್ಲಿ ಛಡಿಯ ವರ್ತನವೇ ಆಗುವದಿಲ್ಲ. ಶಿಕ್ಷಕರು ಯಾವಾಗಲೂ ಹುಡುಗರ ಅಂತಃಕರಣದಲ್ಲಿ ನ್ಯಾಯ ಬುದ್ಧಿ, ಕರ್ತವ್ಯ ಬುದ್ಧಿ, ವಿವೇಕ, ಸಮದೃಷ್ಟಿ ಮುಂತಾದ ಸದ್ಭಾವನೆಗಳನ್ನೇ ಹುಟ್ಟಿಸುವ ಹಂಬಿಕೆಗಳನ್ನು ಮಾಡುವವರಲ್ಲಿ ತೊಡಗಿರಬೇಕು. ಫ್ರೇಬೆಲನ ಶಿಕ್ಷಣಪದ್ಧತಿಯಿಂದ ಈ ಎಲ್ಲ ಸದ್ಭಾವನೆಗಳ ಉದಯವು ಬಲು ಬೇಗ ಆಗುತ್ತದೆ. ಒಬ್ಬ ಸರದಾರನ ಮಗನ ಕಥೆಯನ್ನು ನಾನು ನಿಮಗೆ

ಹಿಂದೆ ಹೇಳಿದ್ದೇನೆ. ಅದು ನಿಮ್ಮ ಸ್ಮರಣದಲ್ಲಿರಬಹುದು. ಅದರಿಂದ ಫ್ರೇಬೆಲನ ಶಿಕ್ಷಣ ಪದ್ಧತಿಯ ಗೌರವವು ಎಷ್ಟೆಂಬದು ತಿಳಿಯುತ್ತದೆ.

ಶಿಕ್ಷಣ ಪದ್ಧತಿಯ ಮೂಲಾಧಾರಗಳೇ ಎಂದು ನಾನು ಹಿಂದೆ ಹೇಳಿದ ಮೂರು ಗುಣಗಳಂತೂ ಫ್ರೇಬೆಲನ ಶಿಕ್ಷಣ ಕ್ರಮದಲ್ಲಿ ಸಂಪೂರ್ಣವಾಗಿ ವಾಸ ಮಾಡುತ್ತವೆ. ಅದರಿಂದ ಅವನ ಶಿಕ್ಷಣ ಪದ್ಧತಿಯ ಮಹತ್ವವು ಇಷ್ಟು ಬೆಳೆದದೆ. ಅತನು ಪ್ರತ್ಯಕ್ಷ ಅನುಭವ ತಕೊಂಡು ತನ್ನ ಶಿಕ್ಷಣ ಪದ್ಧತಿಯನ್ನು ನೆಲೆಗೊಳಿಸಿದ್ದಾನೆ. ತೀರ ಚಿಕ್ಕಂದಿನಿಂದ ಸಣ್ಣ ಮಕ್ಕಳ ನೈಸರ್ಗಿಕ ಪ್ರವೃತ್ತಿಗಳು ಹ್ಯಾಗೆ ಇರುತ್ತವೆಂಬದನ್ನು ಚನ್ನಾಗಿ ನೋಡಿ, ಅವುಗಳ ವಿಷಯದಲ್ಲಿ ಪೂರಾ ಆಲೋಚನೆಯನ್ನು ಮಾಡಿ, ಅವರ ಮನಸಿನ ಬಲವುಗಳನ್ನು ಅನುಸರಿಸಿ, ಅತನು ತನ್ನ ಪದ್ಧತಿಯನ್ನು ರಚಿಸಿದನು.

ತಾನು ಕಲಿಯುತಕ್ಕಂಥಾದೇನಾದರೂ ಇನ್ನೊಬ್ಬರಲ್ಲಿ ಇದ್ದರೆ, ಅದನ್ನು ಅವರಿಂದ ಕಲಿತುಕೊಳ್ಳಲಿಕ್ಕೆ ಅವನು ಹಿಂದೆ ಮುಂದೆ ನೋಡುತ್ತಿದ್ದಿಲ್ಲ. ಸರ್ವರಿಂದ ಶಿಕ್ಷಣ ಹೊಂದುವ ಈ ಗುಣವು ಬಹಳ ಗೌರವವುಳ್ಳದ್ದು. ಇದು ಪ್ರತಿಬಬ್ಬ ಶಿಕ್ಷಕನಲ್ಲಿ ಇರುವದು ಅವಶ್ಯವು. ಫ್ರೇಬೆಲನು ಶಿಕ್ಷಣ ಪದ್ಧತಿಯನ್ನು ರಚಿಸುವದಕ್ಕೆ ಸಾಧನೀಭೂತವಾದದ್ದೆಂದು ತಿಳಿದು, ಮೊದಲು ಚಿಕ್ಕ ಮಕ್ಕಳ ತಾಯಂದಿರ ನಡಾವಳಿ ಹ್ಯಾಗಿರುತ್ತತೆ, ಅವರು ತಮ್ಮ ಮಕ್ಕಳನ್ನು ಹ್ಯಾಗೆ ನಡಿಸಿಕೊಳ್ಳುತ್ತಾರೆ, ಮುಂತಾದ ಸಂಗತಿಗಳನ್ನು ಪರಿಶೋಧಿಸಹತ್ತಿದನು. ಅವನು ಯಾವಾಗಲೂ ಆ ಊರೊಳಗೆ ಅತ್ತಿತ್ತ ಅಡ್ಡಾಡಿ ಹುಡುಗರನ್ನೂ ಅವರ ತಾಯಂದಿರನ್ನೂ ಅವಲೋಕಿಸುತ್ತಾ ತಿರುಗಾಡುತ್ತಿದ್ದನು. ಅ

ವನು ಹುಡುಗರೊಡನೆ ಬಳ್ಳೀ ಸವಿಮಾತುಗಳನ್ನಾಡುತ್ತಿದ್ದನು; ಮತ್ತು ಬಳ್ಳೀ ಪ್ರೀತಿಯಿಂದ ಅವರೊಡನೆ ಆಟಗಳನ್ನು ಆಡುತ್ತಿದ್ದನು. ಹುಡುಗರೊಳಗಿನವನೇ ತಾನೊಬ್ಬನೆಂದು ತನ್ನ ನಡಾವಳಿಯಿಂದ ಅವರಿಗೆ ತೋರಿಸುತ್ತಿದ್ದವರಿಂದ, ಅವನೆಸುತ್ತಲು ಬಹಳ ಹುಡುಗರು ನೆರೆಯುತ್ತಿದ್ದರು. ಹುಡುಗರ ಗುಂಪು ಯಾವಾಗಲೂ ಅವನ ಹತ್ತರ ಇದ್ದೇ ಇರುತ್ತಿತ್ತು. ಊರೊಳಗಿನ ಜನರು ಅವನಿಗೆ ಹುಚ್ಚನೆನ್ನುತ್ತಿದ್ದರು. ಮ್ಯೋಡವೆಂ' ಬುಲೋ ಎಂಬವಳೊಬ್ಬ ಲೆಸ್ಬ್ರೀಯಾದೇಶದ ಧೊರೆಸಾನಿಯು ಅವನಿರುವ ಊರಿಗೆ ಹವಾಬದಲಿಸಲಿಕ್ಕೆ ಬಂದಿದ್ದಳು. ಒಂದು ದಿವಸ ಆಕೆಯು ಅವನನ್ನು ಬೀದಿಯಲ್ಲಿ ಕಂಡು, ತನ್ನ ಹತ್ತರಿರುವ ನಿಂತಂಥ ಒಬ್ಬ ಗೃಹಸ್ಥನನ್ನು—ಈ ಹುಡುಗರ ಗುಂಪು ಕಟ್ಟಿಕೊಂಡು ಬೀದಿಯಲ್ಲಿ ತಿರುಗಾಡುವ ಗೃಹಸ್ಥನು ಯಾರು? ಎಂದು ಕೇಳಿದಳು. ಆಗ ಆ ಗೃಹಸ್ಥನು ಉತ್ತರ ಕೊಟ್ಟದ್ದೇನೆಂದರೆ—" ಈತನು ಈ ಊರೊಳಗಿನ ಒಬ್ಬ ಹುಚ್ಚನು. ಈತನ ಹೆಸರು ಫ್ರೇಬೆಲನು. ಇವನಿಗೆ ಸಣ್ಣ ಹುಡುಗರನ್ನು ಸಂಗಡಕರಕೊಂಡು ತಿರುಗಾಡುವ ಹುಚ್ಚು ಬಹಳವಿದೆ. ತಾಯಂದಿರು ತಮ್ಮ ಮಕ್ಕಳನ್ನು ಇವನಿಗೆ ಒಪ್ಪಿಸಿ ಬಿಟ್ಟು, ತಾವು ಸುಖದಿಂದ ಕಾಲಕಳೆಯುತ್ತಾರೆ. ಅವನು ಆ ಹುಡುಗರನ್ನು ಜೋಕೆ ಮಾಡುತ್ತಾನೆ." ಈ ಉತ್ತರವನ್ನು ಕೇಳಿ, ಮ್ಯೋಡವೆಂ' ಬುಲೋ ಎಂಬವಳು ಸಮಾಧಾನಪಡಲಿಲ್ಲ. ಫ್ರೇಬೆಲನು ಹುಚ್ಚನೆಂದು ಆಕೆಗೆ ತೋರಲಿಲ್ಲ. ಆದಕಾರಣ, ಆಕೆಯು ಆ ಮಾತಿನ ವಿಚಾರವನ್ನು ಹೆಚ್ಚಿಗೆ ಮಾಡಿ, ಫ್ರೇಬೆಲನ ಗುರುತು ಮಾಡಿಸಿಕೊಂಡು, ನಿಜವಾವಸ್ಥಿತಿ ಏನೆಂಬದನ್ನು ಅರಿತುಕೊಂಡಳು. ಮುಂದೆ ಅವನ ಶಿಕ್ಷಣ ಪದ್ಧತಿಯು ಮಹತ್ವವು ಆಕೆಗೆ ತೋ

ಬಂದದ್ದರಿಂದ, ಆಕೆಯು ಅತನ ಪಟ್ಟದ ಶಿಷ್ಯಳಾದಳು. ತಮ್ಮ ದೇಶದಲ್ಲಿ ಆ ಶಿಕ್ಷಣಪದ್ಧತಿಯನ್ನು ಹಬ್ಬಿಸಬೇಕೆಂದು ಆಕೆಯು ಬಹಳ ಪ್ರಯತ್ನ ಮಾಡಿದಳು. ತಮ್ಮ ಮಕ್ಕಳೊಡನೆ ತಾಯಂದಿರ ನಡತೆಗಳು, ಅವರ ಹಾಡುಗಳು, ಹುಡುಗರ ಆಟಗಳು, ಹುಡುಗರಿಗೆ ಆನಂದವಾಗುವ ಸಂಗತಿಗಳು ಮುಂತಾದವುಗಳನ್ನು ಚನ್ನಾಗಿ ಅವಲೋಕಿಸಿ, ಫ್ರೋಬೆಲನು ತನ್ನ ಶಿಕ್ಷಣಪದ್ಧತಿಯನ್ನು ರಚಿಸಿದನು. ಆಟಗಳಿಗೂ ಮನೋವೃತ್ತಿಗಳಿಗೂ ತಳಕುಹಾಕಿ, ಅವುಗಳ ಕಾರ್ಯ ಕಾರಣವನ್ನು ಹುಟ್ಟಿಸುವದೇ ಅತನ ಪದ್ಧತಿಯ ಮೂಲ ಉದ್ದೇಶವು. ಉಳಿದ ಶಿಕ್ಷಣ ಪದ್ಧತಿಯಿಂದ ಶಿಷ್ಯರಿಗೆ ಸರ್ವಾಂಗಸುಂದರತ್ವವುಬಾರದು. ಮಾನಸಿಕ ಶಾರೀರಿಕ ಶಕ್ತಿಗಳು ಬಂದೆರಡೇ ಬೆಳೆದು ಮಿಕ್ಕಾದವೆಲ್ಲ ಹಾಗೇ ಉಳಿಯುತ್ತವೆ. ಹಾಗೇನೂ ಆಗಗೊಡದೆ ಹುಡುಗರ ಯಾವತ್ತು ಶಾರೀರಿಕ ಶಕ್ತಿಗಳನ್ನೂ ಮಾನಸಿಕ ಶಕ್ತಿಗಳನ್ನೂ ಬಂದೇಸಮನಾಗಿ ಬೆಳಿಸುವ ವ್ಯವಸ್ಥೆಯನ್ನು ತನ್ನ ಶಿಕ್ಷಣ ಪದ್ಧತಿಯಲ್ಲಿಟ್ಟಿದ್ದಾನೆ. ಕಣ್ಣು, ಕಿವಿ, ಮೂಗು, ಕೈ, ನಾಲಿಗೆ, ಕಾಲು, ಶ್ವಾಸಕೋಶಗಳು ಶರೀರದೊಳಗಿನ ನ್ನಾಯುಗಳು ಮುಂತಾದ ಶಾರೀರಿಕ ಶಕ್ತಿಗಳು ಇದೇ ಮೇರೆಗೆ ವಿಚಾರ, ಸ್ಮರಣ, ವಿವೇಕ ಮುಂತಾದ ಮಾನಸಿಕ ಶಕ್ತಿಗಳು, ಇವುಗಳೆಲ್ಲ ಏಕಪ್ರಕಾರವಾಗಿ ಅಭಿವೃದ್ಧಿ ಹೊಂದಲಿಕ್ಕೆ ಫ್ರೋಬೆಲನಶಿಶುಶಿಕ್ಷಣ ಪದ್ಧತಿಯು ಬಂದು ಉತ್ತಮವಾದ ಸಾಧನವಾಗಿದೆ. ಇಷ್ಟುಸಾಕು; ಇನ್ನು, ಈ ಪದ್ಧತಿಯ ಮಹತ್ವವನ್ನೇ ವರ್ಣಿಸುತ್ತ ಕೂಡುವದನ್ನು ಬಿಟ್ಟು, ಅದು ಹ್ಯಾಗದೆ ಎಂಬವನ್ನು ವಿವರಿಸಿ ಹೇಳುವೆನು.

COURSES OF STUDY OF THE DHARWARTRAINING COLLEGE.

ಧಾರವಾಡ ಟ್ರೇನಿಂಗಕಾಲೇಜದ ಮೊದಲನೇ ಎರಡನೇ ಮೂರನೇ ವರ್ಷದ ಪರೀಕ್ಷೆಗಳಿಗೆ ಬರಲಿಚ್ಛಿಸುವ ಜನರಿಗೆ ತಿಳಿಯುವದರಸಲುವಾಗಿಕೆಳಗಿನ ಅಭ್ಯಾಸ ಕ್ರಮಗಳು ಪ್ರಸಿದ್ಧಿಸಲ್ಪಟ್ಟವೆ:—

೧ನೇ ವರ್ಷದ ಅಭ್ಯಾಸ ಕ್ರಮ.

೧. ಶಿಕ್ಷಣಪದ್ಧತಿ.—(ಅ.) ಬುದ್ಧಿ ಬಲಿಯುವಂತೆ ಓದುಬರಹ ಲೆಖ್ಖಗಳನ್ನು ಕಲಿಸುವ ಪದ್ಧತಿಗಳ ಜ್ಞಾನ.

(ಬ.) ಶಿಕ್ಷಣಪದ್ಧತಿಯ ಮೂಲತತ್ವಗಳು.

(ಕ.) ದೇಶಭಾಷೆಯ ಶಾಲೆಗಳ ಮಾಸ್ತರರ ಕಾಯಿದೆಯ ಮತ್ತು ಶಾಲೆಯನಮೂನೆಗಳ ಜ್ಞಾನ.

೨. ಕನ್ನಡ—(ಅ.) ಕನ್ನಡ ವಾಚನವ ಮೊದಲಿನ ಐದು ಪುಸ್ತಕಗಳು ಹಾಗು ಕವಿತೆಯ ಎರಡು ಪುಸ್ತಕಗಳು, ಶಬ್ದಾರ್ಥಭಾವಾರ್ಥ ಸಹಿತ.

(ಬ.) ವ್ಯಾಕರಣ, ಶಬ್ದಪ್ಯುತ್ಪತ್ತಿ (ಚಿಂತಾಮಣಿ ಪೀಠಕರಣವರು ಮಾಡಿದ್ದು) ಪೂರ್ವಾರ್ಧ.

(ಕ.) ನಿಬಂಧ.

(ಡ.) ಕೈ ಬರಹ, ಮತ್ತು ಕಿತ್ತೋದ ಹಾಕೋಣ.

೩. ಉರ್ದು—(ಅ) ಮಜವೂ ಏಸಖುನ್ ೧ನೇ ಭಾಗದೊಳಗಿನ ೩೫ ದ್ವಿಪದಗಳು, ಉರ್ದು ವಾಚನದ ೫ ಪುಸ್ತಕಗಳ ಪುನರಾವರ್ತನೆ, ಖುತೂತೆ ಅಹಮದಿ ಪೂರ್ವಾರ್ಧ.

(ಬ.) ವ್ಯಾಕರಣ ಹಾಲ್‌ರೊಯಿಡನ ಕವಾಯಿದೆ ಉರ್ದು ವಾಕ್ಯಖಂಡವವರೆಗೆ.

(ಕ.) ನಿಬಂಧ.

(ಡ.) ಕೈಬರಹ, ಕಿತ್ತೋ ಹಾಕೋಣ.

೪. ಗಣಿತ—(ಅ.) ಅಂಕಗಣಿತ ಸಂಪೂರ್ಣ, ನಿಯಮಗಳ

ಮತ್ತು ಅವುಗಳ ಸಿದ್ಧತೆಯ ಜ್ಞಾನ (ಶೇವು, ವಿಮೆ, ಘಾತಪ್ರಕರಣ, ಮೂಲಪ್ರಕರಣ, ಗಣಿತಶ್ರೇಢಿ, ಭೂಮಿತಿಶ್ರೇಢಿಗಳ ಸಿದ್ಧತೆಯು ಹೊರ್ತು).

(ಬ.) ಜಮಾಖರ್ಚು.

(ಕ.) ಭೂಮಿತಿಯ ೧ನೇ ಪುಸ್ತಕ.

(ಡ.) ಸುಲಭ ರೇಖಾಫಲ, ಕ್ಷೇತ್ರಫಲ.

(ಇ.) ಬಾಯಿಲೆಕ್ಕ.

೫. ಇತಿಹಾಸ, ಭೂಗೋಲ-(ಅ) ಹಿಂದುಸ್ಥಾನದ ಇತಿಹಾಸ;

(ಬ) ಸಮಗ್ರ ಭೂವರ್ಣನೆ; ಹಿಂದುಸ್ಥಾನದ ವಿಶೇಷ ಜ್ಞಾನ, ಮುಂಬಯಿ ಇಲಾಖೆಯ ನಕಾಶೆಯನ್ನು ಕರೀ ಹಲಿಗೆಯ ಮೇಲೆ ತೆಗೆಯುವದು.

೬. ಶಾಸ್ತ್ರೀಯ ವಿಷಯ—ಪದಾರ್ಥ ವಿಜ್ಞಾನ ಶಾಸ್ತ್ರದ ಮೂಲತತ್ವಗಳು (ಕೇರೋಪಂತಕೃತ ಪ. ವಿ. ಶಾಸ್ತ್ರದ ಕನ್ನಡ ಭಾಷಾಂತರ), ರೂಢಿಯೊಳಗಿನ ಪದಾರ್ಥಗಳ ಸಾಧಾರಣ ಜ್ಞಾನ, ಕೌತುಕದ ಬಿಡಿವೆಗಳನ್ನು ಸಂಗ್ರಹಿಸುವ ಕ್ರಮ.

(ಕ.) ಆರೋಗ್ಯವಿದ್ಯೆ.

೭. ಸಂಸ್ಕೃತ—ರೂಪಾವಳಿ ಮತ್ತು ೧ನೇ ಪುಸ್ತಕ ಪೂರಾ.

ಫಾರ್ಸಿ—ಹೊಲರಾಯಿಡನ ೧ನೇ, ೨ನೇ ಪುಸ್ತಕಗಳು, ಅಮ್ದನ್ನಾಮಾ.

೮. ತಾಲೀಮು—ಕಾಲೆಯ ಕವಾಯಿತು, ಸಾಮು, ಲೋಡು, ಸುಲಖಿಂಬ.

೨ನೇ ವರ್ಷದ ಅಭ್ಯಾಸ ಕ್ರಮ.

೧. ಶಿಕ್ಷಣಪದ್ಧತಿ—೧ನೇ ವರ್ಷದ ಯಾವತ್ತು ವಿಷಯಗಳ ವಿಶೇಷಜ್ಞಾನ, ಫೌಲರ ಸಾಹೇಬರ ಶಿಕ್ಷಣ ಪದ್ಧತಿ ಪೂರಾ, ಬಾ

ಲಕರ ಮಾನಸಿಕ ಶಕ್ತಿಗಳು ವಿಕಾಸ ಹೊಂದುವ ಕ್ರಮದ ಜ್ಞಾನ, ಮತ್ತು ಅವುಗಳನ್ನು ಬಲಪಡಿಸುವ ತಕ್ಕ ಮಾರ್ಗಗಳ ಜ್ಞಾನ.

೨. ಕನ್ನಡ-(ಅ) ಕನ್ನಡ ಪಾಠದ ಒನೇ ಪುಸ್ತಕ, ಪದಾರ್ಥ ವಿಜ್ಞಾನ ಶಾಸ್ತ್ರದ ಹಾಗು ಕಾದಂಬರಿಯ ಪಾಠಗಳ ಸಹಿತ.

(ಬ) ಜೈಮಿನಿ ಗ್ಯಾಂ ಶ್ಲೋಕಗಳು, ಶಬ್ದಾರ್ಥ, ಭಾವಾರ್ಥ, ಕಥಾ ಸಂದರ್ಭಗಳ ಸಹಿತ.

(ಕ) ವ್ಯಾಕರಣವಲ್ಲಿ ಹೆಚ್ಚು ಪ್ರವೀಣತೆ, ಶಬ್ದವ್ಯುತ್ಪತ್ತಿ (ಜಿಂತಾಮಣಿ ಪೀಠಕರ ಇವರುಮಾಡಿದ್ದು) ಪೂರಾ, ಕವಿತಾಪದ್ಧತಿ.

(ಡ) ಕೈ ಬರಹ, ಕಿತ್ತೀಹಾಕೋಣ.

೩ ಉರ್ದು-(ಅ) ಮಜಮೂ ಏಸಖುನ್ನ ಗ್ಯಾಂ ದ್ವಿಪದಗಳು,

(ಬ) ಅಖುಲಾಕಿ ಕಾಫಿ ಪೂರಾ.

(ಕ) ಹೊಲರಾಯಿಡನ ಕವಾಯಿದೆ ಉರ್ದುಪೂರಾ. ಮೊದಲನೇ, ಎರಡನೇ ವರ್ಷದ ವರ್ಗದಲ್ಲಿ ಕಲಿತ ಕವಿತೆಗಳ ಛಂದೋಜ್ಞಾನ.

(ಡ) ಕೈ ಬರಹ; ಕಿತ್ತೀ ಹಾಕೋಣ.

೪. ಗಣಿತ——(ಅ) ಅಂಕಗಣಿತ ಪೂರಾ. ಅಂಕಗಣಿತದ ನಿಯಮಗಳೂ, ಸಿದ್ಧತೆಗಳೂ.

(ಬ) ಬೀಜಗಣಿತ—ಸಾಧಾ ಬೇರಿಜು, ವಜಾಬ್ಯಾಕಿ, ಗುಣಾಕಾರ, ಭಾಗಾಕಾರ, ಸುಲಭ ಸಮೀಕರಣಗಳು, ಸಮೀಕರಣಾತ್ಮಕ ಪ್ರಶ್ನೆಗಳು; ಭೂಮಿತಿಯ ಮೊದಲನೇ, ಎರಡನೇ ಪುಸ್ತಕಗಳು.

(ಕ) ಕ್ಷೇತ್ರಫಲ, ಘನಫಲ.

೫. ಇತಿಹಾಸ, ಭೂಗೋಲ—ಇಂಗ್ಲಂಡ ದೇಶದ ಸಂಕ್ಷಿಪ್ತ

ಇತಿಹಾಸ, ಹಿಂದೂದೇಶಕ್ಕೂ ಇಂಗ್ಲಂಡ ದೇಶಕ್ಕೂ ಇರುವ ಸಂಬಂಧದ ವಿಶೇಷಜ್ಞಾನ.

(ಬ) ಪ್ರಾಕೃತಿಕ ಭೂಗೋಲ (ಜೀಕೇ ಸಾಹೇಬರು ಮಾಡಿದ ಪುಸ್ತಕದ ಭಾಷಾಂತರ), ಬ್ರಿಟಿಶ್ ನಡುಗಡ್ಡೆಗಳ ಭೂಗೋಲ, ವರ್ಗಕ್ಕೆ ನೇಮಿಸಿದ ಇತಿಹಾಸ ತಿಳಿಯಲಿಕ್ಕೆ ಬೇಕಾಗುವಷ್ಟು ಭೂಗೋಲ. ನಕಾಶೆ ತೆಗಿಯೋಣ.

೬. ಶಾಸ್ತ್ರೀಯ ವಿಷಯಗಳು—(ಅ) ಪದಾರ್ಥವಿಜ್ಞಾನಶಾಸ್ತ್ರ ಕುಕ್ ಸಾಹೇಬರು ಮಾಡಿದ್ದು.

೭. ಸಂಸ್ಕೃತ—(ಅ) ರಾಮಾಯಣದ ೭೫೦ ಶ್ಲೋಕಗಳು (ಅಥವಾ ಸಟೀಕ ಅವೃತ್ತಿಯ ಹೀತೋಪದೇಶದ ೬೦ ಪುಟಗಳು), ಸಂಸ್ಕೃತ ೭ನೇ ಪುಸ್ತಕದ ೧೨೦ ಪಾಠಗಳು.

ಪರ್ಸಿಯನ್—ಜೋಸ್ತಾನದ ಅಗಾಜ ದಾಸ್ತಾನದಿಂದ ೧ನೇ ಅಧ್ಯಾಯದೊಳಗಿನ ೪೦೦ ದ್ವಿಪದಿಗಳು; ಗುಲಿಸ್ತಾನದ ೧ನೇ, ೪ನೇ ಅಧ್ಯಾಯಗಳು. ಹಾಗೂ ನಿಸೂರ ಅಲಿಯವರ ಕವಾಯಿದ ಫಾರಸಿ ೧೪ ಪುಟಗಳು.

೮. ತಾಲೀಮು—೧ನೇ ವರ್ಷದ ವಿಷಯುಗಳಲ್ಲದೆ ಪ್ಯಾರಲಲ್‌ಬಾರ, ಪಾಯಿಂಟಲ್‌ಬಾರ, ಹಾರೋಣ, ಓಜೋಣ.

೩ನೇ ವರ್ಷದ ಅಭ್ಯಾಸ ಕ್ರಮ.

೧. ಶಿಕ್ಷಣಪದ್ಧತಿ—(ಅ) ಶಿಕ್ಷಣಪದ್ಧತಿಯ ಪೂರ್ಣಜ್ಞಾನ.

(ಬ) ಶಾಲಾವ್ಯವಸ್ಥೆಯ ಸಂಬಂಧದ ಯಾವತ್ತು ಸಂಗತಿಗಳಜ್ಞಾನ.

(ಕ) ಸ್ವಭಾವ, ಗುಣ, ಚಟುಗಳನ್ನು ಹಚ್ಚುವಕ್ರಮ. ನೀತಿ ಶಿಕ್ಷಣದ ತತ್ವಗಳು.

೨. ಕನ್ನಡ———(ಅ) ಕವಿತಾ (೧) ರಾಜಶೇಖರ ೨ನೇ ಅಶ್ವಾಸ; (೨) ಜೈಮಿನಿ ೧೫೦ ಶ್ಲೋಕಗಳು; ರಾಮಾಯಣದ ೧೫೦ ಶ್ಲೋಕಗಳು.

(ಬ) ವಾಚನ ಮುದ್ರಾರಾಕ್ಷಸ ಅಥವಾ ಪ್ರಿನ್ಸಿಪಾಲರು ನೇ ಮಿಸಿದ ಅಷ್ಟೇ ಗಡಬಾದ ಪುಸ್ತಕವು.

(ಕ) ವ್ಯಾಕರಣ, ಶಬ್ದವ್ಯುತ್ಪತ್ತಿ, ಕವಿತಾಪದ್ಧತಿ ಇವುಗಳಲ್ಲಿ ಪ್ರವೀಣತೆ.

(ಡ) ನಿಬಂಧ, ಕೈಬರಹಕ್ಕೆ ವಿಶೇಷ ಲಕ್ಷಕೊಡಲಾದೀತು.

೩. ಉರ್ದು———(ಅ) ಮುಜಮೂಏಸಬುನ್ ೧೫೦ ದ್ವಿಪದಿಗಳು.

(ಬ) ಫಸಾನೇ ಅಜಾಯಿಬ ಪೂರ್ವಾರ್ಧ.

(ಕ) ಕವಾಯಿದೆ ಉರ್ದು (ವಾಯುವ್ಯಪ್ರಾಂತದ ಆವೃತ್ತಿ ಭಾಗ ೩ ಇಲ್ಮೆಳುರೂಜ (ಕವಿತಾಪದ್ಧತಿ)

೪. ಗಣಿತ———(ಅ) ಅಂಕಗಣಿತ ಸಂಪೂರ್ಣ, ಕಠಿಣ ಪ್ರಶ್ನೆಗಳ ಸಹಿತ.

(ಬ) ಬೀಜಗಣಿತ ವರ್ಗ ಸಮೀಕರಣಪೂರ್ತಿ.

(ಕ.) ಭೂಮಿತಿಯ ೧ನೇ ೨ನೇ ೩ನೇ ಪುಸ್ತಕಗಳೂ ೬ನೇ ಪುಸ್ತಕದ ೧೦ ಸಿದ್ಧಾಂತಗಳೂ; ಸುಲಭಪ್ರಶ್ನೆಗಳು.

(ಡ.) ಕ್ಷೇತ್ರಫಲ ಘನಫಲ ಸಂಪೂರ್ಣ.

೫. ಇತಿಹಾಸ, ಭೂಗೋಲ—(ಅ) ಜಗತ್ತಿನ ಇತಿಹಾಸದ ಮೂಲತತ್ವಗಳು; ಭೂಗೋಲಸಮಗ್ರ ಭೂವರ್ಣನೆ; (ಬ) ಹಿಂದುಸ್ಥಾನದ ನಕಾಶೆಯನ್ನು ತೆಗಿಯುವದು.

೬. ಶಾಸ್ತ್ರೀಯ ವಿಷಯಗಳು-(ಅ.) ಪದಾರ್ಥ ವಿಜ್ಞಾನ ಶಾಸ್ತ್ರದ ತತ್ವಗಳೂ ಸಾಧಾರಣಪ್ರಯೋಗಗಳೂ.

(ಬ.) ಜ್ಯೋತಿಷಶಾಸ್ತ್ರ (ಕುಕ್‌ಸಾಹೇಬರು ಮಾಡಿದ್ದು.)

೫. ಸಂಸ್ಕೃತ—(ಅ.) ರಘುವಂಶದ ೩ ಸರ್ಗಗಳು ಅಥವಾ ಪ್ರಿನ್ಸಿಪಾಲರು ನೇಮಿಸಿದ ಎರಡನೇ ಯಾವದೊಂದು ಗ್ರಂಥದೊಳಗಿನ ಅಷ್ಟೇ ಪದ್ಯಗಳು. ಸಂಸ್ಕೃತ ೨ನೇ ಪುಸ್ತಕದ ೨೦ ಪಾಠಗಳು.

ಪರ್ಸಿಯನ್—(೧.) ಸಿಕಂದರನಾಮಾ—ತಿನಾಜದಾಸ್ತಾನೆದಿಂದ ೮೦ ಶ್ಲೋಕಗಳು.

(೨.) ಅನ್ವಾರೆ ಸಹೆಲಿ ೯–೧೧ ಅಧ್ಯಾಯಗಳು.

(೩.) ನಸೀರಲ್ಲಿಯವರ ಕವಾಯಿದೆ ಫಾರ್ಸಿಯ ೧ನೇ, ೨ನೇ ಅಧ್ಯಾಯಗಳು.

(೪.) ಸುಲಭವಾಕ್ಯಗಳ ಭಾಷಾಂತರ.

. . . . . .

೮. ಅರ್ಥಶಾಸ್ತ್ರ—ಫಾಸೆಟ್‌ರವರ ಅರ್ಥಶಾಸ್ತ್ರ ಸಂಪೂರ್ಣ.

೯ ತಾಲೀಮು—ಸಂಪೂರ್ಣ.

ಧಾರವಾಡ
೨೦ಅಕ್ಟೋಬರ ೧೮೯೦ } R. B. KARANDIKAR,
ಪ್ರಿನ್ಸಿಪಾಲ.

NOTIFICATION.

ನೋಟೀಸು.

ನಂಬರು ೪೯೯೪ ಇಸವಿ

ಧಾರವಾಡ ಕರ್ನಾಟಕ ಬುಕ್ ಡಿಪೋ ಮುದ್ರಾಲಯದಲ್ಲಿ ಮುದ್ರಿಸಿದ ಶಬ್ದಮಂಜರಿ ಎಂಬ ಕನ್ನಡ ಕೋಶವು ಮೆಹೆ ಬ್ಲಾನ್ ಡಿರೆಕ್ಟರ ಆವ್ ಪಬ್ಲಿಕ ಇನ್ಸಟ್ರಕ್ಶನ್ ಸಾಹೇಬರ ಅಪ್ಪಣೆಯಮೇರೆಗೆ ಶಾಲೆಗಳ ಲೈಬ್ರರಿಗಳಿಗಾಗಿ ಕೊಳ್ಳಲಿಕ್ಕೆ ಮಂಜೂರ ಮಾಡಲ್ಪಟ್ಟಿರುತ್ತದೆ.

ಧಾರವಾಡ,
೧೬ನೇ ಅಕ್ಟೋಬರ ೧೮೯೦. } S. V. PATWARDHAN
ಎಜ್ಯುಕೇಶನಲ್ ಇನ್‌ಸ್ಪೆಕ್ಟರ್
ದಕ್ಷಿಣ ಭಾಗ.

DHARWAR TRAINING COLLEGE CERTIFICATE EXAMINATION, KANARESE. 1890.

ಧಾರವಾಡ ಟ್ರೇನಿಂಗ ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆ

೧೮೯೦.

ಕನ್ನಡ ಭಾಷಾ ವಿಷಯ.

೧ನೇ ವರ್ಷದ ವರ್ಗ.

(ಬಲಕ್ಕೆ ಬರೆದ ಅಂಕಿಗಳು ಪ್ರಶ್ನೆಗಳ ಪೂರ್ಣ ಗುಣಗಳು.)

೧. ಓಸ್ಕರ, ಕುರಿತು, ಹೌದು, ಹು, ಇವು ಏನು ಅವೆ? ಇವನ್ನು ೪
ವಾಕ್ಯದಲ್ಲಿ ಉಪಯೋಗಿಸಿ ಉದಾಹರಣ ಸಹಿತ ವಿವರಿಸು,

೨. ಸಂಗ್ರಹಣ, ವ್ಯುತ್ಕ್ರಮ ಪ್ರತಿಷೇದಾರ್ಥಕ ಅವ್ಯಯ ಅಂದರೇನು? ಉದಾಹರಣ ಸಹಿತ ಬರಿ. ೪

೩. ಸರಳ, ಪರುಷ ವರ್ಣಗಳು ಯಾವವು? ಪ್ರತ್ಯಯ ಅಂದರೇನು? ಪ್ರಕೃತಿ ಕೃದಂತ ಅಂದರೇನು? ಏಕವಚನವನ್ನು ಬಹು ವಚನದಲ್ಲಿ ಎಂಥಲ್ಲಿ ಉಪಯೋಗಿಸುವರು? ೪

೪. ಕೆಳಗೆ ತೋರಿಸಿದ ಶಬ್ದಗಳ ಸಂಧಿ ಬಿಡಿಸು. ಮತ್ತು ಅವು ಯಾವ ಸಂಧಿಗಳು? ೪

ಜೋಯಿಂದು, ಈರೈದು, ಕೆನ್ನೀರು, ಕಲ್ಮರ, ಮುಂಜೆರಗು, ಮೂತಿಗೆ.

೫. ಕೆಳಗೆಬರೆದ ಶಬ್ದಗಳ ವ್ಯುತ್ಪತ್ತಿಯನ್ನು ಬರಿ. ೪

ಅಜ್ಜ, ಇಚ್ಛಾ, ಕೀಲಿ, ಸಂತಾನ, ವಿರುದ್ಧ, ಉತ್ತೇಜನ, ಆತುರ, ಹೆಸ್ಕ್ರಿ.

೬. ಕರ್ಮಧಾರಯ ಸಮಾಸದ ಲಕ್ಷಣವನ್ನು ವಿವರಿಸು. ಕೆಳಗೆ ತೋರಿಸಿದ ಶಬ್ದಗಳ ಸಮಾಸಗಳು ಯಾವವು? ೪

ಕೈಕಾಲು, ಐಗೇಣು, ಅರಳೀಕಟ್ಟೆ, ಭೂತಳ, ಪಾತಕಾಲೆ.

೭. ಕೃದ್ವಾಚಿ, ಕೃದ್ಧಾಮ, ಕ್ರಿಯಾನಾಮ, ಭಾವಕರ್ತರಿಸ್ರ ಪ್ರಯೋಗ ಹ್ಯಾಗೆ ಆಗುತ್ತವೆ? ೬

೮. "ಜಾಜೀಕಾಯಿ," "ಬುದ್ಧಿವಂತನೇ ಬಲವಂತನು" ಈ ಪಾತಗಳ ಟಿಪ್ಪಣಿಗಳನ್ನು ಸ್ವಲ್ಪದರಲ್ಲಿ ಮಾಡು. ೬

೯. ಕೆಳಗೆ ಬರೆದಶಬ್ದಗಳನ್ನು ಸ್ಪಷ್ಟೀಕರಿಸು. ೬

ಐತಿಹ್ಯ ನೋಡಲಾಗಿ, ಎಥಾಸ್ಥಿತ ಕೈಕಾಲು ಬಾಚಿ, ಚೈತ್ಯ

ವಿಕಾರ, ಮುಳವು ಆಯಿತು, ಹರಣ ಹಾರುವದು, ಹಿರ್ರನೆ ಹಿಗ್ಗಿ, ಸ್ನೇಹಕೋಶಗಳು, ಉಷ್ಣತಾ ಗ್ರಾಹಕಶಕ್ತಿಯುಳ್ಳ ಪದಾರ್ಥಗಳು, ಬೋಳ್ಳಿಸಿ, ಮುದ್ದಿಡು, ಅವಿಚ್ಛಿನ್ನವಾಗಿ ತಮ್ಮ ವ್ಯಾಪಾರಗಳನ್ನು ಸಾಗಿಸುತ್ತವೆ, ಪ್ರಕೃತ್ಯಂಶಗಳು, ಬೀಳಿಗೆ.

೧೦. ೧ ಕನ್ನಡ ಭಾಷೆಯು ಸಂಸ್ಕೃತದಿಂದ ಹುಟ್ಟಲ್ಲನೆಂಬುವದಕ್ಕೆ ೧ ಪ್ರಮಾಣಗಳು ಯಾವವು?

೨ ಪದಾರ್ಥಗಳ ಕರ್ತೃತ್ವ ಶಕ್ತಿಯು ನಮ್ಮ ದೈಪ್ಪಿಗೆ ಯಾವ ಯಾವ ಸ್ಥಿತಿಗಳಲ್ಲಿ ಬೀಳುತ್ತದೆ?

೩ ಶಕೆಯಿಂದ ಘನ ಪದಾರ್ಥಗಳು ಪ್ರವಾಹಿಗಳು ಆಗುತ್ತವೆ, ತಂಪಿನಿಂದ ಪ್ರವಾಹಿಗಳು ಘನರೂಪವನ್ನು ಹೊಂದುತ್ತವೆ ಎಂಬದನ್ನು ಉದಾಹರಣ ಸಹಿತ ವಿವರಿಸು.

೪ ನಿರ್ಭೇದ್ಯತ್ವ, ಪರಿಮೇಯತ್ವ, ರಸಾಯನಾಕರ್ಷಣ ಅಂದರೇನು? ತಿಳಿಯುವಂತೆ ಬರಿ. ಭಾರಮಾಪಕ ಯಂತ್ರದ ಉಪಯೋಗವೇನು?

೧೧. ಅರಿದೊಡೇಗೈವರಿದು ತನ್ನ ಮರುಳಾಟ ಮಾರಾವಣನ।
ತಮ್ಮ ನೈಸಲೆ ವಿಭೀಷಣಂ। ಭೀರುಗಳ ನರಿದಪನೆ
ಸೋದರಂಗರಿ ಮುಳಿದ ಸುಗ್ರೀವನೆಂಬವಂಗೆ ॥
ಕಾರುಣ್ಯ ಮಿರ್ದಪುದೆ ಮತ್ತುಳಿದವಂತ್ರಿಗಳ।
ಬಾರುಂಟು ಪೇಳುವರೆ ಸೌಮಿತ್ರಿ ನೀನೊಪ್ಪಿಘೋರಾ
ಟವಿಗೆ ಕೊಂಡು ಬಂದೆ ಕಳುಪುವೊಡಿನ್ನೊರಲ್ದೊಡೇ।
ನಹುದೆಂದಳು ॥

ಕೆಳಗೆ ಗೆರೆ ಹಾಕಿದ ಶಬ್ದಗಳ ಅರ್ಥ ಬರೆದು ಸಂದರ್ಭವನ್ನು ತೋರಿಸಿರಿ, ಪದ ಬಿಡಿಸಿ ಅನ್ವಯ ಹಚ್ಚಿರಿ.

೧೨. ಕೈಲೋಡವಿಡಿದು, ಮೂಲ ನಕ್ಷತ್ರದಷ್ಟಾಂಶದೋಳ್, ಅಪಘಾದ ಹೃತ್ಪಲ, ವಿರಹಿಹೃದಯಕೂಲಂ, ಶತಪತ್ರ ಲೋಚನೆ, ತಲ್ಪ, ವಿಭಿಲೇಂದ್ರ ಪಂಪದೋಳೆಜನಿಸಿ, ಅಂಗೋಪಾಂಗ, ಹಮ್ಮಿಕ್ಕಿಸಿ, ನೀವ

ರಿಸು, ತೇಜವನಾಂತವಂ, ಕಾಷಾಯಾಂಬರ, ಕಾಲಾಪಾಣಿ ಬಜಿ
ಯಾಗಿ, ಪೂರ್ವಕರ್ಮ ಫಲದಿಂದ ಈ ಪದಗಳ ಅರ್ಥವನ್ನು ಸ್ಪಷ್ಟ
ವಾಗಿ ಬರೀರಿ.

೧೩. ಆಶ್ರಮ ವರ್ಣನೆ, ಪುತ್ರಸುಖ, ಜಲೋ ಅಳಿಕೆ, ಪ್ರಧಾನನ
ಕರ್ತವ್ಯ ಇವುಗಳಲ್ಲಿ ಯಾವವಾದರು ಎರಡರ ಬಗ್ಗೆ ನಿಮಗೆ ಗೊತ್ತು
ಇದ್ದ ಪದ್ಯಗಳನ್ನು ಬರೀರಿ.

೮ ನೇ ವರ್ಷದ ವರ್ಗ.

(ಬಲಕ್ಕೆ ಬರೆದ ಅಂಕಿಗಳು ಪ್ರಶ್ನೆಗಳ ಗುಣಗಳು.)

೧. ಕೆಳಗೆ ಬರೆದ ಪದಗಳ ವ್ಯುತ್ಪತ್ತಿಯನ್ನು ಬರಿ. ೯
ಕೋಳಿಗೆ, ಕೊಂಕಳು, ಹಂಗು, ನೆಳವು, ಸುಳ್ಳು, ಬೀಗ, ಗದ್ದಲ,
ಸೂಜು, ಪಲ್ಲಂ, ಬೇನೆ, ಚಕ್ಕಡಿ, ದೀವಟಿಗೆ,

೨. ಆತ್ಮನೇಪದ ಪ್ರಯೋಗವೆಂದರೇನು? ಉದಾಹರಣೆ ಕೊಡು. ೪
ನಾಮಪದಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಹಚ್ಚಬೇಕಾದರೆ ಆಗಮಸಂ
ಬಂಧದ ನಿಯಮಗಳು ಯಾವವು?

೩. ತೃತೀಯಾ, ಷಷ್ಠೀವಿಭಕ್ತಿಗಳ ಉಪಯೋಗಗಳನ್ನು ಉದಾ ೪
ಹರಣೆಗಳ ಸಹಿತವಾಗಿ ವಿವರಿಸು. ವಿಶೇಷಾಧಾರ ವಿಭಾಗಾಧಾರ ತೋರಿ
ಸುವದಕ್ಕೆ ಯಾವ ವಿಭಕ್ತಿ ಉಪಯೋಗಿಸಬೇಕು. ಉದಾಹರಣ ಕೊಡು.

೪. ಆಖ್ಯೆ ಆಖ್ಯಾತಗಳ ಸಂಬಂಧವನ್ನು (ಲಿಂಗ ವಚನಗಳ) ವಿವರಿಸು. ೩

೫. ಮಾಲಿನೀವೃತ್ತ, ಕಾಮಾತುರ, ಅಂಭೋಜನೇತ್ರ, ಕೈಗಲ್ಲು, ೯
ಪುಣ್ಯಪತ್ರ, ಹೊಂಗೆಜ್ಜಿ, ಅರಮನೆ, ಇವು ಯಾವ ಸಮಾಸಗಳು?
ಲಕ್ಷಣಗಳನ್ನು ಹೇಳು.

೬. ಶಾರ್ದೂಲವಿಕ್ರೀಡಿತವೃತ್ತ, ರತೋದ್ಧತಾ, ಕುಸುಮಷಟ್ಪದಿ, ೯
ಚಂಪಕಮಾಲಾ ಈ ವೃತ್ತಗಳ ಲಕ್ಷಣಗಳನ್ನು ಉದಾಹರಣ ಸ
ಹಿತ ಬರಿ. ಅಜಪ್ರಾಸ, ಶರಭಪ್ರಾಸ, ಅಂದರೇನು? ವರ್ಗಪ್ರಾಸದ ಉ
ದಾಹರಣ ಕೊಡು.

೭. ವೃತ್ತಾಂತಾಖ್ಯಮಂದಿರ, ಪಂಚಮಹಾಭೂತಗಳು, ಬೃಹದಾರ ೯
ಣ್ಯ, ಕೋಪನಿಷಧ ಗಾರವದ ಬಿರಮ, ಅರ್ಧತ್ವ, ಜಿಜ್ಞಾಸೆ, ವಕ್ರೀ
ಭವನ, ಗಾಂಭೀರ್ಯದ ಶಣತ್ಕಾರ ವಜ್ರಸ್ಫೋಟದೋಪಾದಿ, ಹಂಗುದೊರೆ

ಜು, ಕಾರ್ಬೊಗೆ, ಘಟಕಾವಯವ, ಲಬ್ಧಪ್ರಣಾಮ, ಘನೀಭವನಕ್ರಮ, ತ್ರಿಗುಣಾತೀತವಾದ, ಈ ಪದಗಳ ಅರ್ಥವನ್ನು ಪೂರ್ಣವಾಗಿ ವಿವರಿಸಿ ಹೇಳು.

V. ಕೆಳಗೆ ಕಾಣಿಸಿದ ಶಬ್ದಗಳು ತಿಳಿಯುವಂತೆ ಟಿಪ್ಪಣಿಗಳನ್ನು ಬರಿ.

೧ ಸಂಯೋಜಕ ಪ್ರಮಾಣ, ೨ ಹರಿತ್ಪೀತಾಮ್ಲ, ೩ ನವರತ್ನ ೪ಳ್ಳಿಗಳು ಯಾವವು? ೪ ಕಿರಣ ವಕ್ರೀಭವನ, ೫ ಭೇರುಂಡನಾಗಿ ತುಂಡಿಸಿದನು, ೬ ಮಾಯೆಯಲ್ಲಿ ಶಂಬರನೋ? ಮಾರೀಚನೋ? ವಿದ್ಯುಜ್ಜಿಹ್ವನೋ? ೭ ಬಾಹ್ಯಸಮಾರ್ಥಗಳನ್ನು ಮನಸ್ಸಿಗೆ ತಿಳಿಸುವ ದ್ವಾರಗಳು ಯಾವವು? ೮ ಬರ್ಹದುಂಬೆ, ೯ ಶ್ವಾಸೋಚ್ಛ್ವಾಸವು ಆಗುವಕ್ರಮ, ೧೦ ಮೂಲ ಕಾವಯವಗಳು ಯಾವವು; ಅವುಗಳವ್ಯಾಪಾರಗಳೇನು?

೯. ಕೆಳಗಿನ ಪದ್ಯಗಳ ಪದ ಬಿಡಿಸಿ ಅನ್ವಯಿಸಿದಂತೆ ಭಾವಾರ್ಥ ಬರೀರಿ.

ಅಸಮಸಾಯಕನೆಂದು ಬಂಣಿಪರ್ನಿನ್ನನಿಂ ।
ದಸಮಸಾಯಕನಾನೊ ನೀನೊನೋಡಿನುತ ಪ್ರೌಸ ।
ಮಸೆಯ ವಿಕ್ರಿಖಂಗಳಂಸುರಿದಂ ಸುಭದ್ರನಾತನ ಕಣೆಗಳಂಖಂಡಿಸಿ ॥
ಮಸುಮತಿಗೆ ವೀರನೀನಸಮಸಾಯಕನಾಡೊ ।
ಪುಸುರೆನಗೆಯು ಸಮಸಾಯಕ ರಾತ್ರಿಂಚರೋಕದೊ ।
ಳ್ಪಸಿಯ ಪೇಡಿನುತ ಕೂರಂಬುಗಳ ನಂಬರಕೆ ತುಂಬಿದಂ ಶಂಬ
ರಾರಿ ॥೧೧॥

ಮೇಲಿನ ಪದ್ಯದಲ್ಲಿ ಇರುವ ಯಾವತ್ತು ಅವ್ಯಯಗಳನ್ನು ಬರಿ. ೧೦ ಕೆಳಗೆ ಗೆರೆಹಾಕಿದ ಶಬ್ದಗಳ ವ್ಯಾಕರಣವಾಡು.

೧೦. ಜಗದಂತರಾತ್ಮ, ಚೂಡಬರ್ಹಶೋಭಿತ, ಚೇತನಸ್ವರೂಪ, ಬಾ
ಯಲಿಗಂಜನೆ, ಬೆಟ್ಟವಂ ಕೊಡೆವಿಡಿದು, ಕಪೀಶ್ವರಂ ಪಲ್ಗರಿದು ಚೀರ್ದ
ಲಿ, ಮಣಿಕರ್ಣಿಕಾಸಲಿಲ, ಖಗೇಶ್ವರ, ತ್ರಿಸರಕೌಸ್ತುಭಕೇಯೂರ
ಹಾರದಿಂ, ಇವುಗಳ ಅರ್ಥವನ್ನು ವಿಶೇಷವಾಗಿ ವಿವರಿಸು.

೧೧. ಟೆಂಟಣಿಸು, ಉದ್ಧತ, ಸವ್ಯಸಾಚಿ, ಪಾವಕ, ತಿಮಿರಸಾಯಕ. ಅಂದರೇನು? ೧೦, ೧೩, ೧೪ನೇ ಸಂಧಿಗಳಲ್ಲಿ ಕೃಷ್ಣನ ವಿಶೇಷಣಗಳೂ ಹೆಸರುಗಳೂ ನಿನಗೆ ಗೊತ್ತಿದ್ದಷ್ಟು ಬರಿ.

ಬಗ್ಗಡಿಯ ವಸೂಲು.*

			ರೂ.	ಅ.	ಪೈ.
ಬಾಗಲಕೋಟ	ತಾಲೂಕ	ಮಾಸ್ತರಿಂಪ	...	೪	೬
ಹಾನಗಲ್ಲ	,,	,,	...	೬	೧೫
ಮುಕ್ಕೇರಿ	,,	,,	...	೬	೪
ಸಗ್ಗಾಂವ	,,	,,	...	೬	೧೫
ಜಮಖಂ	,,	,,	...	೧೮	೧
ಇಂಡಿ	,,	,,	...	೬	೧೦
ಬಾಗೇವಾಡಿ	,,	,,	...	೪	೧೦
ಮುದ್ದೇಬಿಹಾಳ	,,	,,	...	೪	೪
ಹೊನ್ನಾವರ	,,	,,	...	೬	೪
ಇಂಗಳಗಿ ಖಾಸಗಿ ಕಾಳಿ ಮಾಸ್ತರ ಲೇವಣಿಸಿದ್ದಿದ್ದು					
ಜನವೀರಯ್ಯ	,,	,,	...	೦	೧೫
ಸಂಪಗಾವ	,,	,,	...	೧೬	೧೫
ಬಾದಾಮಿ	,,	,,	...	೬	೪
ಹುಬ್ಬಳ್ಳಿರೂರ	,,	,,	...	೬	೬
ಶಿರಸಿ	,,	,,	...	೮	೬

---

* ಇದರೊಳಗೇನಾದರೂ ತಪ್ಪಿ ಬಿದ್ದಿರ ಮಾಸ್ತರ ಬಸಿಲು ಕಾರ್ಯವನ್ನು ತಿಳಿಸಬೇಕು.

CONTD IN
NEXT ROLL

END